ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಜಾನಪದ ಹಬ್ಬಗಳು ಮತ್ತು ಉತ್ಸವಗಳು

ಹನುಮಂತರಾವ್ ಬಿ. ದೊಡ್ಡಮನಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮.

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಜಾನಪದ ಹಬ್ಬಗಳು ಮತ್ತು ಉತ್ಸವಗಳು

ಹನುಮಂತರಾವ್ ಬಿ. ದೊಡ್ಡಮನಿ

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

JAANAPADA HABBAGALU & UTSAVAGALU
by : Sri Hanumantha Rao B. Doddamani
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 64+vi Price : Rs. 25=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

'ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ದತ್ತಿ ನಿಧಿ' ನೆರವಿನಿಂದ ಈ ಕೃತಿ ಪ್ರಕಟವಾಗಿದೆ. ದತ್ತಿ ದಾನಿಗಳಾದ ಶ್ರೀಮಠದ ಪೂಜ್ಯ ಸ್ವಾಮೀಜಿಯವರಿಗೆ ಪ್ರಣಾಮಗಳು. ಈ ಗ್ರಂಥವು ಕನ್ನಡ ಸಾಹಿತ್ಯ ಸಂಶೋಧನಾಸಕ್ತರಿಗೂ, ವಿದ್ಯಾರ್ಥಿಗಳಿಗೂ, ಉಪನ್ಯಾಸಕರಿಗೂ ಅತ್ಯಂತ ಉಪಯುಕ್ತವಾಗಿದೆ. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ.

ಈ ಕೃತಿಯನ್ನು ಸಿದ್ಧಪಡಿಸಿರುವ ಶ್ರೀ ಹನುಮಂತರಾವ್ ಬಿ. ದೊಡ್ಡಮನಿ ಅವರಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಲೇಖಕರ ಮಾತು

ಹೈದ್ರಾಬಾದ್ ಕರ್ನಾಟಕದ ಸಾಹಿತಿಗಳನ್ನು ಕಡೆಗಣಿಸುವುದಿಲ್ಲವೆಂಬ ಮಾತನ್ನು ಸಾಬೀತು ಪಡಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಪದಾಧಿಕಾರಿಗಳಿಗೂ, ತುಂಬು ಹೃದಯದ ಸ್ವಾಗತ. "ಜಾನಪದ ಹಬ್ಬಗಳು ಮತ್ತು ಉತ್ಸವಗಳು" ಎಂಬ ಕೃತಿಯೊಂದು ಪ್ರಕಟವಾಗುತ್ತಲಿರುವುದು ನನಗೆ ಹೆಮ್ಮೆಯ ವಿಷಯು. ಒಬ್ಬ ತಾಯಿಗೆ ತನ್ನ ಕಂದ ಮುಂದೆ ಬರುವುದನ್ನು ವೀಕ್ಷಿಸಿ, ಸಂತೋಷ ಪಡುವ ಆನಂದದ ಸಂಭ್ರಮ ನನಗಾಗಿದೆ.

ಮಾನವನು ತನ್ನ ಸಮಸ್ತ ಬದುಕಿಗೆ ಕಾರಣವಾದ ಧರ್ಮ, ಸಂಪ್ರದಾಯ ಪದ್ಧತಿ, ನಂಬಿ ಜೀವನ ಸಾಗಿಸುತ್ತ ಬಂದಿದ್ದಾನೆ. ತಮ್ಮ ದುಃಖ ಕಷ್ಟ ಮರೆಯುವುದರ ಸಲುವಾಗಿ ಹಬ್ಬ-ಹರಿದಿನಗಳನ್ನು, ಜಾತ್ರೆ ಉತ್ಸವಗಳನ್ನು ವಿವಿಧ ರೀತಿಯಲ್ಲಿ ಆಚರಿಸುತ್ತಾ ಬಂದಿದ್ದಾನೆ. ಆದರೆ ಇತ್ತೀಚಿನ ದಿನಗಳಲ್ಲಿ ಮೂಲ ಹಬ್ಬಗಳ ನಿಜವಾದ ಅರ್ಥ ಉಳಿಯದೆ, ಕೇವಲ ಅದೊಂದು ಅನುಕರಣ ಪ್ರಧಾನವಾದ ಸಂಪ್ರದಾಯವಾಗಿ ಬೆಳೆದು ಬಂದಿದೆ. ಈಗಿನ ಜನರಿಗೆ ಹಬ್ಬ ವೆಂದರೇನು? ಅದನ್ನು ಏತಕ್ಕೆ ಆಚರಿಸುತ್ತಾರೆ? ಅದರ ಮೂಲ ಕಾರಣವೇನು? ಎನ್ನುವುದರ ಕಡೆಗೆ ಗಮನವಿರದಿರುವುದರಿಂದ, ನೈಜವಾದ ಆಚರಣೆಯ ತಿರುಳು ಗೊತ್ತಿಲ್ಲದೆ ಹೋದುದು ಶೋಚನೀಯ. ಇಂದಿನವರೆಗೂ ಎಷ್ಟೋ ಹಬ್ಬಗಳ ನೈಜ ಅರ್ಥ ಅರಿಯಲು ಸಾಧ್ಯವಾಗಿಲ್ಲ.

ಈ ಎಲ್ಲಕ್ಕೂ ಮೂಲಕಾರಣ ಏಕಮಾತ್ರವಾಗುವುದರಲ್ಲಿ ಅನಂತ ಕಾರಣಗಳಿರ ಬಹುದು. ಅವರವರ ಅಭಿರುಚಿ, ಬೆಳೆದು ಬಂದ ಪರಿಸರ, ಆರ್ಥಿಕ ಹಾಗೂ ಬೇರೆ ಪರಿಸ್ಥಿತಿಗಳಾದರೂ ಗಿಡಕ್ಕೊಂದು ಮೂಲಬೇರು ಎನ್ನುವಂತೆ ಅಲ್ಲಲ್ಲಿ ಕೆಲವೊಂದು ಸತ್ವಪೂರ್ಣವಾದ ಹಬ್ಬದ ವೈಶಿಷ್ಟ್ಯ ಆಚರಣೆ ಮಹತ್ವ ಮುಂತಾದವನ್ನು ಕುರಿತಾಗಿ ಜನಪದ ಜೀವನದಲ್ಲಿ ಕೆಲನುಡಿಗಟ್ಟುಗಳು ಬಾಯಿಂದ ಬಾಯಿಗೆ ತಲೆತಲಾಂತರದಿಂದ ಹರಿದುಕೊಂಡು ಬಂದಿದೆ. ಜನಪದರ ಸಂಪ್ರದಾಯಗಳನ್ನು ಅಂಧಶ್ರದ್ಧೆಯಿಂದ ನಂಬಿಕೊಂಡು ಬಂದಿದೆ. ಕಾಲಕಾಲಕ್ಕೆ ಅವುಗಳನ್ನು ಆಚರಿಸಿದ ಜನಾಂಗದ ಪೀಳಿಗೆಗೆ "ತಾತ ತಂದ ಬ್ಯಾಜ" ವೆಂದು ಕೊಡುತ್ತ ಬಂದಿದೆ. ಅಂತೆಯೇ ಈ ಸಂಪ್ರದಾಯದ ಅರ್ಥಗಳು ತಿಳಿಯದಿದ್ದರೂ ನಮಗಿಂದು ಉಳಿದು ಬೆಳೆದು ಬಂದಿವೆ. ಈ ಸಂಪ್ರದಾಯಗಳು ಋತುಮಾನಕ್ಕನುಸಾರವಾಗಿ ಜನಪದರಲ್ಲಿ ಈ ಹಬ್ಬಗಳು ಬೆಳೆದು ಬಂದಿವೆ. ಕೆಲವು ಸಂಪ್ರದಾಯಗಳು ಮಳೆಗಾಲದಲ್ಲಿಯೂ, ಕೆಲವನ್ನು ಚಳಿಗಾಲದಲ್ಲಿಯೂ, ಉಳಿದವುಗಳನ್ನು ಬೇಸಿಗೆಯಲ್ಲಿಯೂ ಜನ ಆಚರಿಸುತ್ತಾರೆ.

ಮಾಗಿಯು ಮುಗಿದು ಬೇಸಿಗೆಯು ಬರಲು ಆಗ ಎಲ್ಲರಿಗೂ ಬಿಡುವ ಸುಗ್ಗಿ ಮುಗಿದುದ್ದರಿಂದ ಜನತೆಯ ಕೈಯಲ್ಲಿ ಸಾಕಷ್ಟು ಹಣವು ಇರುವುದು. ಅದೇ ಸಮಯಕ್ಕೆ ವಸಂತನು ಬರಲು ಸೃಷ್ಟಿಯು ಚಿಗಿತು ಕೊನರಾಗಿ ಬಿಟ್ಟ ಮೊಗ್ಗೆ ಹೂವು, ಮಿಡಿಗಳನ್ನು ಹೊತ್ತು ನಿಲ್ಲುವುದು, ದುಂಬಿಗಳ ಝೇಂಕಾರದಿಂದ ಮೊಗ್ಗೆ ಹೂವುಗಳೊಡನೆ ಆಟವಾಡುವುದು, ಕೋಗಿಲೆಯು ಚಿಗುರು ಮೇದು ಕಂಠ ಪರಿಶುದ್ಧಿಯಾಗಿ ಪಂಚಮಸ್ವರದಲಿ

ಹಾಡುವುದು ಹಕ್ಕಿಗಳು ಹೊಸದುಪ್ಪಳ ಧರಿಸುವವು. ಪಶುಗಳ ಹೊಸ ಮೈ ಮಿಂದು ತುಂಬ ಹತ್ತುವದು. ಸಕಲ ಸೃಷ್ಟಿಯೇ ಪ್ರಾಯ ತುಂಬಿ ಕುಲಕುಲು ನಗುವುದು. ಪ್ರಾಯ ತುಂಬಿ ನಗುವ ಈ ಕಾಡ ಸೊಬಗು ಬೀಡಿಗೆ ಬಾರದಿರುವುದೆ? ಸುಳಿಗಾಳಿಯು ಸುಳಿದ ಹೂಗಂಪಿನೊಡನೆ ತೀರ ತಿದ್ದುವುದು. ಈ ಸೊಬಗನ್ನು ಕಂಡ ಮಾನವನು ನವಚೈತನ್ಯ ತುಂಬಿ ನಿಸರ್ಗದ ಸಡಗರದೊಡನೆ ಆಡಲು ಬಯಸುವನು. ಆಗ ಹುಮ್ಮಸ್ಸಿನಿದಿಂದ ಜನರು ಯುಗಾದಿ, ಕಾರಹುಣ್ಣಿವೆ, ನಾಗರಪಂಚಮಿ, ಗೌರಿಗಣೇಶ, ಮಹಾನವಮಿ, ದೀಪಾವಳಿ, ಎಳ್ಳುಅಮಾವಾಸ್ಯೆ ರಥೋತ್ಸವ ಮೊದಲಾದ ಮೋಜು ಮಜಲಿನ ಸಂಪ್ರದಾಯಗಳನ್ನು ಹಬ್ಬಹರಿದಿನಗಳನ್ನು ಮತ್ತು ಜಾತ್ರೆ ಉತ್ಸವಗಳು ಆಚರಿಸುವರು.

"ಜಾನಪದ ಹಬ್ಬಗಳು ಮತ್ತು ಉತ್ಸವಗಳು" ಈ ಪ್ರಬಂಧ ಬರೆಯಲು ಪ್ರೋತ್ಸಾಹಿಸಿದ ಪೂಜ್ಯ ಗುರುಗಳಾದ ಪ್ರೊ. ವಸಂತ ಕುಷ್ಟಗಿ ನಿವೃತ್ತ ಪ್ರಾಂಶುಪಾಲರು, ಡಾ.ವ್ಹಿ.ಜಿ. ಪೂಜಾರ ಪ್ರಾಧ್ಯಾಪಕರು, ಡಾ. ಬಸವರಾಜ ಪೋಲಿಸ ಪಾಟೀಲ ಪ್ರಾಧ್ಯಾಪಕರಿಗೂ ಪ್ರಣಾಮಗಳು ಸಲ್ಲುತ್ತವೆ. ಈ ಕೃತಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡಾಗ ಮಾಹಿತಿ ನೀಡಿದ ಸರ್ವವಕ್ತಾರರಿಗೂ, ವಿಶೇಷವಾಗಿ ಈ ಕೃತಿ ಪ್ರಕಟಿಸಿ ಪ್ರೋತ್ಸಾಹಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರಿಗೂ, ಕಾರ್ಯಕಾರಿ ಸಮಿತಿಯವರಿಗೂ, ದತ್ತಿನಿಧಿ ಪುಸ್ತಕ ಪ್ರಕಟಣೆಯ ಆಯ್ಕೆ ಸಮಿತಿಯವರಿಗೂ, ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್‌ನ ಸಕಲ ಸಿಬ್ಬಂದಿಯವರಿಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು ಸಲ್ಲಿಸುತ್ತೇನೆ.

ಹನುಮಂತರಾವ್ ಬಿ. ದೊಡ್ಡಮನಿ

ಪರಿವಿಡಿ

(I) ಹಬ್ಬಗಳು :

೧)	ಜಾನಪದ ಹಬ್ಬಗಳು ಮತ್ತು ಉತ್ಸವಗಳು	೧
೨)	ಯುಗಾದಿ	೩
೩)	ಕಾರಹುಣ್ಣಿವೆ	೯
೪)	ನಾಗರ ಪಂಚಮಿ	೧೫
೫)	ವಿಜಯದಶಮಿ	೨೦
೬)	ದೀಪಾವಳಿ	೨೩
೭)	ಸಂಕ್ರಾಂತಿ	೩೨
೮)	ರಮ್‌ಜಾನ್	೩೭
೯)	ಉಪಸಂಹಾರ	೩೯
(II)	ಉತ್ಸವಗಳು :	೪೧
೧)	ಶಿವಯೋಗಿ ಸಿದ್ಧರಾಮೇಶ್ವರ ಜಾತ್ರೋತ್ಸವ ಮಲ್ಲಾಬಾದ	೪೩
೨)	ಶ್ರೀ ಮಲ್ಲಿಕಾರ್ಜುನ ಜಾತ್ರೋತ್ಸವ ಆನೂರ	೪೭
೩)	ಶ್ರೀ ಕಾಳಿಂಗೇಶ್ವರ ಉತ್ಸವ ಇಂಗಳಗಿ (ಟಿ)	೫೦
೪)	ಜೈ ಹನುಮಾನ ಉತ್ಸವ ಮಾತೋಳಿ	೫೫
೫)	ಶ್ರೀ ಚಂದ್ರಗಿರಿ ಉತ್ಸವ ಆನೂರ	೫೭
೬)	ಶ್ರೀ ರೇವಣಸಿದ್ದೇಶ್ವರ ಪಲ್ಲಕ್ಕಿ ಉತ್ಸವ ಮಲ್ಲಾಬಾದ	೫೯
೭)	ಶ್ರೀಲಿಂಗರಾಯ ಪಲ್ಲಕ್ಕಿ ಉತ್ಸವ ಮಲ್ಲಾಬಾದ	೬೧
	ಉಪಸಂಹಾರ	೬೩
	ಅನುಬಂಧ	೬೪

೧. ಜಾನಪದ ಹಬ್ಬಗಳು ಮತ್ತು ಉತ್ಸವಗಳು

ಪೀಠಿಕೆ:- ಅತ್ಯಂತ ಪ್ರಾಚೀನ ಕಾಲದಿಂದಲೂ ಹಬ್ಬ ಹರಿದಿನಗಳನ್ನು ಮಾನವನು ಆಚರಿಸುತ್ತಲೇ ಬರುತ್ತಿದ್ದಾನೆ. ಮೊದಮೊದಲು ಪ್ರಕೃತಿಯ ಶಿಶುವಾಗಿದ್ದ ಮಾನವನು ಪ್ರಕೃತಿಯ ವಿಶಿಷ್ಟ ಶಕ್ತಿಗಳಾದ ಪಂಚಭೂತಗಳನ್ನು ತನ್ನ ಶ್ರೇಯಸ್ಸಿಗಾಗಿ ಭಯಭೀತಿಯಿಂದ ಕೊಂಡಾಡಿದನು. ಪ್ರಕೃತಿಯ ದುಷ್ಟಶಕ್ತಿಗಳೂ, ವಿಸಂಗತ ರೂಪಗಳೂ ಆದ ಮಾರಿ, ಮಸಣಿ, ಭೂತ, ಬೇತಾಳರನ್ನು ತನ್ನನ್ನು ರಕ್ಷಿಸುವಂತೆ ಬೇಡಿದನು. ಇದಕ್ಕಾಗಿ 'ಚಿತಿ'ಯನ್ನರ್ಪಿಸಿದನು. ಉರಗ, ಖಗ, ಮೃಗಾದಿಗಳಿಂದ ಪಾರುಗಾಣಲು ವಿವಿಧ ಪ್ರಯತ್ನ ಮಾಡಿದನು.

ಕಾಲಕ್ರಮೇಣ ಮನುಷ್ಯನ ಬುದ್ಧಿ ಭಾವಗಳ ವಿಶಿಷ್ಟ ಶಕ್ತಿಗಳು ಅವನ ಚೇತನ ಅರಳಿಸಿದಂತೆ ಅನೇಕ ಮಾರ್ಪಾಡುಗಳಾದವು. ಸೃಷ್ಟಿ ಕರ್ತನ ಬಗ್ಗೆ ವಿವಿಧ ರೀತಿಯ ಅರಿವು ಮೂಡಿತು. ವೇದ-ವೇದಾಂತಗಳೂ, ಕಾವ್ಯ ಪುರಾಣಾದಿಗಳೂ 'ಇಹ' ಪರ ಆದಿ ಧರ್ಮ-ಕರ್ಮಗಳ ಸುಂದರ ಸಾಮರಸ್ಯ ತೋರಿದವು. ನಾವು ವಾಸಿಸುತ್ತಿರುವ ಪ್ರಪಂಚ ಧರ್ಮಕ್ಷೇತ್ರವೂ ಹೌದು, ಕರ್ಮಕ್ಷೇತ್ರವೂ ಹೌದು. ಸೃಷ್ಟಿ, ಕ್ಷಿತಿ, ಲಯ, ಸೂತ್ರಗಳಲ್ಲಿಯೂ ಈ ಧರ್ಮ-ಕರ್ಮಗಳ ಕೇಂದ್ರಾ ವರ್ತಗಳು ಗೀತೆಯಲ್ಲಿ ಮೊತ್ತಮೊದಲು ಪ್ರಾರಂಭವಾಗುವ ಶ್ಲೋಕವು ಸಹ ಧರ್ಮಕ್ಷೇತ್ರ, ಕುರುಕ್ಷೇತ್ರ ಎಂಬುದುದನ್ನ ಧ್ವನಿಪೂರ್ಣವಾಗಿ ತಿಳಿಯ ಪಡಿಸುತ್ತದೆನ್ನಬಹುದು.

ಧರ್ಮವು ಜೀವನದ ವಿಶ್ವನಿಯಾಮಕ ಕರ್ಮವು. ಇದರ ವಿಶ್ವಚಾಲಕ, ಭಾರತೀಯರ ದೃಷ್ಟಿಯಲ್ಲಿ ಧರ್ಮವು ಸಕಲ ಮಾನವತೆಯ ಉದ್ಧಾರ ಸೂತ್ರವಾಗಿದೆ. ಇಹವನ್ನು ಗೆಲ್ಲುವ ಪರವನ್ನು ಸಾಧಿಸುವ ಸಾಧನವಾಗಿದೆ. ಗುರಿಮೋಕ್ಷ ಸಾಧನೆಯೇ ಆಗಿದೆಯೆಂದು ಹಿಂದಿನಿಂದಲೂ ಕೇಳಿಬರುತ್ತದೆ. ಧರ್ಮದ ಸ್ವರೂಪ ನಿಜಕ್ಕೂ ಸೂಕ್ಷ್ಮವಾದುದು, ಭಾರತೀಯರಲ್ಲಿ ಮತಗಳನ್ನು ಧರ್ಮಗಳೆಂದೇ ಕರೆಯುವುದುಂಟು. ಒಂದೊಂದು ಧರ್ಮವು ವಿಶ್ವದ ಧರ್ಮದ ಅಂಗವೆ ಆಗಿದೆ. ಜೀವ ಈಶ್ವರ ಸಂಬಂಧ. ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬಣ್ಣಿಸಿದೆ. ಭಾರತೀಯರ ಶಿಲ್ಪ ಸಾಹಿತ್ಯ ಸದಾಚಾರ ಸಂಸ್ಕೃತಿಗಳೆಲ್ಲದರಲ್ಲಿಯೂ ಧರ್ಮದ ಪರಿಶುದ್ಧ ಭಾವನೆಯನ್ನು ಕಾಣಬಹುದು. ಜೀವನದಲ್ಲಿ ಪ್ರತಿಯೊಬ್ಬನೂ ಸಾಧಿಸಬೇಕಾದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಲ್ಲಿ ಧರ್ಮವು ಮೊದಲನೆಯ ಬುನಾದಿಯಂತಿದೆ. ತಂದೆ-ತಾಯಿ, ಬಂಧು-ಬಳಗದವರು ನಮಗೆ ಹೇಗೆ ಅವಶ್ಯಕವೋ ಹಾಗೆಯೇ ಧರ್ಮವೂ ನಮಗೆ ಅವಶ್ಯವಾಗಿದೆ.

ಜಗತ್ತಿಗೆಲ್ಲಾ ಧರ್ಮವೇ ಆಶ್ರಯವೂ ಜನತೆಯ ಅಭ್ಯುದಯಕ್ಕೆ ಕಾರಣವೂ ಆಗಿದೆ. ಧರ್ಮದ ಉದ್ದೇಶ ಅಭ್ಯದಯವೆಂದರೆ ಬೆಳವಣಿಗೆ ಶ್ರೇಯಸ್ಸೆಂದರೆ ಮೋಕ್ಷ ಕುಲಗೋತ್ರಗಳ ಕಟ್ಟುಪಾಡಿನಲ್ಲಿ ಧರ್ಮ ಒಂದು ವೇಳೆ ಸಿಕ್ಕರೆ ಭಕ್ತಿ ಹಿರಿಮೆಗಳು ಅವರವರ ಸಂಕುಚಿತತನ ದರಿದ್ರಮತಿಯಿಂದ ಅನರ್ಥವಾಗುವ ದುಂಟು. ಕುಲಗೋತ್ರಗಳಿರುವದು ಸಾಮಾಜಿಕ ಸಂಘಟನೆಗಾಗಿ. ಧರ್ಮವು ಇರುವದು ಮಾನವಚೇತನ ಹಾಗೂ ವಿಶ್ವಚೇತನದ ಸಾಮರಸ್ಯಕ್ಕಾಗಿ, ಕುಲ-ಗೋತ್ರಗಳ ಕಟ್ಟುಪಾಡಿನಲ್ಲಿ ಧರ್ಮವು ನಿಯಮಿತವಾಗಿದೆ. ಧರ್ಮದ

ಸೂಕ್ಷ್ಮ ತತ್ವದ ದೃಷ್ಟಿಯಿಂದಲೇ ಹಬ್ಬ-ಹರಿದಿನಗಳ ಕುರಿತು ವಿವೇಚಿಸಬೇಕು. ಹಿಂದೂ ಹಬ್ಬ-ಹರಿದಿನಗಳು ವ್ಯಷ್ಟಿ-ಸಮಷ್ಟಿಯ ಸಾಮರಸ್ಯ ಸೂತ್ರಗಳು. ಧರ್ಮ ವ್ರತ ನಿಯಮಗಳು ಹಬ್ಬ-ಹರಿದಿನಗಳಿಗೆ ಆಚಾರ-ವಿಚಾರವೆಂಬೆರಡು ಶ್ರೀ ಮುಖಗಳುಂಟು. ಅವು ಒಂದೇ ನಾಣ್ಯದ ಎರಡು ಮುಖಗಳು. ಆಚಾರದಲ್ಲಿ ನಂಬಿಕೆಗೆ ಪ್ರಾಧಾನ್ಯತೆಯೂ, ವಿಚಾರದಲ್ಲೂ ಧರ್ಮಜಾಗೃತಿಯೂ ಮುಖ್ಯವ್ಯಾದವುಗಳಾಗಿವೆ. ಇವುಗಳಲ್ಲಿ ಎರಡೂ ಸುಸಂಸ್ಕೃತವಾಗಿರಬೇಕು. ಯಾವುದೇ ಒಂದು ತೂಕ ತಪ್ಪಿದರೆ 'ಸಕ್ಕರೆ ಇಲ್ಲದ ಪಾನಕ'ದಂತೆ ಎರಡೂ ಸಪ್ಪೆಯಾಗುತ್ತವೆ. ಆದ್ದರಿಂದ ವಿಚಾರಪೂರ್ವಕವಾದ ಆಚರಣೆ ಮುಖ್ಯ.

ನಂಬಿಕೆಗಳು ಜೀವನಮಾರ್ಗದ ಸಾಧನವಿಶೇಷಗಳು. ನಂಬಿಕೆಯಿಲ್ಲದವನಿಗೆ ಇಹಲೋಕವೂ ಇಲ್ಲ. ಆದ್ದರಿಂದ ಶ್ರೇಷ್ಠ ನಂಬಿಕೆಗಳು ಅಗತ್ಯ. ನಂಬಿಕೆಗಳು ಮಾನವಶಕ್ತಿಗೆ ಬಲವರ್ಧಕಗಳು ವಿಚಾರ ಪ್ರಧಾನವಾದ ಈ ಯುಗದಲ್ಲಿ ಧರ್ಮದ ಪ್ರತಿಯೊಂದು ಸಿದ್ಧಾಂತವು ಬುದ್ಧಿ-ವಿವೇಚನೆಯ ಸತ್ಯ ಪರೀಕ್ಷೆಗಳು ಸಾರ್ವತ್ರಿಕ ಒಪ್ಪಿಗೆಗೂ ಬದ್ಧವಾಗಲೇಬೇಕು. ಇಲ್ಲವೆ ಅರ್ಥವಿಲ್ಲದ ಪೂಜೆ ವ್ಯರ್ಥವಾಗುತ್ತದೆ. 'ವಿಚಾರ ತಿಳುವಳಿಕೆಯ ಕಣ್ಣು' ಎಂದು ಗಾಂಧೀಜಿಯವರು ಹೇಳಿದ್ದಾರೆ. ಪ್ರಾರ್ಥನಾಬಲದಿಂದ ಮನಸ್ಸಿನ ಅಶಾಂತತೆ ಚಂಚಲತೆಗೆ ಕಠಿಣವಾಗುವ ಆಲೋಚನೆಗಳನ್ನು ನಿಗ್ರಹಿಸಿ ಮನಸ್ಸನ್ನು ಸ್ವಂಯಮ ಸ್ಥಿತಿಗೆ ತರಲು ಸಾಧ್ಯ. ಸುಮ್ಮನೆ ಕಣ್ಣು ಮುಚ್ಚಿ ಜಪ-ತಪಗಳು ಮಾಡುವದರಿಂದ ಅಥವಾ ಮನಸ್ಸಿನ ಕ್ರಿಯೆ ಏಕಮುಖವಾಗದೆ ಧ್ಯಾನಿಸುವದರಿಂದ ಏನು ಪ್ರಯೋಜನವಿಲ್ಲ. ಹಬ್ಬ-ಹರಿದಿನಗಳಿಂದಲಾದರೂ ಮನಸ್ಸು ದೈವಸಮ್ಮುಖವಾಗತೊಡಗಿದಷ್ಟು ಅವನ ಸ್ವರೂಪ, ಶಾಶ್ವತವಾದದ್ದನ್ನು ಕುರಿತು ಚಿಂತಿಸುತ್ತದೆ. ಶ್ರೀ ಕುವೆಂಪುರವರು ತಮ್ಮ ಕಾವ್ಯದ ಮೂಲಕ ಹೀಗೆ ಹಾಡಿದ್ದಾರೆ.

'ಅಲ್ಪನಾನು ಎಂದು ಕುಗ್ಗಿ
ಮರುಗಬೇಡವೊ 'ಓ' ಅಲ್ಪವೇ
ಅನಂತದಿಂದ ಗುಣಿಸಿಕೊ
ನೀನು ಅನಂತನಾಗುವೆ"೧* ಅವರ ಕವಿವಾಣಿಯಂತೆ ಯಾರು ಅಲ್ಪನೆಂದು ಕೊರಗಬೇಕಾಗಿಲ್ಲ. ಪ್ರತಿಯೊಬ್ಬನ ಹೃದಯ ಸುಸಂಸ್ಕೃತವಾಗಿ ಪುಟಗೊಂಡು ಅನಂತವಾಗುವ ಶಕ್ತಿ ಪಡೆದಿದೆ. ಹಬ್ಬ-ಹರಿದಿನಗಳು ಜಯಂತೋತ್ಸವವಾಗಿ ಪವಿತ್ರ ಆಚರಣೆಯಿಂದ ಅನಂತತೆಯ ನಿಧಿಯನ್ನೂ ಕಂಡರಸಿ ಅನಂತಶಕ್ತಿ ಪಡೆಯುವಂತವರಾಗಬೇಕು.

"ಹಬ್ಬಗಳು ಮನುಷ್ಯನ ಸುಖ-ದುಃಖಗಳ ಸಮರಸಜೀವನದ ಸಂಕೇತಗಳಾಗಿವೆ. ಇವು ತಪ್ಪದ ಹೊರೆಯ ಪರಿಹರಿಸಿಕೊಳ್ಳುವಲ್ಲಿ ದುಷ್ಟ ಪ್ರವೃತ್ತಿಯಿಂದ ದೂರ ಸರಿದು ಸದ್ವರ್ತನೆಗಿಳಿಯುವಲ್ಲಿ ಸಹಾಯಕವಾಗಿವೆ. ವ್ಯಕ್ತಿಯ ವಿಕಾಸಕ್ಕೆ ಸಾಮಾಜಿಕ ಪರಿವರ್ತನೆಗೆ ಮಾರ್ಗದರ್ಶಕವಾಗಿವೆ. ಒಕ್ಕಟ್ಟು ಹೆಚ್ಚಿಸಲು ಪರಸ್ಪರ ಪ್ರೇಮ ಬೆಳೆಸಲು ಸಹಕಾರ ಮನೋಭಾವ ಕುದುರಿಸಲು ಇವು ತರಬೇತಿ ನೀಡುವಂತಿವೆ."೨*

---

೧. ಭಾರತದ ಹಬ್ಬ ಹರಿದಿನಗಳು ಪ್ರೊ। ಡಿ. ಟಿ. ರಂಗಸ್ವಾಮಿ ಪುಟ-೫
೨. 'ಜಾನಪದ ದೀಪ್ತಿ' ಭಾಗ-೨ ಡಾ. ಎಂ. ಎಸ್. ಲಠ್ಠೆ ಪುಟ-೩೫

೨. ಯುಗಾದಿ

ಚೈತ್ರಶುದ್ಧ ಪಾಡ್ಯಮಿಯಂದು ಯುಗಾದಿ ಹಬ್ಬ ಬರುವದು. ಯುಗಾದಿಯಿಂದ ಹಿಂದೂಧರ್ಮದ ವರ್ಷಾರಂಭವಾಗುತ್ತದೆ. ಬ್ರಹ್ಮನು ಈಜಗತ್ತನ್ನು ಚೈತ್ರಶುದ್ಧ ಪ್ರಥಮ ಸುರ್ಯೋಧಯ ಕಾಲಕ್ಕೆ ಸಮಗ್ರವಾಗಿ ಸೃಷ್ಟಿಸಿದನೆಂದು ಅಂದಿನಿಂದ ಕಾಲಾನುಗುಣವಾಗಿ ಗ್ರಹ, ನಕ್ಷತ್ರ, ಋತು, ಮಾಸ ವರ್ಷಾಧಿಪರನ್ನೂ ನಿಯೋಜಿಸಿದನೆಂದೂ ವ್ರತ ಖಂಡಪುರಾಣಗಳು ಸಾರುತ್ತವೆ. ರಾಮಾಯಣ ಕಾಲಕ್ಕೆ ಮುನ್ನ ಉತ್ತರಾಯಣದಿಂದ ಹೊಸ ವರ್ಷಗಣನೆಗೆ ಪ್ರಾರಂಭವಾಗುತಿದ್ದಿತು.

"ರಾಮಾಯಣದಲ್ಲಿ "ತತ್ತ್ವಶಃ ಸ್ವಾದಕೆ ಮಾಸೇ ಚೈತ್ರನಾವಮಿಶೇ ತಿಥೌ"–ಎಂದು ಶ್ರೀರಾಮನ ಜನನವನ್ನು ವರ್ಣಿಸಿದೆ. ಇದರಿಂದ ಚೈತ್ರವು ಹನ್ನೆರಡನೆಯ ಮಾಸವಾಗಿದ್ದಿತು. ವೈಶಾಖದ ಹೊಸ ವರ್ಷ ಗಣನೆ ನಡೆಯುತ್ತಿದ್ದಿತೆಂದು ತಿಳಿದು ಬರುತ್ತದೆ. ಭಗವದ್ಗೀತೆಯಲ್ಲಿ ಕೃಷ್ಣನು 'ಮಾಸಗಳಲ್ಲಿ ನಾನು ಮಾರ್ಗಶಿರ ಮಾಸದಂತೆ ಇರವೇನು' ಎಂಬ ಉಕ್ತಿಯನ್ನು ಪರಿಶೀಲಿಸಿದರೆ ಬಹಶಃ ಮಾರ್ಗಶಿರದಿಂದ ಹೊಸ ವರ್ಷದ ಗಣನೆ ಇದ್ದಿರಬೇಕು"೩*

ಯುಗಾದಿಯೆಂದರೆ ಹೊಸ ವರ್ಷದ ಮೊದಲ ದಿನ ಎಂದರ್ಥ ಮಾತ್ರವೊಂದರಲ್ಲಿ ವರ್ಷವನ್ನು ರಥಕ್ಕು ಉತ್ತರಾಯನ ದಕ್ಷಿಣಾಯನಗಳು ಅದರ ಚಿತ್ರಗಳಿಗೂ ಹೋಲಿಸಲಾಗಿದೆ ಆದ್ದರಿಂದ ವರ್ಷ ಯುಗವೆಂತಲೂ ಅದರ ಪ್ರಥಮ ದಿನ ಯುಗಾದಿಯೆಂತಲೂ ರೂಢಿಯಲ್ಲಿ ಕರೆಯಲಾಗಿದೆ. ಹೊಸ ವರ್ಷದ ಮೊದಲ ದಿನವೆಂಬುದರ ಆಚರಣೆಯು ಜಗತ್ತಿನ ಎಲ್ಲಾ ಜನಾಂಗಗಳವರಲ್ಲಿಯೂ ಉಂಟು. ಜನವರಿಯ ಮೊದಲ ದಿನ ರೋಮನ್ನರಿಗೆ ಹೊಸ ವರ್ಷದ ಮೊದಲ ದಿನವಾಗಿದೆ. ಇಂದಿಗೂ ಪಾಶ್ಚಿಮಾತ್ಯರೆಲ್ಲರೂ ಇದನ್ನೆ ಅನುಸರಿಸುತ್ತಿದ್ದಾರೆ. ಭಾರತೀಯರಾದ ನಮ್ಮಲ್ಲಿ ಚೈತ್ರಶುಕ್ಲ ಪ್ರತಿಪದೆಯು ಹೊಸವರ್ಷದ ಮೊದಲನೆಯ ದಿನ. ಕರ್ನಾಟಕ ಆಂಧ್ರ ಪ್ರದೇಶ ಮಹಾರಾಷ್ಟ್ರಗಳಲ್ಲಿ ಈ ದಿನ ಆಚರಣೆಯಲ್ಲಿದೆ. ಭಾರತದವರು ವಿಕ್ರಮಶಕದ ಆರಂಭದ ದಿನ ಕಾರ್ತಿಕ ಶುದ್ಧ ಪ್ರಥಮೆಯಂದು 'ಯುಗಾದಿ' ಆಚರಿಸುವರು. ನರ್ಮದಾ-ಕಾವೇರಿ ನದಿಗಳ ನಡುವೆ ರಾಜ್ಯವಾಳುತ್ತಿದ್ದ 'ಶಾಲಿವಾಹನ' ಮಹಾರಾಜನ 'ಶಾಲಿವಾಹನ' ದಿನ. ಆರಂಭವಾದುದು. ಚೈತ್ರಶುದ್ಧ ಪ್ರಥಮದಂದು ದಕ್ಷಿಣ ಭಾರತದವರು ವಿಶೇಷವಾಗಿ ಚಂದ್ರಮಾನ ಪದ್ಧತಿ ಚೈತ್ರಶುದ್ಧ ಪ್ರಥಮದಂದು ಆಚರಿಸುವರು.

"ಚೈತ್ರಮಾಸದ ಪಾಡ್ಯದದಿವಸ ಯುಗಾದಿ ಹಬ್ಬ ಚಂದ್ರಮಾನದಂತೆ ಆಂಧ್ರ ಮತ್ತು ಕರ್ನಾಟಕದಲ್ಲಿ ಆಚರಣೆ, ತಮಿಳುನಾಡಿನಲ್ಲಿ ಸೌರಮಾನ ಲೆಕ್ಕದಲ್ಲಿ ಇದರ ಆಚರಣೆ"*೪ ಜೀವನದಲ್ಲಿ ನೋವು ನಲಿವುಗಳು ಬರುವದು ಸಹಜ ಆದರೆ ಅಂದು ಅವುಗಳೆಲ್ಲ ಮನೆಯ ಬಾಗಿಲುಗಳಿಗೆ ಸ್ವಾಗತ ಚಿನ್ಹೆ ಮೂಡಿಸಿ ಸಂತೋಷದಿ ನಲಿದಾಡುವರು. ದೇವರ ಪೂಜೆಯ

---

೩. ಭಾರತದ ಹಬ್ಬ ಹರಿದಿನಗಳು ಪ್ರೊ। ಡಿ. ಟಿ. ರಂಗಸ್ವಾಮಿ ಪುಟ-೫

೪. ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭- ಪುಟ-೫೨೫

ನಂತರ ಸುಖ-ದುಃಖಗಳೆರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ಸುಖವು ಸುಡುವ ಬಿಸಿಲಿನಂತೆ ದುಃಖವು ಬೀದಿಯ ನೆರಳಿನಂತೆ' ಇರುತ್ತವೆ. ಆದ್ದರಿಂದ ಇವೆರಡು ಸಮಾನವಾಗಿ ಎದುರಿಸುವ ಧೈರ್ಯದಯಪಾಲಿಸೆಂದು ಈಶ್ವರನಲ್ಲಿ ಸ್ಮರಿಸುತ್ತ ಬೇವು-ಬೆಲ್ಲ ಮಿಶ್ರಿತ ಪಾನೀಯ ಸೇವಿಸುತ್ತಾರೆ. "ಇದರಲ್ಲಿ ಭಾರತೀಯರಾದ ನಮ್ಮ ಸಂಪ್ರದಾಯ ಸರಿ. ಪುರೋಹಿತರು ಪಂಚಾಂಗ ಓದುವದು. ಕರ್ನಾಟಕ ಮಹಾರಾಷ್ಟ್ರ, ಗುಜರಾತಿಗಳಲ್ಲಿ ಧ್ವಜ ಹಾರಿಸುತ್ತಾರೆ"೫* ಇದನ್ನು ನೋಡಿದವರಿಗೆ ಸಿಹಿಊಟವಾದಂತೆಯೇ ಸರಿ. ಗುಜರಾತ, ಮಾಹಾರಾಷ್ಟ್ರ ಹಾಗೂ ಕರ್ನಾಟಕದ ಕೆಲವು ಭಾಗಗಳಲ್ಲಿ ಪಾಡ್ಯ, ಗುಡಿ, ಧ್ವಜಕಟ್ಟು ವಿಶಿಷ್ಟ ಸಂಪ್ರದಾಯವೊಂದು ಪ್ರಚಲಿತವಿದೆ. ಉನ್ನತ ಆಶೋತ್ತರಗಳ ಸಂಕೇತವೆಂದು ತೋರುವ 'ಧ್ವಜ' ಹಿಂದೆ ಒಂದು ಧಾರ್ಮಿಕ ಐತಿಹ್ಯ ಅಡಗಿದೆಯೆಂಗು ಹೇಳುತ್ತಾರೆ. ಇದನ್ನು ಇಂದ್ರಧ್ವಜವೆಂದು ಕರೆಯುವರು. ಹಿಂದೆ ಪುರುವಂಶದ ವಸುರಾಜನು ಇಂದ್ರನನ್ನು ಒಲಿಸಿಕೊಂಡು ಯುದ್ಧಗಳಲ್ಲಿ ಜಯಗಳಿಸಿಕೊಡುವ ಪುಷ್ಪಹಾರ ಪಡೆದನಂತೆ. ವಸುರಾಜ ಈ ಪುಷ್ಪಹಾರದೊಡನೆ ತನ್ನನಗರ ಪ್ರವೇಶಿಸಿದ್ದು ಚೈತ್ರ ಶುದ್ಧ ಪ್ರತಿಪದೆಯಂದು ಇಂದ್ರನ ಗೌರವಾರ್ಥ ವಸುರಾಜ ನಗರಿಯಲ್ಲಿ ಅಂದು ನಡೆದ ಉತ್ಸವ ಇಂದು 'ಇಂದ್ರಧ್ವಜ'ದ ಪೂಜೆಯಲ್ಲಿ ಉಳಿದುಕೊಂಡಿವೆ. ದೇವತಾಸ್ತುತಿ ಧ್ವಜಾರೋಹಣ, ನಿಂಬ ಕುಸುಮಭಕ್ಷಣ, ಪಂಚಾಂಗ ಶ್ರವಣ ಈ ಪಂಚಕಾರ್ಯಗಳನ್ನು ವಿಧ್ಯುಕ್ತವಾಗಿ ಈ ಹಬ್ಬದಲ್ಲಿ ನೆರವೇರಿಸ ಬೇಕೆಂದು ಹೇಳುವ ಪ್ರತೀತಿಯಿದೆ.

"ಯುಗಾದಿ ಮನುಷ್ಯನ ಸುಖ-ದುಃಖಗಳ ಸಮರಸ ಜೀವನದ ಸಂಕೇತಗಳಾಗಿವೆ. ಒಕ್ಕಟ್ಟು ಹೆಚ್ಚಿಸಲು ಪರಸ್ಪರ ಪ್ರೇಮ ಬೆಳೆಸಲು ಸಹಕಾರ ಮನೋಭಾವ ಕುದುರಿಸಲು ಇವು ತರಬೇತಿ ನೀಡುವಂತಿವೆ"೬* ಪ್ರೇಮಕ್ಕೆ ಮೀಸಲು ನವಸಂವತ್ಸರವೆಂದು ಬಾಳಿನ ಹರೆಯ ಪರೆಯನ್ನು ಕಳಚಿ ಅಥವಾ ತೆಗೆದು ಗತವರ್ಷದ ಮೃತಪಾಪಸುಟ್ಟು, ನವಸಂವಸ್ತರವನ್ನು ತೆರೆದ ಹೃದಯದೊಡನೆ ಬರಮಾಡಿಕೊಳ್ಳಬೇಕಷ್ಟೇ ಹಿಂದಿನ ಅಪಜಯ ಅಪಮಾನಗಳೀಗ ಮರೆಯಬೇಕು ಜೊತೆಗೆ ಸಂಶಯದ್ವೇಷ, ಅಸೂಯಗಳನ್ನು ಅವುಗಳ ಹುಟ್ಟಿನಲ್ಲಿಯೇ ಹತ್ತಿಕ್ಕಬೇಕು. 'ತೊಲಗಲಿ ದುಃಖ, ತೊಲಗಲಿ, ಮತ್ಸರ' ಅಂದಾಗ ಈ ಸಂವತ್ಸರದ ಪ್ರೇಮಕ್ಕೆ ಮೀಸಲೆಂಬುದು ಸಾರ್ಥಕ ಉಕ್ಕಿಬರುತ್ತದೆ. ಬೆಳವಲದ ಬಯಲುಗಳಲ್ಲಿ ಈಗ ಮಲ್ಲಯ್ಯನ ಉತ್ಸವ ನಡೆಯುವುದು. ಮಲ್ಲಯ್ಯನಿರುವುದು ಪುರದ ಮಂಜಣದಾಗ ಶಿವೋಪಾಸನೆಯ ಒಂದು ವಿಧಾನ ಇದಾಗಿದ್ದು, ಶಿವ ಪರಿವಾರದ ನಂದಿ ಈಗ ವಿಶೇಷ ಪೂಜೆ ಪಡೆಯುವನು.

"ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ"

೫. ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭-ಪು-೫೨೫
೬. 'ಜಾನಪದ ದೀಪ್ತಿ' ಭಾಗ-೨, ಡಾ. ಎಂ. ಎಸ್. ಲಠ್ಠೆ ಪು-೩೭-೯

ಎನ್ನುವ 'ಅಂಬಿಕಾತನಯದತ್ತ'ರ ಕವಿವಾಣಿಯಂತೆ ನಿಸರ್ಗದ ನಿಯಮಕ್ಕೆ ತಕ್ಕಂತೆ ಹಳೇ ವರ್ಷ ಕಳೆದು ಹೊಸ ವರ್ಷ ನಾವು ನೋಡಲೇಬೇಕು. ಆ ವರ್ಷವೇ ನಾವು ಆಚರಿಸುವ ಯುಗಾದಿ ಹಬ್ಬವಾಗಿದೆ.

"ವಕ್ತಾರರ ಹೇಳಿಕೆಯ ಪ್ರಕಾರ ಶಿವನಿಗೆ ಯುಗಾದಿ ಪಾತ್ಯಕೆ ದೇವದೇವತೆಗಳು ಸಮುದ್ರ ಉಲ್ಲಂಘನೆ ಮಾಡುವಾಗ, ಈ ಉಲ್ಲಂಘನೆಗೆ ಆದಿಶೇಷ ಬೇಡವೆಂದರೂ ಕೇಳದ ದೇವತೆಗಳೆದುರಿಗೆ ಆದಿಶೇಷನು ವಿಷಕಾರಿದನು. ಆದಿಶೇಷ ಕಾರಿದ ವಿಷದಿಂದಾಗಿ ಉರಿಹತ್ತಿದ್ದಕ್ಕೆ ದೇವತೆಗಳೆಲ್ಲರೂ ನಿಧನರಾದರು. ಉರಿ ನಿರೀಕ್ಷಿಸಿದ ಶಿವನು ತನ್ನ ಕೈಯೊಳು ಹಿಡಿದು ನಿಂತನು. ಆಗ ಕಷ್ಟತಾಳದ ಶಿವನು 'ನೀಲಕಂಠ' (ಗಂಟ)ಲಲ್ಲಿ ಹಿಡಿದಾಗ ಗಂಗೆ ಪ್ರವೇಶಿಸಿ ಪ್ರಾಣನೀಗುವ ಶಿವನಿಗೆ ಉಳಿಸಿದಳು. ಅಂದಿನಿಂದ ವಿಷವೆಂದರೆ ಕಹಿಯೆಂದು ಭಾವಿಸಿ ಯುಗಾದಿಯಂದು ಕಹಿ ಸೇವಿಸುವ ಪ್ರತೀತಿಯಿದೆಯೆಂದು ಹಿರೇಜೇವರ್ಗಿಯ ವಕ್ತಾರರ ಹೇಳಿಕೆಯಾಗಿದೆ."[೧]

ಅಡಿಗರ ಆಯ್ದ ಕವನಗಳ ಸಾಲಿನಲ್ಲಿ ಯುಗಾದಿ ಹಬ್ಬದ ಕುರಿತು ಕವಿಯ ಕಲ್ಪನೆ ನೋಡೋಣ ಯುಗಾದಿ ಕವನದಲ್ಲಿ ಶ್ರಮಜೀವಿಗಳ ಸಾರ್ಥಕ ಕಾಯಕದ ಕಲ್ಪನೆ ರಮ್ಯವಾಗಿ ಅರಳಿದೆ. ಹೊಸ ನಾಡು ಕಟ್ಟಲು ತರುಣರನ್ನು ಆಹ್ವಾನಿಸಿದ ಕವಿ ಸಲ್ಲದ ಕುಚೇಷ್ಟೆಗಳಿಗೆ ಸಮಯವಿಲ್ಲವೆಂದು ಎಚ್ಚರಿಸುವನು.

"ಬೇಡವೊ ಗಲಾಟೆ ಇನ್ನೂ ಇದೆ ಬೇಕಷ್ಟೆ ಹೊರಲು ಮೂಟೆ;
ಮಾಗಿ ತಲೆಮೆಟ್ಟಿ ಬಂತು ಯುಗಾದಿ; ಹಿಡಿಹಾದಿ
ರಸ್ತೆ ಧೂಳಿಗೆ ನಿನ್ನ ಬೆವರ ಜಳಕ
ಆ ಮೋದಕೇಗ ಪೂರ್ಣವಿರಾಮ"[೨]*

"ಹೊತ್ತು ಹುಟ್ಟುವ ಮೊದಲೆ ಕಟ್ಟು ಸೊಂಟವ
ಕೊರಳ ಗಂಟೆ ಗಣ ಗಣ ಮೊಳಗವೆತ್ತು,
ನೊಗನೇಗಿಲು ಹೊತ್ತು ಗದ್ದೆಗೆ"[೩]*

ಇನ್ನೊಂದು ಕವನದಲ್ಲಿ ಯುಗಾದಿ ಬಂದರೂ,
ಹೋದರೂ ಜನ ಜೀವನ ಯಥಾ ಪ್ರಕಾರ ಕೊಳಚೆಯಲ್ಲಿ
ಕುಪ್ಪಳಿಸುತ್ತ ಬಿದ್ದಿವೆಯೆಂಬ ನಿರಾಶೆ ಹೆಪ್ಪುಗಟ್ಟಿದೆ.
"ಯುಗಯುಗಾದಿಯ ತೆರೆಗಳೇಳುತಿವೆ, ಬೀಳುತಿವೆ,
ಹೊಸ ಹೊಸವು ಪ್ರತಿ ವರುಷವು
ಒಳಗೆ ಅದೊ ಕಾಣುತಿದೆ ಚೆಲುವಿರದ ನಲುವಿರದ
ಕೊಳೆಯ ಬೆಳೆ-ರಂಗ ಮಂದಿರವು"[೪]*

ವಕ್ತಾರರು ೧) ಮಹಾದೇವಪ್ಪ ಈರಪ್ಪ ಸಲಗರ ದೈಹಿಕ ಶಿಕ್ಷಕರು ಶ್ರೀ ಶಾಂತಲಿಂಗೇಶ್ವರ ಪ್ರೌಢಶಾಲೆ ಹಿರೇಜೇವರ್ಗಿ ಅಫಜಲಪುರ ತಾಲ್ಲೂಕು

೨) 'ಅಡಿಗರ ಆಯ್ದಕವನಗಳು'-ಶ್ರೀ ಗೋಪಾಲಕೃಷ್ಣ ಅಡಿಗರ ಪುಟ-೧೫

೩) 'ಅಡಿಗರ ಆಯ್ದಕವನಗಳು'-ಶ್ರೀ ಗೋಪಾಲಕೃಷ್ಣ ಅಡಿಗರ ಪುಟ-೧೫

೪) 'ಅಡಿಗರ ಆಯ್ದಕವನಗಳು'-ಶ್ರೀ ಗೋಪಾಲಕೃಷ್ಣ ಅಡಿಗರ ಪುಟ-೧೫

3

ಕಾಲಚಕ್ರ ಉರುಳುತಿದೆ, ಮನುಷ್ಯರ ಮಧ್ಯದ ಆತ್ಮೀಯ ಸಂಬಂಧದ ಎಳೆಗಳು ಇಂದು ಹಿಂದಿನಷ್ಟು ಗಟ್ಟಿಯಾಗಿಲ್ಲ. ಪರಿಸರದಲ್ಲಿ ಅಸುರಕ್ಷತತೆಯ ವಾತಾವರಣ ಕವಿದಿದೆ. ಮನಗಳ ಮಧ್ಯ ಅಬೇಧ್ಯ ಗೋಡೆಗಳೆದ್ದಿವೆ, ಸ್ವಾರ್ಥರಾಕ್ಷಸ ತಾಳತಪ್ಪಿ ಕುಣಿಯುತ್ತಿದ್ದಾನೆ. ಮಹಾಪುರುಷರನ್ನು ಪೂಜಿಸಿ ಕೈ ತೊಳೆದುಕೊಳ್ಳುವ ನಾವು ಅವರ ಪ್ರಭಾವ ಲಯದಿಂದ ಹೊರಗೆ ನಿಂತಿರುವೆವು.

"ನಿನಗೆ ಬೇವು ನನಗೆ ಬೆಲ್ಲ.
ನವ ಯುಗಾದಿ ಗಾದೆಯು;
ಕೂಡಿ, ಕುಟ್ಟಿ ಸವಿಯಲಿಲ್ಲ.
ಯುಗ ಯುಗಗಳ ಹಾಡಿದು"೧೦*

ಕವಿ ಅಸಹಾಯಕತೆಯ ನಡುವೆಯೂ ಸಮಾಧಾನದ ನಿಮ್ಮ ಸಿರಿ ಶುಭಾಶುಭದ ಫಲಗಳೇನೆ ಇರಲಿ, ಯುಗಾದಿಯನ್ನು ನಾವು ಎದುರುಗೊಳ್ಳಬೇಕಷ್ಟೆ 'ಇಳುಹಿಕೊಳ್ಳಿ ತಲೆಯ ಭಾರ' ಲಾಭ ಹಾನಿ ಮುಂದಿದೆ.

ವೈಭವದ ವಾಕರಿಕೆ ಹೊತ್ತು ಬರುವ ಯುಗಾದಿ ತನ್ನ ಗರ್ಭದಲ್ಲಿ ಹಾಳು ತಿಪ್ಪೆಯ ಕೆಸರನ್ನು ಹೊಂದಿದೆಯೆಂದು ಡಾ. ಸೋಮಶೇಖರ ಇಮ್ರಾಪುರ ಅವರು ಭಾವಿಸುತ್ತಾರೆ. ಹಳೆಯ ರಗಳೆಯನ್ನೇ ಇದು ಮತ್ತೆ ಮತ್ತೆ ಬರುತ್ತಿದೆಯೆಂದು ಕವಿಗೆ ಬೇಸರ.

"ಬೇರೊಬ್ಬರ ಹನ್ನೆರಡೂ ತಿಂಗಳ ಡುಬ್ಬ ಚಪ್ಪರಸಿ
ಪಕ್ಕಡಿ ಎಲುವುಗಳ ತಿಂದು
ಧಿತ್ತೆಂದು ಬಂತು ಮತ್ತೆ ಅದೆ; ಯುಗಾದಿ!
ಹಾಕು, ತಿಪ್ಪೇ ಕೆಸರಿನ ಮೇಲೆ ಗಂಧದೆಣ್ಣೆ!
ಹೊರಗೆ ಎಲ್ಲೆಲ್ಲು ವೈಭವದವಾಕರಿಕೆ
ಸದ್ದಿಲ್ಲದೆ ಗುದ್ದಿ ನಿಂತಿದೆ ಸುದಿನ"೧೧*

ಹೊಸ ವರ್ಷದ ಯುಗಾದಿಯ ದಿನ ಹೊಸ ಬಯಕೆಗಳು ಹೊತ್ತು ನಿಲ್ಲಬೇಕೆಂದು ನಮ್ಮ ಮನ ಹಂಬಲಿಸುತ್ತದೆ. ಇಂದು ಪ್ರಾಪ್ತ ಸುಖ-ದುಃಖ ವರ್ಷದ ಉದ್ದಕ್ಕೂ ಜೊತೆಯಾಗಿ ನಡೆಯುವದೆಂದು ನಂಬಿಕೆ. ನಮ್ಮ ಬದುಕಿನ ಭಾಗ್ಯ ನಿರ್ಣಯಿಸುವವರು ನಾವೇ ಎಂಬ ಆತ್ಮ ವಿಶ್ವಾಸ ನಮ್ಮಲ್ಲಿ ಹುಟ್ಟಬೇಕು. ಸಾಹಸ ಪ್ರಯತ್ನ ಶೀಲತೆ, ಪ್ರಾಮಾಣಿಕತನಗಳನ್ನು ವ್ಯಕ್ತಿಗಳು ತಮ್ಮದಾಗಿಸಿಕೊಂಡಾಗ ಬದುಕು ಬಂಗಾರವಾಗುವದು.

"ಮಾವು ನಾವು ಬೇವು ನಾವು
ನೋವು ನಲಿವು ನಮ್ಮವು
ಹೂವು ನಾವು ಹಸಿರು ನಾವು
ಬೇವುಬೆಲ್ಲ ನಮ್ಮವು"೧೨*

೧೦,೧೧) 'ಬೆಂಕಿ' ಡಾ. ಸೋಮಶೇಖರ ಇಮ್ರಾಪುರ
೧೨) 'ಶಿಲಾಲತೆ'-ಶ್ರೀ ಕೆ. ಎಸ್. ನರಸಿಂಹಸ್ವಾಮಿ

ಹೊಸ ವರ್ಷದ ಕೆಚ್ಚಿಗೆ ಅನುಗುಣವಾಗಿ ವ್ಯಕ್ತಿಗಳು ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. 'ಹೊಸತು ಬಯಕೆ ನಮ್ಮವು' ಯುಗಾದಿ ಹಬ್ಬಗಳಲ್ಲೆಲ್ಲ ಹರುಷದ ದಿಬ್ಬವಾಗಿ, ಉತ್ಸಾಹದ ದಿನವಾಗಿ, ಸ್ಫೂರ್ತಿಯ ಸೆಲೆಯಾಗಿ ವರ್ಷಗಳಿಂದ ನಿಂತಿದೆ. ಹಾಗೆಯೇ ಅದು ಇಂದಿಗೂ ಹಾಗೂ ಮುಂದೆಯೂ ನಿಲ್ಲಬೇಕೆಂದೂ ನಮ್ಮ ಕವಿಗಳ ಬಯಕೆ. ಋತುಚಕ್ರದ ಮುನ್ನಡೆಯಲ್ಲಿ ಬದುಕು ಹೊಸ ಅರಿವನ್ನು ಪಡೆಯಬೇಕು. 'ತಿರು ತಿರುಗಿಯು ಹೊಸತಾಗಿರಿ ಎನುತಿದೆ ಋತುಗಾನ' ಈ ಹಾಡಿಗೆ ಶೃತಿ ಹಿಡಿದಿದೆ. 'ಬ್ರಹ್ಮಾಂಡದ ಮೌನ' ಯುಗಾದಿಯಂದು ಹೊಸ ವರ್ಷ ಪ್ರಾರಂಭವಾಗುವದು. ಹೊಸ ವರುಷದ ಹಾಡು ಇಲ್ಲಿ ನೆನಪಿಗೆ ಬರುತ್ತದೆ.

ಯುಗಾದಿ ಬರುವಾಗ ಕೆಲವೊಂದು ಹುರುಪು ಹುಮ್ಮಸಗಳನ್ನು ಹೊಸದನ್ನಾಗಿ ಹೊಸ ವರುಷದಲ್ಲಿ ತಂದುಕೊಡುತ್ತದೆ. ಇವೆಲ್ಲವುಗಳ ಸಂಧಿದೋಷ ಈ ದಿನದ ಹಿನ್ನೆಲೆಯಲ್ಲಿ ಘಟಿಸುವುದುಂಟು. ಚೈತ್ರ ಶುದ್ಧ ಪ್ರಥಮೆಯಂದು ಸಂಧಿ ದೋಷದ ನಿವಾರಣೆಯ ಸಂತೋಷಯುಳ್ಳವರಾಗಲೂ ನಿತ್ಯನೂತನೆಯಿಂದ ಪ್ರಕೃತಿಯ ಶ್ರೀಯಕಥೆ ಪಡೆದು ಶುಭಶ್ರೇಯಸ್ಸು ಪಡೆಯಲು ಈ ದಿನ 'ಈಶ್ವರ ಪೂಜೆ' ಮತ್ತು 'ಚಂದ್ರಶೀನ' ಅನಿವಾರ್ಯಯಾಗಿದೆ. ಎಲ್ಲ ಜನಾಂಗದವರೂ ಯುಗಾದಿ ಹಬ್ಬವು ಆಚರಿಸಬೇಕು. ಇದು ಸರ್ವರ ಕ್ಷೇಮ ಆಯುರಾರೋಗ್ಯ ಅಭಿವೃದ್ಧಿಗೆ ಬೇಕಾದುದಾಗಿದೆ.

"ಹಾಲು ಅನ್ನವು ಚೆಂದ
ಮೇಲು ಮಾಳಿಗೆ ಚೆಂದ
ಹೋಳಿಗೆ ತುಪ್ಪ ಬಲು ಚಂದ"[೧೩*]

ಎಂದು ಜಾನಪದ ವಿಷಯ ಕುರಿತು ಕವಿಯು ಈ ರೀತಿಯಾಗಿ ಹೋಳಿಗೆ ತುಪ್ಪಗಳ ಬಗ್ಗೆ ವರ್ಣನೆ ಮಾಡಿ ಹೇಳುವನು. ರೈತನು ಕೇವಲ ಮಳೆಯ ಮೇಲೆ ಅವಲಂಬಿಸಿ ರುವದರಿಂದ ಅದರ ಬಗ್ಗೆ ಹಾಡು ಹೀಗೆ ಹಾಡುವನು.

ಹುಬ್ಬೆಯ ಮಳೆಚಂದ
ಹಬ್ಬದ ದಿನ ಚಂದ
ಇಬ್ಬರು ಮಕ್ಕಳು ಬಲುಚೆಂದ"[೧೪*]

ಆ ಹೊಸ ದಿನದಂದು ಶುಭ ಸಂದೇಶಗಳನ್ನು ಬಂಧು ಮಿತ್ರರಿಗೆ ಹೇಳಿಕಳುಹಿಸುವ ರೂಢಿಯುಂಟು.

'ಜೀವನವು ಕ್ಷಣಕಾಲ ಉರಿದು ನಾಶವಾಗುವ ಮೇಣದ ಬತ್ತಿಯ ಅಥವಾ ಸಂಪೂರ್ಣ ಶುಭಾವಕಾಶಗಳ ಇಲ್ಲವೆ ದುಃಖಾವಕಾಶಗಳ ನೆಲೆಯು ಅಲ್ಲ. ಪ್ರಕೃತಿಯ ಕತ್ತಲು ಬೆಳಕಿನ ಚೆಲ್ಲಾಟದಂತೆಯೇ ಸುಖ-ದುಃಖಗಳು ಮಾನವನ ಜೀವನದಲ್ಲಿ ಬಂದು

---

೧೩) ಜಾನಪದ ಸಾಹಿತ್ಯ ಸಮೀಕ್ಷೆ-ಜೀ. ಶಂ. ಪರಮಶಿವಯ್ಯ ಪುಟ-೪೮, ೪೯,೧೫
೧೪) ಜಾನಪದ ಸಾಹಿತ್ಯದಿಂದ ಬಂದಿರುವ ಹಾಡು.

ನುಸುಳಿ ಹೋಗುವದುಂಟು. ಅಂತೆಯೇ ಯುಗಾದಿಯಂದು ಬೇವು-ಬೆಲ್ಲವನ್ನು ಮೆಲ್ಲುವ ರೂಢಿ ಬಂದಿದೆ."[೧೫]*

ರಾಷ್ಟ್ರಕವಿ ಕುವೆಂಪುರವರು ಹೇಳುವ ಕಾವ್ಯ ಹೀಗಿದೆ:- "ಜೀವನವೆಲ್ಲ ಬೇವುಬೆಲ್ಲ ಎರಡೂ ಸವಿವನೇ ಕಲಿಮಲ್ಲ" ಎಂದು ಹೇಳುತ್ತಾರೆ. ಜೀವನದಲ್ಲಿ ಸುಖ-ದುಃಖಗಳೆರಡೂ ಒದಗುತ್ತವೆ. ಇವೆರಡೂ ಸ್ವೀಕರಿಸುವ ಸಾಮರಸ್ಯದ ತಿಳುವಳಿಕೆ ಹಮ್ಮುಬಿಮ್ಮು ಮುರಿಯುವ 'ಮಧುರ' ಮಾರ್ಗ ಕಾಣುವ ದಿನ ಇದಾಗಿದೆ. ನಮ್ಮ ಬಾಳಿನಲ್ಲಿಯೂ ಹೊಸ ಪುಟವನ್ನು ತೆರೆಯುತ್ತೇವೆ. ಹಳೆಯದರ ಆತ್ಮನಿರೀಕ್ಷಣೆ ಮಾಡಿ ಹೊಸ ವರುಷದಲ್ಲಿ ಯಾವ ರೀತಿಯ ಹೆಜ್ಜೆಯನ್ನಿಡಬೇಕೆಂಬುದಕ್ಕೆ ಇದು ಸೂಚನೆಯಾಗಿದೆ.

---

೧೫) 'ಭಾರತದ ಹಬ್ಬಹರಿದಿನಗಳು' ಪ್ರೊ. ಡಿ. ಟಿ. ರಂಗಸ್ವಾಮಿ ಪು-೧೦

೩. ಕಾರಹುಣ್ಣಿವೆ

ಹಿಂದೂಧರ್ಮದಲ್ಲಿ ಸ್ಮರಣಾರ್ಹವಾದ ಘಟನೆಯ ದಿನಗಳು ಪರಮ ಪುಣ್ಯಪ್ರದವಾದುವೆಂಬ ಭಾವನೆ ಹಬ್ಬಹರಿದಿನಗಳಾಗಿವೆ. ವರ್ಷವಿಡೀ ಆಚರಿಸುವ ಎಲ್ಲಾ ಹಬ್ಬಗಳು ಮನುಷ್ಯರದಾದರೆ ಕಾರಹುಣ್ಣಿವೆ ಹಬ್ಬ ದನ-ಕರುಗಳಿಗೆ ವಿಶಿಷ್ಟವಾಗಿರುವ ಹಬ್ಬವಾಗಿದೆ. ವರ್ಷದವರೆಗೂ ದುಡಿದು ದಣಿದು ತನ್ನ ಶ್ರಮವೆಲ್ಲ ವಹಿಸಿ ರೈತನಿಗೆ ಪೈರು ತಂದುಕೊಡುವ ಎತ್ತುಗಳಿಗೆ ಸಂಭ್ರಮದ ಹಬ್ಬ ಇದಾಗಿದೆ. ಅಂದು ಬೆಳಗ್ಗೆ ದನ-ಕರುಗಳಿಗೆ, ಎತ್ತು-ಹೋರಿಗಳಿಗೆ, ತತ್ತಿ-ಇಂಗು ಹಾಗೂ ಬೇವಿನಸೊಪ್ಪಿನಿಂದ ತಯಾರಿಸಿದ ಗೊಟ್ಟಾ ಹಾಕುವರು. ಅನಂತರ ತಮ್ಮ ದನಕರು ಎತ್ತುಗಳಿಗೆ ಹೊಳೆಯೋ ಕೆರೆಯೋ ಅಥವಾ ಬಾವಿಗೊಯ್ದು ಸ್ನಾನಮಾಡಿಸುವರು. ಪ್ರಾಣಿಗಳ ಕೋಡುಗಳಿಗೆ ಅವರಿಗಿಷ್ಟವಾದ ಬಣ್ಣ ಲೇಪಿಸಿ ಕೋಡಿನ ತುದಿಗೆ ಗುಲಾಬಿ ಅಥವಾ ಕೇಸರಿ ವರ್ಣದ ರಿಬ್ಬನಕಟ್ಟುವರು. ಶ್ರೀಮಂತರು ತಮ್ಮ ಎತ್ತಿನ ಕೋಡುಗಳಿಗೆ ಬೆಳ್ಳಿ ತಾಮ್ರದ ಅಣಸು ಹಾಕಿಸುವರು. ವಿವಿಧ ವರ್ಣದಿಂದ ಅಲಂಕೃತವಾದ ಎತ್ತುಗಳ ಕೊರಳಿಗೆ ಗೆಜ್ಜೆಸರ ಮೈಗೆ ಝೂಲಾ ಹಾಕಿದಾಗ ಪೂಜೆಮಾಡಿ ನೈವೇದ್ಯ ಹಿಡಿಯುವರು. ಬಸವಣ್ಣನಿಗೂ ಊಟ ತಿನಿಸಿ ಆಳು ಮಕ್ಕಳು ತಾವು ಊಟ ಮಾಡಿದ ಮೇಲೆ ಊರಿನಲ್ಲಿರುವ ಮಾದಿಗರಿಗೆ ಕರೆಯಿಸಿ ಹಲಗೆ ವಾದ್ಯ ಬಾರಿಸುವಂತೆ ಹೇಳುವರು. ಊರಿನಲ್ಲಿರುವ ಬಜಂತ್ರಿಯವರಿಗೆ ಕರೆಯಿಸಿ ಕರಡಿ ಮಜಲು ಕಲೆಯೊಂದಿಗೆ ಮೆರವಣಿಗೆ ಮಾಡಿಸುವರು.

ಅಲಂಕೃತವಾದ ಎತ್ತುಗಳು ಗೆಜ್ಜೆಸರದ ನಾದಕೆ ಘಲ್ ಘಲ್ ಎನ್ನುತ್ತಿರಲು ಅವು ಸಂತೋಷದಿಂದ ಮೆಲುಕು ಹಾಕುತ್ತ ಓಡುತ್ತವೆ. ತುತ್ತೂರಿ ಊದುತ್ತ ಎತ್ತುಗಳನ್ನು ಮೆರೆಸುವಾಗ ಅವುಗಳ ವಿವಾಹ ನಡೆದಿದೆಯೆಂಬಂತೆ ಭಾಸವಾಗುವದು. ಮಧ್ಯಾಹ್ನ ನಾಲ್ಕು ಘಂಟೆಯಿಂದ ಆರು ಘಂಟೆವರೆಗೆ ಮೆರವಣಿಗೆ ನಡೆಯಿಸಿ, ಸಾಯಂಕಾಲ ಆರೂವರೆ ಸಮಯಕ್ಕೆ ಮೆರವಣಿಗೆಗೆ ಮಂಗಳಹಾಡುವ ನಿಮಿತ್ಯವಾಗಿ ಕರಿ ಹರಿಯುತ್ತಾರೆ. 'ಕರಿ' ಎಂದರೆ ಬೇವಿನ ಸೊಪ್ಪು ನಾರಿನಿಂದ ತಯಾರಿಸಿದ ಹಗ್ಗದಲ್ಲಿ ಕಟ್ಟಿ ಊರಿನ ಅಗಸೆಯ ಎರಡೂ ಬದಿಗೊಬ್ಬೊಬ್ಬರು ಹಗ್ಗ ಹಿಡಿಯುವಂತೆ ಸೂಚಿಸುತ್ತಿದ್ದರು. ಹೀಗೆ ರಸ್ತೆ ಬದಿಗೆ ಕರಿ ಹಿಡಿದು ನಿಂತ ವ್ಯಕ್ತಿಗಳ ಕೈ ಹಗ್ಗ ಹರಿಯಲು ಬಂದಿರುವ ಹೋರಿಗಳಿಗೆ ದೂರದಿಂದ ಓಡಿಸಿಕೊಂಡು ಬರುವರು. ಓಟದಲ್ಲಿ ಮುಂದಿರುವ 'ಹೋರಿ' 'ಕರಿ' ಹಗ್ಗ ಹರಿದು ಊರ ಪ್ರವೇಶಿಸುವದು. 'ಕರಿ' ಹರಿದು ವಿಜೇತವಾದ ಹೋರಿ ಕೆಂಪು ವರ್ಣದ್ದು ಇದ್ದರೆ, ಮುಂಗಾರು ಪೈರು ಚೆನ್ನಾಗಿ ಬೆಳೆಯುವದೆಂತಲೂ ಬಿಳಿವರ್ಣದ ಹೋರಿ ವಿಜೇತವಾದರೆ ಬಿಳಿಜೋಳ ಅಥವಾ ಹಿಂಗಾರಿ ಪೈರುಗಳು ಫಲವತ್ತಾಗಿ ಬೆಳೆಯುತ್ತವೆಂಬ ನಂಬಿಕೆ ಇಂದಿಗೂ ಜನಪದರ ಮನದಾಳದಲ್ಲಿ ನೆಲೆಯೂರಿ ನಿಂತಿದೆ. ಎತ್ತುಗಳು 'ಕರಿ' ಹರಿದು ವಿಜಯ ಹೊಂದಿ ಬಂದಿರುವದನ್ನರಿತ ಹಸುಗಳು ಕಟ್ಟಿದ ಗೂಟದಲ್ಲಿಯೆ ಸ್ವಾಗತ ಬಯಸುತ್ತವೆಂಬ ಭಾವನೆಯಿದೆ.

'ಕರಿ' ಹರಿಯುವ ಕಾರ್ಯಕ್ರಮ ಮುಕ್ತಾಯದ ನಂತರ ಊರಿನ ಪ್ರಮುಖರೆಲ್ಲರು

ಗ್ರಾಮದೇವತೆಯ ಗುಡಿಗೆ ಹೋಗಿ ದೇವಿ ಮೂರ್ತಿಗೆ ಪೂಜೆ ಸಲ್ಲಿಸುವರು ಗುಡಿಯ ಆವರಣದಲ್ಲಿರುವ 'ಏಳು ಕಲ್ಲು' ಪೂಜಿಸುವರು. ಪೂಜೆ ಕಾರ್ಯ ಮುಗಿಯುತ್ತಲೆ ಏಳು ಕಲ್ಲೆಂಬ ಒಂದು ದೊಡ್ಡ ಕಲ್ಲಿನ ಸುತ್ತಲು ಊರಿನ ಏಳು ಜನ ಮುಖಂಡರು ನಿಲ್ಲುವರು. ಎಲ್ಲರು ಒಂದೇ ಬಾರಿಗೆ ತಮ್ಮ ತಮ್ಮ ಬಲಗೈ ಕಲ್ಲಿನ ಬುಡದಲ್ಲಿಟ್ಟು ಒಮ್ಮೆಲೆ ಹುಂ ಎಂದು ಆ ಗುಂಡನ್ನು ಎತ್ತುವರು. ಹೀಗೆ ಆ ಕಲ್ಲುಗುಂಡಿಗೆ ನಮಸ್ಕರಿಸಿ ಮಳೆ-ಬೆಳೆ ಭವಿಷ್ಯ ಕೇಳುವರು. ದವಸ ಧಾನ್ಯಗಳ ಹೆಸರು ಹೇಳಿ ಚೆನ್ನಾಗಿ ಪೈರು ಬರುತ್ತವೆಂದರೆ ಕಲ್ಲು ಚಕ್ಕನೆ ಏಳುತ್ತದೆ. ಬೆಳೆಯು ಸಾಧಾರಣ ಬೆಳೆಯುತ್ತವೆಂದರೆ ಕಲ್ಲು ನೆಲಬಿಟ್ಟು ಮೇಲಕ್ಕೇಳುವುದಿಲ್ಲ. ಅಂದಾಗ ಆ ಪೈರು ಚೆನ್ನಾಗಿ ಬರುವುದಿಲ್ಲವೆಂಬ ನಂಬಿಗೆ ಈಗಲೂ ನಾವು ಜನಪದರಲ್ಲಿ ಕಾಣುತ್ತೇವೆ. ಕರಿ ಹರಿದಿರುವ ಬೇವಿನ ಸೊಪ್ಪು ಅವರವರ ಮನೆಯ ಬೀಜಗಳಲ್ಲಿ ಕೂಡಿಸಿಟ್ಟರೆ ನುಸಿವು ಆಗುವುದಿಲ್ಲ. ಬೆಳೆಯು ಚೆನ್ನಾಗಿ ಬರುತ್ತದೆಂಬ ನಂಬಿಕೆಯಿದೆ. ಕಾರ ಹುಣ್ಣಿಮೆಯು ನಮ್ಮ ಪೂರ್ವಜರಿಗೆ ಮಂಗಲ ಕಾರ್ಯಕ್ರಮಗಳು ಹಮ್ಮಿಕೊಳ್ಳುವುದಕ್ಕೆ ಕೊನೆಯ ದಿನವೆಂತಲೂ ವಾಡಿಕೆಯಿದೆ. ಅಂತೆಯೇ ಕಾರಹುಣ್ಣಿಮೆಯಾದ ಮೇಲೆ ಕತ್ತೆ ಸಹಿತ ಭಾಸಿಂಗ ಕಟ್ಟುವುದಿಲ್ಲ"೨* ವೆಂಬುವ ಜನಪದರ ಗಾದೆ ನಿಜವಾದ ಅರ್ಥಕೊಡುತ್ತದೆ.

ಭಾರತೀಯ ರೈತರಿಗೆ ಸಾಮಾನ್ಯವಾಗಿ ಕಾರಹುಣ್ಣಿವೆಯವರೆಗೆ ಬಿಡುವು ಇರುವುದು. ಕಾರಹುಣ್ಣಿವೆಗೆ ಅಥವಾ ಜೂನ್ ಏಳರಂದು 'ಮೃಗಶಿರಾ' ಮಳೆಯು ಆರಂಭವಾಗಿರುವುದರಿಂದ ರಂಟೆಹೊಡೆದ ಹೊಲಗಳಿಗೆ ಕುಂಟೆ ಹಾಕಿ ಹದಮಾಡಿ ಬೀಜ ಹಾಕುವ ಕಾರ್ಯದಲ್ಲಿ ತಲ್ಲೀನರಾಗಿರುತ್ತಾರೆ. ಹೀಗಾಗಿ ಬಿತ್ತಿದ ಬೀಜಗಳು ನಾಟಿಯಾಗಿ ಪೈರು ಕೋಯಿಲೆಯಾಗಿ ರಾಶಿ ಮನೆಗೆ ಬರುವವರೆಗೂ ಕಾರ್ಯೋನ್ಮುಖರಾಗಿರುವುದರಿಂದ ಅವರಿಗೆ ಬಿಡುವು ಸಿಗುವುದೇ ವಿರಳ.

ಜಾನಪದ ಹಬ್ಬಗಳು ಒಂದೊಂದು ಕಡೆ ಒಂದೊಂದು ರೀತಿಯಾಗಿ ಆಚರಿಸಲ್ಪಡುತ್ತದೆ. ಕಾರಹುಣ್ಣಿವೆ ಒಂದು ದೊಡ್ಡ ಹಬ್ಬ. ಈ ಹಬ್ಬವು ರೈತರಿಗೆ ಸಂತೋಷ ಕೊಡುವ ಮತ್ತು ಮೂಕ ಪ್ರಾಣಿಗಳಿಗೆ ಹರುಷ ಪಡುವ ಹಬ್ಬವೆಂದರೂ ಸೂಕ್ತವೆನಿಸುತ್ತದೆ. ಗೋಮಾತೆಯ ಕುರಿತು ಕನ್ನಡ ಕವಿಗಳೊಬ್ಬರು ಹೀಗೆ ಬರೆದಿದ್ದಾರೆ.

"ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೆ ನೊಸಲಿಗೆ ವಿಭೂತಿಯಾದೆ
ನೀನಾರಿಗಾದೋ ಎಲೆ ಮಾನವ"

ಎಂದು ಗೋಮಾತೆಯ ಮಹತ್ವ ತಮ್ಮ ಕಾವ್ಯದ ಮುಖಾಂತರ ಬಿತ್ತರಿಸಿದ್ದಾರೆ. ಜಾನಪದ ಕ್ಷೇತ್ರ ಕಾರ್ಯ ಕೈಗೊಂಡಾಗ ಕೆಲವು ಹಿರಿಯ ವಕ್ತಾರರು ಕೆಲವು ದಂತಕಥೆಗಳು ಹೀಗೆ ಹೇಳಿದ್ದಾರೆ.

---

೨) ಸಂಗಣ್ಣ ಹಸನಪ್ಪ ಸಕ್ಕರಗಿ ಶಿಕ್ಷಕರು ಬಳೂರಗಿ; ಅಫಜಲಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

"ಕಾರವೆಂಬುವ ರಾಕ್ಷಸ ದೇವ-ದೇವತೆಗಳಿಗೆ ಲೋಕಕಂಟಕನಾಗಿದ್ದನು. ಆತನ ಅಹಂಕಾರ ಮೋಸ ಕಿರುಕುಳ ಅತಿಯಾದಾಗ ಸಹಿಸಲಾಗದ ದೇವತೆಗಳು ಶಿವನ ಸನ್ನಿಧಿಗೆ ದೂರು ಕೊಡುವರು. ಹೇ ದೇವಾ ನಮಗೆ 'ಕಾರವೆಂಬ' ರಾಕ್ಷಸನಿಂದ ತೊಂದರೆ-ಕಿರುಕುಳ ಅತಿಯಾಗಿದೆ. ಈ ಕಷ್ಟದಿಂದ ನಮ್ಮನ್ನು ಪಾರುಮಾಡಬೇಕೆಂದು ಕೇಳಿಕೊಂಡರಂತೆ. ಅವರೆಲ್ಲರ ಮೊರೆಗೆ ಶಿವನೋಲಗ ಕೂಡಿಸಿ 'ಕಾರ' ರಾಕ್ಷಸನನ್ನು ಹೊಡೆಯುವ ಉಪಾಯ ಹೀಗೆ ಅರುಹಿದರೆಂದು ವಾಡಿಕೆಯಿದೆ. ಒಂದು ಕಡಾಯಿಯೊಳು ಹೊನ್ನಿನ ಉಂಗುರು ಹಾಕಿ ಹುಗ್ಗಿ ಮಾಡಿ ಸರ್ವದೇವತೆಗಳಿಗೂ ಪ್ರಸಾದ ವಿತರಿಸಬೇಕು. ಆ ಹುಗ್ಗಿಯಲ್ಲಿಯ ಬಂಗಾರದುಂಗುರು ಯಾರ ತಟ್ಟೆಯಲ್ಲಿ ಬರುವುದೋ ಅವರೇ ಆ ರಾಕ್ಷಸನ ಸಂಹಾರ ಮಾಡಬೇಕೆಂದು ವಿವರಿಸಿದರು. ದೇವತೆಗಳೆಲ್ಲರೂ ಊಟ ಮಾಡುವಾಗ ಆ ಹೊನ್ನಿನ ಉಂಗುರು ನಂದಿದೇವ (ಬಸವಣ್ಣ)ನ ತಟ್ಟೆಯಲ್ಲಿ ಬಿದ್ದಾಗ. ನಂದಿದೇವನು, ಹೋಗಿ 'ಕಾರ' ರಾಕ್ಷಸನಿಗೆ ಸಂಹರಿಸಿ ಜಯಶಾಲಿಯಾದನೆಂದು ಹುಗ್ಗಿ ಕಡಾಯಿಯಲ್ಲಿಯ ಹೊನ್ನಿನ ಉಂಗುರುದಿಂದ ಜಯಸಿದ್ದರಿಂದ 'ಹೊನ್ನುಗ್ಗಿ' ಪ್ರಾರಂಭವಾಯಿತು. ಅಲ್ಲದೆ ಅಳಿಯನಿಗೆ ಮದುವೆ-ಮಂಗಲ ಸಂದರ್ಭದಲ್ಲಿ ಹಾಕುವ ಹೊನ್ನುಂಗುರ ಪ್ರಚಲಿತವಾಯಿತೆಂದು ಭಾವನೆಯಿದೆ."೩*

ಕ್ಷೇತ್ರ ಕಾರ್ಯಕ್ಕಾಗಿ ಒಂದೊಂದು ಊರಿಗೆ ಹೋಗಿ ಬೇರೆ ಬೇರೆ ವಕ್ತಾರರ ಸಹಾಯದಿಂದ ವಿಷಯ ಸಂಗ್ರಹಕ್ಕೆ ತೊಡಗಿದಾಗ ಈ ದಂತಕಥೆ ಕಾರಣದಿಂದಲೇ ಕಾರಹುಣ್ಣಿವೆ ಮುನ್ನಾದಿನ ಬರುವ ದಿನವೇ "ಹೊನ್ನುಗ್ಗಿ" ಎಂದು ಆಚರಣೆಯಲ್ಲಿದೆ. ಜನಸಾಮಾನ್ಯರ ಪ್ರಕಾರ ಮಾನವಜೀವನದಲ್ಲಿ ವಿವಾಹವಾದರೆ, ಜೀವನವಿಡೀ ದುಡಿದು ದಣಿವಾರಿಸಿಕೊಳ್ಳಲು ಒಂದು ದಿನವಾದರೂ ಭಾಸಿಂಗ ಕಟ್ಟಿಕೊಂಡು ಬಸವಣ್ಣ ವಿಶ್ರಾಂತಿ ಪಡೆಯಲೆಂದು ಕಾರಹುಣ್ಣಿವೆ ಆಚರಿಸುವರು ಹಳ್ಳಿಗರ ಒಡನಾಡಿಯಾಗಿ ಕಾಲ ಕಳೆಯುವ ಸಂದರ್ಭಗಳಲ್ಲಿ ಹಲವು ರೀತಿಯ ವಿಷಯಗಳು ಸಂಗ್ರಹಿಸಲಿಕ್ಕೆ ವಕ್ತಾರರ ಪಾತ್ರವು ಬಹುಮುಖ್ಯವಾಗಿದೆ. ಮತ್ತೋರ್ವ ವಕ್ತಾರನ ದಂತಕಥೆ ಹೀಗಿದೆ:-

"ಬಸವಣ್ಣನ ಮದುವೆ ಮಾಡುವುದು ಕಳೆಬಂದಾಗ ಅಥವಾ ಶಿವ-ಪಾರ್ವತಿ ಬಂದಾಗಲೆಂದು ತೀರ್ಮಾನಿಸಿದರು. ಮದುವೆ ಊಟಕ್ಕಾಗಿ ಹುಗ್ಗಿ ಮಾಡುವ ಕಾರ್ಯ ಪಾರ್ವತಿದೇವಿಗೆ ಒಪ್ಪಿಸಲಾಯಿತು. ಹುಗ್ಗಿಯ ಕಡಾಯಿಯಲ್ಲಿ ಹುಟ್ಟು ತಿರುವುವಾಗ ಪಾರ್ವತಿ ಕೈಯಲ್ಲಿರುವ ಹೊನ್ನುಂಗುರು ಹುಗ್ಗಿ ಕಡಾಯಿಯೊಳಗೆ ಬಿದ್ದಿತು. ಆಗ ಆ ಉಂಗುರು ಯಾರು ತೆಗೆಯುತ್ತಾರೆಯೋ ಅವರೆ ಪೃಥ್ವಿಗೆ ಒಡೆಯನಾಗಿ ಮಾನವರನ್ನು ಸಲುಹುತ್ತಾನೆಂದು ಅಭಿಪ್ರಾಯ ಪಟ್ಟರು. ಇದನ್ನರಿತ ದೇವತೆಗಳಾರು ಆಕಡೆ ಸುಳಿಯಲಿಲ್ಲ. ಇದನ್ನರಿತ ನಂದಿದೇವ ಹುಗ್ಗಿಕಡಾಯಿ ಹತ್ತಿರಕ್ಕೆ ಹೋಗಿ ತನ್ನ ಬಲಕೋಡು ಕಡಾಯಿಯೊಳಗೆ ತಿರುವಿದಾಗ ಕೋಡಿನ ತುದಿಗೆ ಸೇರಿಕೊಂಡಿರುವ ಉಂಗುರು ಹೊರಬಂತು. ಈ ಕಾರ್ಯ ಯಾರಿಂದಲಾಗದೇ ಬಸವಣ್ಣನಿಂದಾಯಿತು. ಅಂದಿನಿಂದ ಬಸವಣ್ಣನ ಕೋಡಿನ ಅಣುಸಾಯಿತೆಂದು ನಂಬಿಕೆಯಾಗಿದೆ."೪*

೩) ಭೀಮಶಾಸಾಯಬಣ್ಣಾ ದೊಡ್ಡಮನಿ ಮಲ್ಲಾಬಾದ-ಅಂಚೆ ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ
೪) ತುಕಾರಾಮ ಗವಪ್ಪ ದೊಡ್ಡಮನಿ ನಂದರಗಾ-ಅಂಚೆ, ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

ಜನಪದರು ಓದು ಬರಹ ಬರದಿದ್ದರೂ ವಿಷಯ ಅರಿತುಕೊಳ್ಳುವುದರಲ್ಲಿಯೂ ಜಾಣರಲ್ಲಿ ಜಾಣರೆಂದು ಹೇಳಿದರೆ ತಪ್ಪಾಗದು. ಅವರಾಳ ಹುಡುಕುತ್ತ ಹೋದರೆ ಅವರ ವಿಚಾರದಲ್ಲಡಗಿರುವ ಲಹರಿ ಈ ಹಾಡಿನಲ್ಲಿಯೇ ವ್ಯಕ್ತಪಡಿಸಿದ್ದಾರೆ.

ಕಾರಹುಣ್ಣಿಯ ಹುಟ್ಟು ಕುರಿತು ಹೇಳುವ ಹಾಡೊಂದು ಹೀಗಿದೆ;-

"ಕಾರ ಹುಣ್ಣಿವೆ ಹುಟ್ಟಿದ ಕಾರಣ ಕೇಳರಿ
ಮೊದ್ಲು ಮರ್ತ್ಯ ಲೋಕದಾಗೋ
ನಮಗಿಂತ ಹೆಚ್ಚು ಯಾರಿಲ್ಲಂತ
ಗರ್ವ ಬಂದಿತು ಶಿವಗೋ ।।ಪಲ್ಲ।।
ನಂದಿದೇವನ ಕರೆದು ಮಹದೇವ ಹೇಳತಾನ
ಹುಡುಕುನಂತ ಜಗದಾಗೋ ।
ಮಗ್ಗಿಯ ಮುಟ್ಟ ಕುತನಿ ಧೂಲ್ಹಾಕಿ
ಜಿಗಿದು ಕುಂತಾನ ಮ್ಯಾಗೋ ।
ಇಬ್ಬರು ಕೂಡಿ ಇಳದಾರ ಜೋಡಿ
ಬಂದಾರೋ ಮರ್ತ್ಯದಾಗೋ
ಬಸವಣ್ಣ ಮೊದಲು ಮರ್ತ್ಯಾಕ ಬರುವಾಗsನ
ಭೂಮಿ ನಡಗ್ಯಾವ ಕಾಲಾಗೋ । ।।೧।।
ಪಾದ ಊರ್‍ಯಾನ ಪಾತಾಳತನಕ
ಬಾಲ ಹಿಡಿದು ತಲಿಮ್ಯಾಗೋ।
ಸಿಳ್ಳು ಬಿದ್ದರ ಹೊಳ್ಳಿ ಮಹಾದೇವ
ನೋಡ್ಯಾನ ಆವಾಗೋ।
ನನಕ್ಕಿಂತ ಹೆಚ್ಚು ನೀನೆ
ಬಸವನೆಂದು ತಿರುಗಿ ಬಂದರಾಗೋ।
ಮಡದಿಯ ಮುಂದ ಹೇಳ್ತಾ
ಮಹಾದೇವ ಪಾರ್ವತಿಗಾವಾಗೋ। ।।೨।।
ಸರ್ವಸಾಮಾನು ಹುಗ್ಗಿಯ ಹಂಡೆ
ತಂದು ಇಟ್ಟಾಳೋ ಒಲಿಮ್ಯಾಗೋ।
ಹೊನ್ನುಂಗರೊಂದು ಹೊಳಿತಿತ್ತು ಚಂದ
ಪಾರ್ವತಿ ಕೈಯಾಗೋ।
ಉಕ್ಕುವ ನೀರಿನ್ಯಾಗ ಅಕ್ಕಿ
ಸುರುವುತಾಳ ಪಾರ್ವತಿ ಆವಾಗೋ।
ಹೊನ್ನುಂಗರೊಂದು ಉಚ್ಚಿ ಬಿದ್ದಿತು
ಹುಗ್ಗಿ ಹಂಡೆದೊಳಗೋ। ।।೩।।

ಅಗ್ನಿದೇವತೆ ಅವತಾರ ತಾಳಿದ್ದು
ಜಿಗಿ ಜಿಗಿದೆದ್ದ ಮ್ಯಾಗೋ।
ಹೊನ್ನುಂಗರ ತೆಗೆದವ್ಗ ಬ್ಯಾಜ
ಕೊಡತೀನಂತ ಪಾರ್ವತಿ ಹೇಳ್ಯಾಳಾಗೋ।
ತೆತ್ತಿಸಕೋಟಿ ದೇವತರುಕೂಡಿ
ಬಂದು ನೋಡ್ಯಾರಾವಾಗೋ।
ಹೊನ್ನುಂಗರ ತೆಗೆಯುವುದು ನಮ್ಮಕೈಲೆ
ಆಗಲಾರದು ಹೇಳಂದ್ರೋ ಬಸವಣ್ಣಗೋ। ॥೪॥

ಕಾಲ ಕೆದುರುತ ಬಾಲ ಬೀಸುತ
ಬಸವ ಬಂದನಾಗೋ।
ಅಂಬಗಾಲ ಮುಂಡಿಯನ್ನೂರಿ ಕೋಡ ಹಾಕಿ
ತಿರುವ್ಯಾನ ಹುಗ್ಗಿ ಹಂಡೆದಾಗೋ।
ಕೋಡಿನ ತುದಿಯ ಹತ್ತಿ ಹೊನ್ನುಂಗರ
ಬಂದಿತಪ್ಪೋ ಹೊರಗೋ।
ಅಂದೆ ಹೊನ್ನೂಗ್ಗಿ ಬ್ಯಾಜಕೊಟ್ಟಳೋ
ಪಾರ್ವತಿ ಬಸವಣ್ಣಗೋ। ॥೫॥

ಖರೆ ಬಸವನೆಂದು ಕರಿಯ
ಮೆರಸ್ಯಾನೋ ಮರುದಿನ ಊರಾಗೋ।
ಬಸವಣ್ಣನ ದಯದಿಂದ ಕಾರಹುಣ್ಣಿವೆ
ಹುಟ್ಟಿಬಂತು ಮರ್ತ್ಯಲೋಕದಾಗೋ।
ಉಸ್ತಾದ ಕವಿ ಗೂಳಿ ಕವಿಯ ಮಾಡ್ಯಾನ
ಕಾರಹುಣ್ಣಿವೆ ಹುಟ್ಟಿದ ಭಾಗೋ।
ಮಲ್ಲಾಬಾದ ಹುಡುಗರು ಹಾಡುತೇವರಿ
ನಾವು ಯಲ್ಲಾಲಿಂಗನ ದಯ ನಮಗೋ। ॥೬॥[೧]*

ಡಾ. ದ. ರಾ. ಬೇಂದ್ರೆ ಅವರು ಸಮಾಜದಲ್ಲಿ ಆಗಿ ಹೋಗುವ ಘಟನೆಗಳಲ್ಲಿ ಬಸವಣ್ಣನ ಪಾತ್ರ ಬಹುಮುಖ್ಯವಾಗಿದೆ. ಎಂಬುದನ್ನು ಅವರ ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ-

"ನಂಬಿಗೀಲೆ ದುಡಿತಾನ ಬಸವಣ್ಣ
ನಂಬಿಗ್ಯಾಗೈತಿ ಅವನ ಕಸುವಣ್ಣ
ಕಸುವೀಲೆ ಬೆಳೆಸೋಣ ಎತ್ತುಗೋಳು
ಅವು ಎತ್ತುಗಳಲ್ಲ ನಮ್ಮ ಮುತ್ತುಗಳು.

---

೧) ಮಾಳಪ್ಪ ಲಗಮಣ್ಣ ಪೂಜಾರಿ ಮಲ್ಲಾಬಾದ-ಅಂಚೆ-ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

4

ನಂಬೆಣ್ಣಗ ಒಲಿದಾನ ಶಿವನೋಡೋ
ಇಂಬೀಲೆ ಬೇಡೋದು ಅವಗ ಬೇಡೋ
ಕೊಟ್ಟರ ಕೊಡತಾನೆ ಶಿವಗೆಲ್ಲ
ಕೊಡಾವು ಹೊಟ್ಟಿ ಮಾತು ಶಿವಬಲ್ಲ

ಹೊತ್ತಿಗ್ಯಾಗ ಬರಿ ಶಾಸ್ತ್ರದಾಧಾರ
ಕುತ್ತಿಗೆ ಮ್ಯಾಲೈತಿ ನೊಗಭಾರ
ನಂಬಿಗ್ಯಾಗ ಸೆಲೀತದ ಬಲ ಎಲ್ಲಾ
ನಂಬಿಗೀನ ಸೋರಿದರ ಬಲ ಇಲ್ಲಾ"

ಎಂದು ವರಕವಿ ಬೇಂದ್ರೆಯವರು ಬಸವಣ್ಣನನ್ನು ಕುರಿತು ಬಣ್ಣಿಸಿದ್ದಾರೆ. ಬಸವಣ್ಣನ ಕುರಿತು ಚಿಂತನೆ ಮಾಡಿ ಅವರು ರೈತನ ಮೇಲಿಟ್ಟಿರುವ ನಂಬಿಕೆ ಮೌಲ್ಯವಾಗಿದ್ದರಿಂದಲೇ ಅವು ಎತ್ತುಗಳಲ್ಲ ಎತ್ತುಗಳು ಅಲ್ಲ ನಮ್ಮ ಮುತ್ತುಗಳು ಅರ್ಥವಾಗುತ್ತದೆ. ನಮ್ಮ ಮುತ್ತುಗಳೆಂದು ವರ್ಣಿಸಿದ್ದಾರೆ.

೪. ನಾಗರ ಪಂಚಮಿ

"ನಾಗರ ಪಂಚಮಿ ನಾಡಿಗೆ ದೊಡ್ಡದು
ನಾಡಿನ ನಾರಿಯರು ಕೂಡುವರು। ಗೆಳೆತವ್ವ।
ನಾಗಪ್ಪಗ್ಹಾಲ ಎರೆಯೋರು॥"

ನಾಗರ ಪಂಚಮಿ ನಾಡಿಗೆ ದೊಡ್ಡ ಹಬ್ಬ, ಬಾಲ್ಯದಲ್ಲಿ ಹೆಣ್ಣು ಮಕ್ಕಳು ಒಂದೇ ಊರಲ್ಲಿ ಕೂಡಿ ಆಡಿ ಬೆಳೆದು ದೊಡ್ಡವರಾಗಿ ಒಬ್ಬರನ್ನೊಬ್ಬರು ಅಗಲಿ ಗಂಡನ ಮನೆಗೆ ಹೋಗಿರುವ ಗೆಳತಿಯರ ಮಿಲನವಾಗುವುದು. ತವರಿನ ಹಬ್ಬ ಹುಣ್ಣಿಮೆಗಳಲ್ಲಿ ಮಾತ್ರ ಅಂತೆಯೇ ನಾಡಿಗೆ ದೊಡ್ಡದಾಗಿರುವ ನಾಗರ ಪಂಚಮಿ ಸೋದರ-ಸೋದರಿಯರು ಒಂದೆಡೆ ಸೇರುವ ಪವಿತ್ರ ಹಬ್ಬ ಇದಾಗಿದೆ. ಪ್ರತಿಯೊಬ್ಬ ನಾಗರಿಕ ತಮ್ಮ ಹೆಣ್ಣು ಮಕ್ಕಳಿಗೆ ತಪ್ಪದೆ ತವರಿಗೆ ಕರೆದುಕೊಂಡು ಬರುತ್ತಾರೆ. ಹೀಗೆ ಅಗಲಿದ ಆ ಹೆಣ್ಣು ಮಕ್ಕಳು ಈ ಹಬ್ಬದಲ್ಲಿ ಮತ್ತೆ ಕೂಡಿ ನಲಿದಾಡುತ್ತಾರೆ. ಗಂಡನ ಮನೆಯ ಸುಖ-ದುಃಖಗಳು ಪರಸ್ಪರರು ವಿಚಾರಿಸಿ ಕೊಳ್ಳುತ್ತಾರೆ.

ನಾಗರ ಪಂಚಮಿ ಹಬ್ಬ ಶ್ರಾವಣ ಮಾಸದಲ್ಲಿ ಬರುತ್ತದೆ. ಆಗ ಮೇಘರಾಜನು ಸುತ್ತುವರಿದು ಮಿಂಚು-ಗುಡುಗುಗಳೊಂದಿಗೆ ಭೂಮಿ ತೋಯಿಸಿ ತಣ್ಣಗೆ ಮಾಡಿ ಜನರ-ಮನ ಸೆಳೆಯುತ್ತಾನೆ. ಮೇಘರಾಜ ಎತ್ತ ನೋಡಿದರತ್ತ ಭೂದೇವಿ ಹಸಿರು ಸೀರೆಯನ್ನುಟ್ಟು ರಮಣೀಯವಾದ ನೋಟ ಬೀರುತ್ತಾಳೆ. ಇಂತಹ ಪ್ರಕೃತಿ ರಮ್ಯ ವಾತಾವರಣದಲ್ಲಿ ನಾಗರ ಪಂಚಮಿಯಂದು ಓರಗೆಯ ಗೆಳೆತಿಯರು ಓಣೆಯ ಮಕ್ಕಳು ಹೊಸಬಟ್ಟೆ ಧರಿಸಿ ಅಲಂಕಾರ ಮಾಡಿಕೊಂಡು ಶೃಂಗಾರದಿಂದ ನಲಿಯುತ್ತಾರೆ.

ಶ್ರಾವಣ ಶುಕ್ಲ ಪಂಚಮಿಗೆ 'ನಾಗರಪಂಚಮಿ' ಹಬ್ಬವೆಂದು ಕರೆಯುತ್ತೇವೆ. ನಾಗಪೂಜೆಯೆ ನಾಗರ ಪಂಚಮಿಯ ವೈಶಿಷ್ಟ್ಯವಾಗಿದೆ. ಈ ಹಬ್ಬಕ್ಕೆ ನಾಗದೇವರನ್ನು ಪೂಜಿಸುತ್ತಾರೆ. ಶಿವನಿಗೆ ಕೊರಳಾಭರಣವಾಗಿರುವ, ವಿಷ್ಣುವಿಗೆ ಹಾಸಿಗೆಯಾಗಿರುವ, ಗಣೇಶನ ಟೊಂಕಕ್ಕೆ ಕಟ್ಟಾಗಿರುವ ನಾಗಪ್ಪನ ಬಗ್ಗೆ ಹಿಂದೂಗಳಿಗೆ ಅಪಾರ ಗೌರವವಿದೆ. ಅವುಗಳ ಜೊತೆಗೆ ನಾಗನು ಹೊಲಗಳಲ್ಲಿಯ ಕ್ರಿಮಿಕೀಟ, ಇಲಿಗಳನ್ನು ತಿಂದು ಬೆಳೆರಕ್ಷಣೆ ಮಾಡುವುದರಿಂದ ರೈತನ ಆಪ್ತಮಿತ್ರನಾಗಿದ್ದಾನೆ. ನಾಗಪ್ಪನು ಎದುರಿಗೆ ಬಂದಾಗ ಸಾಯಿಸುವನೆಂಬ ಭಯವಿರುವದು ನಿಜವಾದರೂ ಅದರ ಉಪಯುಕ್ತತೆಗಾಗಿ ಕೃತಜ್ಞತಾ ಭಾವನೆಯಿರುವದೂ ಅಷ್ಟೆ ವಾಸ್ತವವಾದುದಾಗಿದೆ. ಅಂತೆಯೇ ಪ್ರೀತಿ ಸದ್ಭಾವನೆಯಿಂದ ಹಾಲು ಎರೆಯುತ್ತಾರೆ. ಇದು ಹಿಂದೂ ಸಂಸ್ಕೃತಿಯಲ್ಲಿ ಅಡಕವಾಗಿರುವ ಉತ್ತಮ ದೃಷ್ಟಿಕೋನ, ಪರಿಸರ ಪ್ರಜ್ಞೆ, ಪ್ರಕೃತಿಯ ಸಮತೋಲನ ಕಾಪಾಡಲಿರುವ ಕಾಳಜಿ ವ್ಯಕ್ತಪಡಿಸುತ್ತದೆ.

ಈ ಹಬ್ಬದಂದು ನಾಗರಾಜನ ಹುತ್ತಿಗೆ ಹಾಲೆರೆಯುತ್ತಾರೆ ಹುತ್ತಿಲ್ಲದ ಸ್ಥಳಗಳಲ್ಲಿ ಮಣ್ಣಿನಿಂದ ಅಥವಾ ಗೋಧಿ ಕಣಕದಿಂದ ನಾಗನ ಮೂರ್ತಿ ತಯಾರಿಸಿ ಹೂ ಹಾರ

ಹಾಕಿ ವಿವಿಧ ರೀತಿಯ ತಿಂಡಿ ತಿನಿಸುಗಳಿಂದ ತಯಾರಿಸಿದ ಆಹಾರಪದಾರ್ಥಗಳಿಂದ ನೈವೇದ್ಯ ಹಿಡಿಯುತ್ತಾರೆ. ಕಲ್ಲಿನ ಮೂರ್ತಿಯ ಹಾವಿದ್ದರೂ ನಮ್ಮ ಜನರಿಗೆ ದಿಟನಾಗರವೆಂಬದು ತೋಚಿ ಹಾಲು ಎರೆಯುವ ಸಂಪ್ರದಾಯ ಕಾಣುತ್ತೇವೆ. ಕೆಲವೊಂದು ಕಡೆ ಮನೆಗೋಡೆ ಮೇಲೆ ಕಪ್ಪು ಚಿತ್ರ ಬಿಡಿಸುತ್ತಾರೆ. ಅದು ಸರ್ಪದೇವತೆಯ ಚಿಹ್ನೆ ಇದ್ದುದರಿಂದ ಮನೆಯೊಳಗೆ ಸರ್ಪ ಪ್ರವೇಶ ಮಾಡುವದಿಲ್ಲವೆಂಬ ನಂಬಿಕೆ ಪಂಜಾಬಿನಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ ಕನ್ನಡ ನಾಡಿನಲ್ಲೂ ಇದರ ರೂಢಿ ಬಹಳಷ್ಟಿದೆ. ಗಂಡನ ಮನೆಯಲ್ಲಿದ್ದ ಹೆಣ್ಣು ಮಕ್ಕಳಿಗೆ ಕರೆತಂದು ಅವರಿಗೆ ಉಡುಗೋರೆ ಕೊಟ್ಟು ಕಳಿಸುತ್ತಾರೆ. ಈ ಸಂಪ್ರದಾಯ ವೀಕ್ಷಿಸಿದಾಗ ಪ್ರೇಮ-ಪ್ರೀತಿ ವಿಶ್ವಾಸಗಳ ವಾತ್ಸಲ್ಯದ ಕುರುಹುವಾಗಿದೆ.

"ನಾವು ಕಾಣುವಂತೆ ಅನೇಕಾನೇಕ ಸ್ಥಳಗಳಲ್ಲಿ ಗೋಡೆ ಮೇಲೆ ಸರ್ಪಗಳ ಚಿತ್ರತೆಗೆದು ಸರ್ಪದ ಆಕಾರ ಮಾಡಿ ಅವು ಜೀವಂತ ಸರ್ಪಗಳೆಂದೇ ತಿಳಿದು ಹಾಲುಣಿಸುತ್ತಾರೆ. ಉತ್ತರ ಪ್ರದೇಶದ ಕಡೆ ಇದು ಬಳಕೆಯಲ್ಲಿದೆ"[೧೬*] ನಮ್ಮ ಹಿಂದೂ ಸಂಸ್ಕೃತಿಯಲ್ಲಿ ನಾಗರ ಹಾವಿನ ಸ್ಥಾನ ಉನ್ನತವಾಗಿದೆ. ವಿಷ್ಣುವಿನ ಹಾಸಿಗೆಯೊಂದಿಗೆ ಕೊಂಡಿಯಾಗಿರುವ ಸರ್ಪಕ್ಕೆ ಹೆಣ್ಣು ಮಕ್ಕಳು ಸಾಲಾಗಿ ಹಾಲೆರೆಯುವುದು ಒಂದೇ ಜೋಡಿಯಲ್ಲಿ ಹಲವಾರು ಹೆಂಗಳೆಯರು ಪದ್ಯಹಾಡುತ್ತ ಬೇವಿನಮರ-ಆಲದಮರವಿರುವ ಅಶ್ವತ್ಥ ಕಟ್ಟೆಯಲ್ಲಿರುವ ಜೋಡಿ (ನಾಗರ ಹೆಡೆಯ ಹಾವಿಗೆ ಹಾಲುಣಿಸುವ ಸಂಪ್ರದಾಯ) ಎಂದಿನಿಂದಲೂ ನಡೆದುಕೊಂಡು ಬಂದಿದೆ.

ಗುಗ್ಗರಿ ದಿನ:- ಗುಗ್ಗರಿಯ ದಿನವೆಂದರೆ ಜನಪದರ ಸ್ಮೃತಿ ಪಟಲದಲ್ಲಿ ಪ್ರತಿಯೊಬ್ಬರ ಮನೆಯಲ್ಲಿಯೂ ತರತರದ ದವಸಧಾನ್ಯಗಳು ಉಸುಳಿ (ಗುಗ್ಗರಿ) ಮಾಡಿರುವದು ಜ್ಞಾಪಕಕ್ಕೆ ಬರುತ್ತದೆ. ವಿಧವಿಧದ ತಿಂಡಿ ತಿನಿಸು ಮಾಡಿರುವ ಹೆಣ್ಣುಮಕ್ಕಳು ತಮ್ಮ ತಮ್ಮ ಗೆಳತಿಯರೊಂದಿಗೆ ಅವರವರ ಮನೆಗಳಿಗೆ ಹೋಗಿ ಗುಗ್ಗರಿ ಅಳ್ಳು-ಕೊಬ್ಬರಿ ತಿನ್ನುವರು. ಅಳ್ಳು ಎಂದರೆ ಜೋಳದಿಂದ ತಯಾರಿಸಿದ ಪುರಿ ಅಥವಾ ಚುರುಮುರಿ ಅಂದು ಊಟ ಮಾಡುವುದಕ್ಕಿಂತ ಮುಂಚಿತವಾಗಿಯೇ ನಾಗಪ್ಪನಿಗೆ ಕೊಬ್ಬರಿ ಬಟ್ಟಲಿನಲ್ಲಿ ಹಾಲು ತುಪ್ಪದ ಮಿಶ್ರಣ ಕೊಂಡೊಯ್ದು ಹುತ್ತಿಗೆ ಹಾಲೆರೆಯುವ ಸಂಪ್ರದಾಯವೇ ಗುಗ್ಗರಿ ದಿನವೆಂದು ವಾಡಿಕೆಯಾಗಿದೆ.

ಹಬ್ಬದ ದಿನ:

'ನಾಗರ ಪಂಚಮಿ ನಾಡಿಗೆ ದೊಡ್ಡದು' ಎಂಬ ನಾಣ್ಣುಡಿಯಿದೆ. ಹೆಣ್ಣುಮಕ್ಕಳು ತಮ್ಮ ಗೆಳತಿಯರೊಂದಿಗೆ ಜೋಕಾಲಿ ಆಡಲು ಹೋಗುತ್ತಾರೆ. ಎಲ್ಲಾ ಹೆಣ್ಣುಮಕ್ಕಳು ಜೋಕಾಲಿ ಜೀಕುತ್ತಾ ದಿನ ಕಳೆಯುವರು. ಗಂಡು ಮಕ್ಕಳು ಕೂಡ ಹಬ್ಬದ ದಿನ ಜೋಕಾಲಿ ಜೀಕುವರು. ಹೆಣ್ಣು ಮಕ್ಕಳೆಲ್ಲರೂ ತಮ್ಮ ಮನೆಯ ಅನುಭವ ಗೆಳತಿಯರೊಂದಿಗೆ ಕ್ಷೇಮ-ಸಮಾಚಾರದ ಕುಶಲೋಪಾಯಗಳ ಬಗ್ಗೆ ವಿಚಾರಿಸುವರು. ಹೆಣ್ಣುಮಕ್ಕಳಿಗೆ ಇದೊಂದು ದೊಡ್ಡ ಹಬ್ಬವಾಗಿದೆ.

---

೧೬) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ ಪು-೩೬೦

ಈ ಹಬ್ಬದ ಮಾರನೆಯ ದಿನ ಗೆಳತಿಯರೆಲ್ಲರೂ ಒಂದೆಡೆ ಸೇರಿ 'ಕರೆ' ಕಟ್ಟಲು ಹೋಗುವರು. ವನಭೋಜನದಲ್ಲಿ ಸರ್ವರ ತಿಂಡಿ-ತಿನಿಸುಗಳು ಕ್ರೋಢೀಕರಿಸಿ ಒಟ್ಟಿಗೆ ಊಟ ಮಾಡುವರು. ಅದೇ ಸಂದರ್ಭದಲ್ಲಿಯೂ ಉಯ್ಯಾಲೆ ಆಡಿ ತಮ್ಮ ತಮ್ಮ ಮನೆಗೆ ಹೋಗುವ ಸಂಪ್ರದಾಯ ಹಿಂದಿನಿಂದಲೂ ಬಂದಿದೆ.

"ಗುಳ್ಳವ್ವನ ಮಣ್ಣ ತರಲಿಲ್ಲ
ಗುಲಗಂಜಿ ಹಚ್ಚಿ ಆಡಲಿಲ್ಲ
ಸುಳ್ಳೆ ಬಂತಲವ್ವ
ನಾಗರ ಪಂಚಮಿ ಸುವ್ವನಾರಿ"[೧೭*]

"ರೊಟ್ಟಿ ಬುತ್ತಿ ಮಾಡಿಕೊಂಡು
ಎತ್ತಿನ ಮ್ಯಾಲ ಹೇರಿಕೊಂಡು
ಯಾವಾಗ ಕಂಡೇನವ್ವಾ
ತಾಯಿ ಮಾರಿ ಸುವ್ವಾನಾರಿ"[೧೮*]

ಮುಂದೆ ಬರುವ ನಾಗರ ಪಂಚಮಿಗೆ ಸ್ತ್ರೀಯಾದವಳು ತವರಿಗೆ ಹೋಗುವ ಹಂಬಲ ಆತುರತೆ ವ್ಯಕ್ತಪಡಿಸಿ ಹಾಡು ಹೇಳುವ ಗರತಿಯರು ನಾಗರ ಪಂಚಮಿ ಹಿನ್ನೆಲೆ ಕುರಿತು ಹೇಳುವುದಾದರೆ ಮಳೆಗಾಲ ಪ್ರಾರಂಭವಾಗಿ ನಾಗರ ಹಾವುಗಳು ನಮಗೆ ದೇವರಾಗಿ ಉಳಿಯಲೆಂದು ಜನಪದರು ಸರ್ಪಕ್ಕೆ ದೇವರೆಂದು ಪ್ರಾರ್ಥಿಸುವರು. ಇದು 'ನಾಗರ ಪಂಚಮಿ' ಹಬ್ಬದ ಆಚರಣೆಯಾಗಿದೆ.

ಹಬ್ಬದ ಹಿನ್ನೆಲೆ:- ೧) ನಾಗದೇವರ ಆರಾಧನೆಯಿಂದ ಒಬ್ಬ ರಾಜನಿಗೆ ಮೂರು ಜನ ಮಕ್ಕಳಿರುತ್ತಾರೆ. ಅವರಲ್ಲಿ ಇಬ್ಬರಿಗೆ ಮದುವೆ ಆಗಿ ಗಂಡನ ಮನೆಗೆ ಹೋಗಿದ್ದರು. ಒಬ್ಬಳಿಗೆ ಮದುವೆಯಾಗಿರಲಿಲ್ಲ. ಅವಳು ತನ್ನ ಗಂಡನನ್ನು ತಾನೇ ಆಯ್ಕೆ ಮಾಡಿಕೊಳ್ಳುವುದಾಗಿ ಅರಣ್ಯಕ್ಕೆ ಹೋದಳಂತೆ, ಕಾಡ್ಯಾರಣ್ಯದಲ್ಲಿ ಮುನ್ನುಗ್ಗಿದಾಗ, ಅಲ್ಲಿ ಆಲದ ಮರದ ಕೆಳಗೆ ಒಬ್ಬ ಋಷಿಯು ತಪ್ಪಸ್ಸು ಮಾಡುತಿದ್ದನಂತೆ. ಅದೇ ಸಮಯಕ್ಕೆ ಒಂದು ದುಷ್ಟ ರಾಕ್ಷಸು ಋಷಿವರ್ಯರ ಪ್ರಾಣ ತೆಗೆಯಲು ಬರುವುದನ್ನು ನಿರೀಕ್ಷಿಸಿದ ರಾಜನ ಮಗಳು ಆ ರಾಕ್ಷಸನ ಕೊಲೆ ಮಾಡುತ್ತಾಳೆ. ಇದನ್ನರಿತ ಋಷಿಯು ತಾಯಿ ನಿನ್ನ ಉಪಕಾರಕ್ಕೆ ಪ್ರತಿಉಪಕಾರ ಮಾಡುವೆನು ಏನುಬೇಕಾದರೂ ವರಕೇಳೆಂದಾಗ, ಪ್ರತಿಯಾಗಿ ರಾಜನ ಮಗಳು (ರಾಜಕುಮಾರಿ) ತಾವು ನನ್ನನ್ನು ಮದುವೆಯಾಗಬೇಕೆಂದು ವರಕೇಳಿದಳು. ಬ್ರಹ್ಮ ಋಷಿಯು ಒಪ್ಪದಾದಾಗ-ಬಲತ್ಕಾರದಿಂದ ಆತನಿಗೆ ದೇವರ ಗುಡಿಯೊಳಗೆ ಕರೆದೊಯ್ದು ಆತನ ಶಲ್ಯಕ್ಕೂ ತನ್ನ ಸೀರೆಯ ಸೆರಗಿಗೂ ಗಂಟು ಹಾಕಿದಾಗ ಋಷಿಯು ಸರ್ಪವಾಗಿ ಹೋದನಂತೆ, ಆಗ ಆತನ ಹಿಂದೆ ರಾಜಕುಮಾರಿಯೂ ಸರ್ಪವಾಗಿ ಹೋದಳೆಂಬುವ ನಂಬಿಕೆಯಿಂದ ನಾಗರ ಪಂಚಮಿ ಹಬ್ಬ ಆಚರಣೆ ಮಾಡುವರೆಂದು ಕೆಲವು ಜನಪದರ ಅಭಿಪ್ರಾಯ."[೬]

---

೧೭) 'ಜಾನಪದ ಸಮಾಲೋಕನ' ಡಾ|| ಮ. ಗು. ಬಿರಾದಾರ ಪು-೭೫
೧೮) 'ಜಾನಪದ ಸಮಾಲೋಕನ' ಡಾ|| ಮ. ಗು. ಬಿರಾದಾರ ಪು-೭೫
೬) ತುಕಾರಾಮ ಗವಪ್ಪ ದೊಡ್ಡಮನಿ, ನಂದರ್ಗಾ-ಅಂಚೆ ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

೨) "ಒಂದೂರಲ್ಲಿ ವಿಧವೆ ಹೆಣ್ಣುಮಗಳಿಗೆ ಗಂಡು ಮಗನೊಬ್ಬನಿದ್ದನು. ಪ್ರಾಯಕ್ಕೆ ಬಂದಾಗ ಆತನ ಸ್ನೇಹಿತರೆಲ್ಲರೂ ತಮ್ಮ ತಮ್ಮ ಹೆಂಡತಿಯರ ಊರಿಗೆ ಹೋಗುವದಾಗಿ ತಿಳಿಸಿದರು. ಈ ವಿಷಯ ಮನೆಗೆ ಹೋಗಿ ತಾಯಿಗೆ ತಿಳಿಸುವನು. ಇದನ್ನು ಕೇಳಿದ ತಾಯಿ ಹೀಗೆ ಹೇಳುತ್ತಾಳೆ-ಮಗು ನಿನಗೂ ಚಿಕ್ಕಂದಿನಲ್ಲಿಯೇ ಲಗ್ನವಾಗಿದೆ. ಇಲ್ಲಿಯವರೆಗೂ ನೀನು ಯಾವ ಊರಿಗೂ ಹೋದವನಲ್ಲ. ಆದರೀಗ ಕಾಲ ಕೂಡಿದೆ, ನೀನೂ ನಿನ್ನ ಹೆಂಡತಿಯ ಊರಿಗೆ ಹೋಗಲಣಿಯಾಗು. ಆದರೆ ಒಂದು ಮಾತು ಜ್ಞಾಪಕದಲ್ಲಿಟ್ಟುಕೊಳ್ಳು ಈ ಥಾಲು ನಿನ್ನ ಜೊತೆಗಿರಲಿ, ಹೋಗುವ ದಾರಿಯಲ್ಲಿ ಒಂದು ದೊಡ್ಡ ಹುತ್ತವಿದೆ. ಆ ಹುತ್ತಿನಲ್ಲಿ ಬಲಾಢ್ಯವಾದ ಸರ್ಪ ವಾಸಿಸುತ್ತದೆ. ಹೀಗಾಗಿ ಬಲು ಜೋಕೆಯಿಂದ ಹೋಗಬೇಕು ಮಗುವೆಂದು ಬುದ್ಧಿವಾದ ಹೇಳಿದಳಂತೆ. ತಾಯಿ ಆದೇಶದಂತೆ ಹೆಂಡತಿ ಊರ ದಾರಿ ಹಿಡಿದು ಹೋದನು. ದಾರಿ ಮಧ್ಯದಲ್ಲಿ ತಾಯಿ ಹೇಳಿದ ಹುತ್ತವು ದೂರದಿಂದಲೇ ವೀಕ್ಷಿಸಿದನು. ಜಾಗ್ರತದಿಂದ ನಡೆದು ಹುತ್ತದ ಹತ್ತಿರಕ್ಕೆ ಹೋಗಿ ತಾಯಿ ಕೊಟ್ಟ ಥಾಲು ಹುತ್ತದ ಮೇಲೆ ಬೋರಲ್ಹಾಕಿದನು. ಆಗ ಹುತ್ತದಲ್ಲಿರುವ ಸರ್ಪಕ್ಕೆ ಸಿಟ್ಟು ಬಂದು ಮಾತಾಡಿತೆಂಬ ಪ್ರತೀತಿಯಿದೆ. ಅಯ್ಯಾ ನೀನು ಯಾರು ನನಗೆ ಗಾಳಿಬರುವ ಬಾಗಿಲುಗಳಿಕೆ ಮುಚ್ಚಿರುವೆ? ನನ್ನ ಉಸಿರಾಟಕ್ಕೆ ತೊಂದರೆಯಾಗಿದೆ. ಹೀಗೇಕೆ ಹಿಂಸೆ ಕೊಡುವೆ ಹೇಳು? ನೀನು ಹೀಗೆ ಮಾಡಿದರೆ ನಾನು ನಿನ್ನನ್ನು ಕಚ್ಚಿ ಸಾಯಿಸಬೇಕಾಗುತ್ತದೆ. ಸ್ವಾಮಿ ನನ್ನದೊಂದು ಕರಾರಿದೆ. ಅದರ ಪ್ರಕಾರ ನೀನು ನಡೆಯಬೇಕು. ನಾನುಇದೆ ಮೊದಲಬಾರಿಗೆ ನನ್ನ ಹೆಂಡತಿ ಊರಿಗೆ ಹೊರಟಿದ್ದೇನೆ. ಹೆಂಡತಿಯೊಂದಿಗೆ ನಾಲ್ಕಾರು ದಿನಗಳು ಕಳೆದು ನಮ್ಮೂರಿಗೆ ಹಿಂದಿರುಗುವಾಗ ನನ್ನ ಪ್ರಾಣ ತೆಗೆದುಕೊಳ್ಳಬಹುದೆಂದಾಗ ಸರ್ಪವು ಸಮ್ಮತಿಸಿತಂತೆ.

ವಿಧವೆಯ ಮಗನು ಹೆಂಡತಿಯ ಊರಿಗೆ ಹೋಗಿ ಅಲ್ಲಿ ಕೆಲವು ದಿನಗಳವರೆಗಿದ್ದು ತನ್ನೂರಿಗೆ ಹೋಗುವದಾಗಿ ಹೆಂಡತಿಗೆ ಹೇಳಿದ. ಗಂಡನೊಂದಿಗೆ ತಾನು ಬರುವುದಾಗಿ ಹೇಳಿದಳಂತೆ. ಆಗ ದಾರಿಯಲ್ಲಿ ನಡೆದ ಘಟನೆ ಪ್ರಸ್ತಾಪಿಸಿದನು. ಗಂಡನ ಸಮ್ಮತಿಯೊಂದಿಗೆ ಗಂಡನ ಮನೆಗೆ ಹೋಗುವುದಾಗಿ ತನ್ನ ಗೆಳತಿಯರಿಗೂ ತಾಯಿ,ತಂದೆ ಬಂಧು-ಬಳಗದವರಿಗೂ ಹೇಳಿದಳು. ಗಂಡನ ಮನೆಗೆ ಹೋಗುವಾಗ ಒಂದು 'ತಾಮ್ರದ ಕೊಡದಲ್ಲಿ ಹಾಲು-ತುಪ್ಪ ತುಂಬಿಕೊಂಡು ಹೊರಟಳು. ಗಂಡ ಹೇಳಿದ ಸಂಕೇತದ ಸ್ಥಳಕ್ಕೆ ಬಂದು ಹುತ್ತಿನೊಳು ಹಾಲು-ತುಪ್ಪ ಸುರಿದಳು. ಇಂಥ ಸಿಹಿ ಹಾಲು-ತುಪ್ಪ ಗಟಗಟನೆ ಕುಡಿದ ಸರ್ಪವು ಹೀಗೆಂದು ಹಾರೈಸಿತಂತೆ:-ನಿನಗೆ ಮುತ್ತೈದೆತನ ಸ್ಥಿರವಾಗಿರಲಿ, ಆಯುರಾರೋಗ್ಯ ಕೊಟ್ಟು ದೇವರು ನಿಮ್ಮಿಬ್ಬರನ್ನು ಕಾಪಾಡಲೆಂದು ಹಾರೈಸಿತಂತೆ.

ಸ್ವಲ್ಪ ಸಮಯದ ನಂತರ ಅವಳ ಪತಿಬಂದು ನಾಗದೇವನಿಗೆ ತನ್ನಿಚ್ಛೆ ಪೂರೈಸಿಕೊಳ್ಳುವಂತೆ ಕೇಳಿದಾಗ, ಕಚ್ಚಲು ಬಂದ. ಆದಿಶೇಷನೆದುರಿಗೆ ಆತನ ಪತ್ನಿಯು ಸೆರಗೊಡ್ಡಿ ಬೇಡಿಕೊಂಡಳಂತೆ. ಅಯ್ಯೋ ದೇವರೇ ಕ್ಷಣಾರ್ಧ ಸಮಯದ ಹಿಂದೆ ನನ್ನ ಮುತ್ತೈದೆತನ ಸ್ಥಿರವಾಗಲೆಂದು ಹಾರೈಸಿದ್ದೀರಿ. ಆದರೀಗ ನನ್ನ ಪತಿಯ ಪ್ರಾಣ

ತೆಗೆಯಲಣಿಯಾಗಿದ್ದೀರಿ. ತಮ್ಮ ಉದ್ದೇಶ ಸರಿಯೆ? ದೇವಾ ಎಂದು ಕೇಳಿದಳಂತೆ.- ಆ ಪುಣ್ಯವಂತಳ ಪ್ರಶ್ನೆಗೆ ಗಾಬರಿಯಾಗಿ ಹಿಂದೆ ಸರಿದು, ನಾಗದೇವನು ನೋಡು ತಂಗಿ ಈ ದುಷ್ಟ ವ್ಯಕ್ತಿ ನಿನ್ನ ಗಂಡನೆಂಬುದು ತಿಳಿದಿರಲಿಲ್ಲ. ನೀನು ಮಾಡಿದ ಪುಣ್ಯದ ಫಲದಿಂದ ಈತನ ಪ್ರಾಣದಾನ ಮಾಡುವೆನು ಇನ್ನು ನಿನ್ನ ಪತಿಯೊಂದಿಗೆ ದೀರ್ಘ ಕಾಲ ಸುಖವಾಗಿ ಬಾಳೆಂದು ಆಶೀರ್ವದಿಸಿದರಿಂದ ಹಾಲೆರಿಯುವ ಸಂಪ್ರದಾಯ ಬಂತೆಂದು ಹಿರಿಯರು ಹೇಳುವರು. ಈ ಹಿನ್ನೆಲೆಯಲ್ಲಿಯೇ ಇಂದಿಗೂ ಗಂಡನ ಮನೆಗೆ ಹೋಗಿರುವ ಹೆಣ್ಣು ಮಕ್ಕಳು, ತವರಿಗೆ ಹೋಗಿ ತವರ ಮನೆಯಿಂದಲೇ ಹಾಲು-ತುಪ್ಪ ಮಿಶ್ರಿತಮಾಡಿ ಹುತ್ತಿನಲ್ಲಿರುವ ನಾಗಯ್ಯನಿಗೆ ಎರೆಯುವ ಸಂಪ್ರದಾಯ ಅಂದಿನಿಂದ ಇಂದಿಗೂ ಜೀವಂತವಾಗಿ ಬೆಳೆದಿರುವ ಪ್ರತೀತಿ ಇದಾಗಿದೆ. ಈ ದಂತ ಕಥೆಗಳನ್ನು ಮಾರ್ಮಿಕವಾಗಿ ವಿವರಿಸುವ ಜನಪದರು ನಾಗರ ಪಂಚಮಿಯ ಹಬ್ಬದ ಆಚರಣೆಯ ಸಂಪ್ರದಾಯ ಬೆಳೆದು ಬಂದ ಬಗೆಯು ಈ ಮೇಲಿನಂತೆ ಬಿತ್ತರಿಸುತ್ತಾರೆ."[೭]*

---

೭) ಭೀಮಶಾ ಸಾಯಬಣ್ಣ ದೊಡ್ಡಮನಿ ಮಲ್ಲಾಬಾದ-ಅಂಚೆ, ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

೫. ವಿಜಯದಶಮಿ

ವಿಜಯ ದಶಮಿ ಹಬ್ಬ ಹಿಂದೂಗಳ ಪವಿತ್ರ ಹಬ್ಬವಾಗಿದೆ. ಆಶ್ವಿಜಮಾಸದ ಶುಕ್ಲಪಕ್ಷ ಪ್ರತಿಪದೆಯಂದು ಮೊದಲಾಗಿ ದಸೆರೆ ಸೇರಿ ೧೦ ದಿನಗಳು ನಮ್ಮಲ್ಲಿ ನವರಾತ್ರಿ ಯೆಂದು ಆಚರಿಸಲ್ಪಡುತ್ತದೆ. ಕೊನೆಯ ದಿನವಾದ ದಶಮಿಯಂದು ದಸರೆ ಅಥವಾ ವಿಜಯದಶಮಿಯೆಂದು ಆಚರಿಸಿ ಬನ್ನಿ ಮುಡಿಯುತ್ತಾರೆ.

ವಿಜಯದಶಮಿ ಮುಖ್ಯವಾಗಿ ಶಕ್ತಿ ಪೂಜೆಯ ಹಬ್ಬ. ಶಕ್ತಿಯ ವಿವಿಧರೂಪಗಳಾದ ದುರ್ಗಾಮಹಾಲಕ್ಷ್ಮೀ, ಮಹಾಕಾಳಿ, ಮಹಾಸರಸ್ವತಿ, ಮಹೇಶ್ವರಿ ಮುಂತಾದ ವಿವಿಧ ಅವತಾರಗಳನ್ನು ಪೂಜಿಸುತ್ತಾರೆ. ಪ್ರತಿಪದೆಯೆಂದು ಧಾನ್ಯಾದಿಗಳಿಂದ ಘಟಾಸ್ಥಾಪನೆಮಾಡಿ ನವರಾತ್ರಿ ಘಟ್ಟವನ್ನಿಡುತ್ತಾರೆ. ವಿಜಯನಗರ ಅರಸರ ಕಾಲದಲ್ಲಿ ಮಹಾನವಮಿಯಂದು ಆಯುಧ ಪೂಜೆಗಳು ನಡೆಯುತಿದ್ದುದಲ್ಲದೆ, ಇಂದಿಗೂ ನಾವು ಹಂಪೆಯಲ್ಲಿ ನೋಡಬಹುದಾದ ಮಹಾನವಮಿಯ ಹಬ್ಬದಂದು ಅನೇಕ ವಿಧವಾದ ಆಟಗಳು ಮನರಂಜನೆಯ ಕಾರ್ಯಕ್ರಮಗಳು ಜರಗುತ್ತಿದ್ದವೆಂದೂ ಅವುಗಳಲ್ಲಿ ಭಾಗವಹಿಸಿದ ಜಟ್ಟಿಗಳಿಗೆ ಕಲಾವಿದರಿಗೆ ಬಹುಮಾನ ವಿತರಣೆ ನಡೆಯುತ್ತಿದ್ದಿತೆಂದೂ, ಶಾಸನಗಳಿಂದ ಪ್ರವಾಸಿಕರ ವರದಿಗಳಿಂದ ತಿಳಿಯುತ್ತದೆ. ವಿಜಯನಗರದ ಪರಂಪರೆ ಮೈಸೂರಿನ ಅರಮನೆಯಲ್ಲಿ ಮಹಾರಾಜರು ನಡೆಸಿಕೊಂಡು ಬರುತ್ತಿದ್ದರು. ವಿಜಯದಶಮಿಯ ದಿನದಂದು ಜಂಬುಸವಾರಿಯು ಹೊರಟು ಬನ್ನಿಮಂಟಪಕ್ಕೆ ಬಂದು ಶಮಿವೃಕ್ಷದ ಪೂಜೆ ಮಾಡಿ ಬನ್ನಿ ಮುಡಿಯುತ್ತಿದ್ದರು. ಈ ಉತ್ಸವ ಲಕ್ಷಾಂತರ ಜನರು ವೀಕ್ಷಿಸುತ್ತಿದ್ದರು. ಪರದೇಶಗಳಿಂದಲೂ ಯಾತ್ರಿಕರು ಈ ಸಮಾರಂಭ ನೋಡಲಿಕ್ಕೆಂದೇ ಬರುವರು. ಇದರಿಂದಾಗಿ ಪರದೇಶದ ಜನರನ್ನು ಆಕರ್ಷಿಸಲು ಇದೊಂದು ಸಾಧನವಾಗಿತ್ತು.

ದಕ್ಷಿಣ ಭಾರತೀಯರಿಗೆ ದುರ್ಗೆಯು ಮಹಿಷಾಸೂರನನ್ನು ಸಂಹರಿಸುದಾದರೆ ಉತ್ತರ ಭಾರತೀಯರಿಗೆ ಶ್ರೀರಾಮನು ಅಂದೇ ದಶಕಂಠ ರಾಕ್ಷಸನಾದ ರಾವಣನನ್ನು ಸಂಹರಿಸಿ ವಿಜಯಿಯಾದ ದಿನ. ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸ ಮುಗಿಸಿ ಶಮಿಗಿಡದಲ್ಲಿ ಅಡಗಿಸಿಟ್ಟಿದ್ದು ಶಸ್ತ್ರಾಗಳನ್ನು ಪೂಜಿಸಿ ಲೋಕಕ್ಕೆ ತಮ್ಮ ನಿಜರೂಪ ತೋರಿಸಿದ ದಿನವಾಗಿದೆ. ಅಂದು ಸಂತೋಷದ ಸಂಕೇತವಾಗಿ ಪಾಂಡವರು ಬಂಗಾರ ಹಂಚಿರಬಹುದು. ಆ ಸವಿನೆನಪಿಗಾಗಿಯೇ ಇಂದೂ ಸಹ ಬಂಗಾರದ ಭಾವನೆಯಲ್ಲಿ 'ಬನ್ನಿ' ಆಪ್ತೇಷ್ಟರಿಗೆ ಹಂಚುವ ಪರಿಪಾಠವಿದೆ. ವಿಜಯದಶಮಿಯು ಶುಭದಿನವಾಗಿದ್ದು ಅಂದಿನ ದಿನ ಎಂತಹ ಮಹತ್ವದ ಕಾರ್ಯ ಕೈಗೊಂಡರೂ ಜಯ ಕಟ್ಟಿಟ್ಟಿದ್ದು ಎಂದು ನಂಬುತ್ತಾರೆ. ರಾವಣನಿಗೆ ಸೋಲಿಸಿ ಜಯಿಸಿದ ಶ್ರೀರಾಮನು ಆಶ್ವಯುಜ ಶುದ್ಧ ದಶಮಿಯ ದಿನ ತನ್ನ ರಾಜಧಾನಿಯಾದ ಅಯೋಧ್ಯ ಎಡೆಗೆ ಪ್ರಯಾಣ ಮಾಡಿದ್ದರಿಂದ ಆ ದಿನವನ್ನು 'ದಶಹರಾ' ಎಂಬುದಾಗಿ ಕರೆಯಲಾಗುತ್ತದೆ. ನವರಾತ್ರಿಯ ಆರಂಭದಿಂದ ರಾಮಲೀಲೆ ಅಥವಾ ಶ್ರೀರಾಮನ ಕಥೆಗೆ ಸಂಬಂಧ ಪಟ್ಟಂತೆ ಗ್ರಾಮಗಳಲ್ಲಿ ನಾಟಕ ಅಭಿನಯಿಸಲಾಗುತ್ತದೆ. 'ದಶಹರಾ' ದಿನದಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಾಗದದಿಂದ ರಾವಣ ಮತ್ತು ಆತನ ತಮ್ಮ ಕುಂಭಕರ್ಣ

ಹಾಗೂ ಮಗ ಮೇಘನಾಥನ (ಇಂದ್ರಜೀತ)ನ ವಿಗ್ರಹಗಳು ಮಾಡಿ ನಿಲ್ಲಿಸಿ ಸಂಜೆ ನಿಗದಿತ ಸಮಯದಲ್ಲಿ ದುಷ್ಟರ ಸಂಹಾರದ ದ್ಯೋತಕವಾಗಿ ಅವುಗಳಿಗೆ ಬೆಂಕಿ ಹಚ್ಚಿ ಸುಡಲಾಗುತ್ತದೆ. ವಿಜಯದಶಮಿ ಹಬ್ಬ ವಿಜಯ ಸೂಚಿಸುವ ಹಬ್ಬವಾಗಿದೆ. ಜನಪದರು ಮಾಡುವ ಯಾವುದೇ ಕಾರ್ಯವಿದ್ದರೂ ಅದು ವಿಜಯ ವಾಗಲೆಂದು ವಿಜಯದಶಮಿ ದಿನದಂದು ಮೂಹರ್ತ ನೋಡುವರು. ನವಗೃಹನಿರ್ಮಾಣಕ್ಕಾಗಲಿ, ಮಕ್ಕಳಿಗೆ ಅಕ್ಷರ ಜ್ಞಾನ ಕೊಡಿಸಲು ಈ ದಿನವೇನೋಡುತ್ತಾರೆ. ಇದರರ್ಥವಿಷ್ಟೆ ತಾವು ಕೈಗೊಂಡಿರುವ ಕಾರ್ಯದಲ್ಲಿ ಯಶಸ್ಸು ಸಿಗಲೆಂಬ ಮನೋಭಾವ ಅವರದಾಗಿದೆ. "ದುರ್ಗಾದೇವಿ ಸಿಂಹವಾಹಿನಿಯಾಗಿ ಯುದ್ಧಕ್ಕೆ ನಿಲ್ಲುತ್ತಾಳೆ"[೧೮*] ಈ ಕಾಳಗ ಒಂಬತ್ತು ದಿವಸ ನಡೆದಿರುವ ಕಾರಣದಿಂದ ನವರಾತ್ರಿ ಉತ್ಸವ, ವಿಜಯದಶಮಿ ಎಂದು ಕರೆಯುತ್ತಾರೆ. ಪ್ರಪ್ರಥಮ ವಿಜಯ ದಶಮಿ ಆಚರಣೆಯು ಮೈಸೂರು ಒಡೆಯರು ಶ್ರೀರಂಗ ಪಟ್ಟಣದಲ್ಲಿ ಆರಂಭಿಸಿದರು. ಅಂದೇ ಅವರು ಈ ಸಂಭ್ರಮ ಹೀಗೆಯೇ ಜಾರಿಯಲ್ಲಿರಬೇಕೆಂದು ಕಟ್ಟಳೆ ಹಾಕಿದರು. "೧೭೯೯ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬಂದಮೇಲೆ ಟಿಪ್ಪುವಿನ ದುರಹಂಕಾರ ಮುರಿದ ಮೇಲೆ"[೧೯*] ದಸರೆ ಉತ್ಸವ ಮೈಸೂರಿನಲ್ಲಿ ಆಚರಿಸುವ ನಿರ್ಧಾರವಾಯಿತೆಂದು ತಿಳಿದು ಬಂದಿದೆ.

ಜನಪದರ ನಂಬಿಕೆಯ ಪ್ರಕಾರ "ಪಾಂಡವರ ವನವಾಸ ಮುಗಿದು ಅಜ್ಞಾತವಾಸಕ್ಕೆ ವಿರಾಟರಾಜನ ಮನೆಯಲ್ಲಿದ್ದರೆಂಬ ವಾಡಿಕೆ. ಆಗ ದ್ರೌಪದಿಯ ಮಾನಭಂಗದ ಘಟನೆಯಿಂದ ಭೀಮನು ಕೀಚಕನ ವಧೆ ಮಾಡಿದಾಗ ಅಲ್ಲೊಂದು ಕುರಿಬಲಿ ಕೊಡಲಾಯಿತು. ಅದೇ ಖಂಡೇಪೂಜೆಯಾಯಿತೆಂದು ಬನ್ನಿಯು ಬಂಗಾರದ ಕಿರೀಟವಾಯಿತೆಂದು, ಆಗ ಪಾಂಡವರು ಬನ್ನಿ ಮಹಾಂಕಾಳಿಗೆ ಆಯುಧಗಳನ್ನಿಟ್ಟು ಪೂಜಿಸಿದರೆಂದು ಪ್ರತೀತಿ"[೮*] ಇನ್ನೊಂದು ಅಭಿಪ್ರಾಯದಂತೆ "ಕೌರವರ ಜೊತೆ ಜೂಜಾಡಿ ಸೋತ ಪಾಂಡವರು ವನವಾಸಕ್ಕೆ ಹೋಗುವಾಗ ತಮ್ಮ ಆಯುಧಗಳನ್ನೆಲ್ಲಾ ಬನ್ನಿಮರದಲಿಟ್ಟು ರಾಜನ ಆಜ್ಞೆಯ ಪ್ರಕಾರ ಪಾಂಡವರು ವನವಾಸ ಮತ್ತು ಅಜ್ಞಾತವಾಸ ಮುಕ್ತಾಯದವರೆಗೂ ತಮ್ಮ ಆಯುಧಗಳು ಇನ್ನಾರಿಗೂ ಕಾಣದಂತೆ ಕಾಪಾಡಬೇಕೆಂದು ಮಹಾಂಕಾಳಿಯ ಪೂಜೆಗೈದು ವನವಾಸಕ್ಕೆ ಹೋದರೆಂಬ ನಂಬಿಕೆ ಗಾಢವಾಗಿದೆ"[೯*]

ಜನಪದರು ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ದಂತಕಥೆ ಹೀಗೆ ಸೃಷ್ಟಿಸಿದ್ದಾರೆ. ಒಂದು ಊರಲ್ಲಿ ಅಗರ್ಭ ಶ್ರೀಮಂತನೊಬ್ಬನಿದ್ದನು. ಅವರ ಮನೆಯ ಜೀತದಾಳಾಗಿದ್ದ ಹರಿಜನ ವ್ಯಕ್ತಿಯೋರ್ವನು ರಾಶಿಗಾಗಿ ಖಣಮಾಡಿ ರಾಶಿ ಮುಕ್ತಾಯವಾದಾಗ ಧಾನ್ಯದ ರಾಶಿಯ ಬಂಡಿ ಒಯ್ದು ಅರಸರಿಗೆ ಒಪ್ಪಿಸಿದನಂತೆ, ಆ ರಾಶಿ ಗಮನಿಸಿದ ಅರಸನು ಆ ಬಡವನಿಗೆ ಖಣದಲ್ಲಿ ಚೆಲ್ಲಿದ ಕಾಳುಗಳು ಹಾಗೂ ಮೇಟಿಗೆ ಹತ್ತಿಕೊಂಡಿರುವ ಮದವು ಅಲ್ಲಿಯೇ ಬಿಟ್ಟರೆಂದು ಪ್ರತೀತಿ ಇದೆ. ಆ ಕಾಳುಗಳು ಕ್ರೋಢಿ ಕರಿಸಿ ತೂರಿದಾಗ ರೈತನ

---

೧೮) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ ಪು-೩೪೦

೧೯) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ ಪು-೩೪೦

೮) ಶಂಕರಗೌಡ ರಾಯನಗೌಡ ಬಿರಾದಾರ ಅಫಜಲಪುರ ಅಂಚೆ ಮತ್ತು ತಾಲ್ಲೂಕು

೯) ಶಂಕರಗೌಡ ರಾಯನಗೌಡ ಬಿರಾದಾರ ಅಫಜಲಪುರ ಅಂಚೆ ಮತ್ತು ತಾಲ್ಲೂಕು

ಸುದೈವಕ್ಕೆ ಆರು ಚೀಲ ಕಾಳುಗಳಾದವಂತೆ, ಆ ರಾಶಿಯು ಚೀಲಗಳು ಬಂಡಿಯಲ್ಲಿ ತುಂಬಿಕೊಂಡು ಮನೆಗೊಯ್ಯುವಾಗ, ಆ ರೈತನ ಹೊಡೆದುಕೊಂಡು ಬರುವ ಬಂಡಿಯ ಹಿಂದೆ ಹೊಲದೊಳಿರುವ ಬನ್ನಿಮರವು ಬೆನ್ನಟ್ಟಿತಂತೆ, ಆಗ ರಾಜರು ರೈತನಿಗೆ ಅಗಸಿಯ ಹತ್ತಿರ ಗಾಡಿ ನಿಲ್ಲಿಸುವಂತೆ ಆದೇಶಿಸಿದರಂತೆ ಹಿಂದಿನಿಂದ ಬಂದಿರುವ ಬನ್ನಿಮರವು ನಡೆದ ವಿಷಯ ಅರುಹಿದಾಗ, ಆಶ್ಚರ್ಯಚಕಿತನಾದ ರಾಜ ತಮ್ಮ ತಪ್ಪು ಕಲ್ಪನೆಯಿಂದ ಉಂಟಾದ ಸಂದೇಹ ದೂರಮಾಡಿ ರೈತನಿಗೆ ನ್ಯಾಯ ದೊರಕಿಸಿದರಂತೆ. ಆಯಾ ಊರಿನ ಹರಿಜನ ವ್ಯಕ್ತಿಗಳಿಂದ ಬನ್ನಿ ಹಾಗೂ ಅಬಟೆ ಎರಡೂ ಮರದ ಗೊನೆಗಳನ್ನು ತರಿಸಿ ಊರಿನ ಹನುಮಂತದೇವರ ಗುಡಿಯ ಹತ್ತಿರ ಬನ್ನಿ ಮುಡಿಯುವಂತೆ ಆದೇಶಿಸಿದರಿಂದ ಬನ್ನಿ ಮುಡಿಯುವ ರೂಢಿಯಾಯಿತೆಂದು ಜನಪದರ ನಂಬಿಕೆ"[೧೦]*

ಅಂದಿನಿಂದ ಇಂದಿಗೂ ಕನ್ನಡ ನಾಡಿನಲ್ಲಿ ದಸರಾ ಹಬ್ಬವು ನವರಾತ್ರಿಯ ಒಂದು ಸಾಂಸ್ಕೃತಿಕ ಅಂಗವಾಗಿ, ಭುವನೇಶ್ವರಿಯ ಬಾವುಟದ ಅಡಿಯಲ್ಲಿ ಐದುಕೋಟಿ ಇಪ್ಪತ್ತೈದು ಲಕ್ಷ ಕನ್ನಡಿಗರ ಹೃದಯದ ಹಬ್ಬವಾಗಿ ಆಚರಿಸಲ್ಪಡುತ್ತದೆ. ಈ ತತ್ಫಲವಾಗಿ ಕರ್ನಾಟಕದ ಏಕೀಕರಣವಾಗಿ ೧೯೭೩ರಲ್ಲಿ 'ಕರ್ನಾಟಕ'ವೆಂಬ ನಾಮಕರಣವೂ ಆಯಿತು. ಇಂದು ವಿಜಯದಶಮಿ ಹಬ್ಬವು ನಾಡ ಹಬ್ಬವಾಗಿ ವಿಶ್ವವಿದ್ಯಾಲಯಗಳಲ್ಲಿ ಪರಿಷತ್ತಿನಲ್ಲಿ ಸರಕಾರದ ಮಟ್ಟದಲ್ಲಿಯೂ ಆಚರಿಸಲ್ಪಡುತ್ತದೆ. ಆಗ ಹಿರಿಯ ಕವಿ-ಕಲಾವಿದರಿಗೆ ಸನ್ಮಾನಿಸುವ ಒಂದು ಸತ್ಸಂಪ್ರದಾಯವು ನಡೆದು ಬಂದಿರುವುದು ಸ್ತುತ್ಯಾವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು.

೧೦) ಭೀಮಶಾ ಸಾಯಬಣ್ಣ ದೊಡ್ಡಮನಿ ಮಲ್ಲಾಬಾದ ಅಂಚೆ, ಅಫಜಲಪುರ ತಾ।। ಗುಲ್ಬರ್ಗಾ ಜಿಲ್ಲೆ

೬. ದೀಪಾವಳಿ

ದೀಪಾವಳಿ ದೀಪಗಳ ಅರ್ಥಾತ್ ಬೆಳಕಿನ ಹಬ್ಬ. ಕತ್ತಲೆ ಹೋಗಲಾಡಿಸುವ ಹಬ್ಬ. ಮನೆ ಮನೆಯ ಮನ ಮನದ ಕತ್ತಲೆ ನಿವಾರಿಸಿ ಬೆಳಕನ್ನುಂಟು ಮಾಡುವ ಹಬ್ಬವಾಗಿದೆ. ದೀಪಾವಳಿ ಭರತವರ್ಷದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಎಲ್ಲಾ ಭಾರತೀಯರು ಈ ಹಬ್ಬ ವೈಭವದಿಂದ ಆಚರಿಸುತ್ತಾರೆ. ಐದು ದಿನಗಳವರೆಗೆ ನಡೆಯುವ ಈ ಹಬ್ಬವು ಮೂಲೆ ಮೂಲೆಯಲ್ಲಿ ಅವಿತು ಕುಳಿತ ಕತ್ತಲೆಯನ್ನು ಹೊಡೆದೋಡಿಸಿ ಎಲ್ಲೆಡೆಗೂ ಬೆಳಕನ್ನುಂಟು ಮಾಡುವುದರಿಂದ ಬೆಳಕಿನ ಹಬ್ಬವೆಂತಲೂ ಕರೆಯುತ್ತಾರೆ. ಇದು ಪ್ರತಿವರ್ಷ ಸಾಮಾನ್ಯವಾಗಿ ಅಕ್ಟೋಬರ್ ಇಲ್ಲವೇ ನವೆಂಬರ್ ತಿಂಗಳಲ್ಲಿ ಬರುತ್ತದೆ. ಸಾಲು ದೀಪಗಳ ಉತ್ಸವ ಅಥವಾ ದೀಪೋತ್ಸವ ಮನೆಮನೆಗಳಲ್ಲಿ ಮನೆಗಳ ಮುಂದೆ ಸಾಲು ದೀಪಗಳ ಸಾಲು ಅಲಂಕೃತವಾಗಿ ಬೆಳಗುವುದರಿಂದ ದೀಪಾವಳಿ ಹಬ್ಬವೆನಿಸಿರುವದು.

ದೀಪಾವಳಿ ಹಬ್ಬ ಚತುರ್ದಶಿಯಿಂದ ಪ್ರಾರಂಭಿಸಿ ಸಾಮಾನ್ಯವಾಗಿ ಮೂರುದಿನಗಳು ಆಚರಿಸುವುದುಂಟು. ಅರಮನೆ ಗುರುಮನೆ, ದೇವಾಲಯಗಳ, ಇಡೀ ಮಾಸ ಪರ್ಯಂತ ಪ್ರತಿನಿತ್ಯ ದೀಪೋತ್ಸವದ ದೀಪಸೇವೆ ಮಾಡುವುದುಂಟು. ಭಾರತದ ಎಲ್ಲೆಡೆಯಲ್ಲಿಯೂ ದೀಪಾವಳಿಯನ್ನು ಆಚರಿಸುತ್ತಾರೆ. ಬಹಳ ದಿನದಿಂದಲೂ ಬಂದಿರುವ ಎಲ್ಲಾಮತ ಧರ್ಮದವರೂ ಅನುಸರಿಸುವ ದೀಪಾವಳಿಯ ಬಗ್ಗೆ ಧರ್ಮ ಸಿಂಧುವನಲ್ಲಿ ಹೀಗೆ ಹೇಳಿದೆ.

"ಬಲಿರಾಜ್ಯೆ ದೀಪವಾನುತ್ಸವಾಲಕ್ಷ್ಮೀ ಸ್ಥಿರಾಭವೇತ್‌ವು ದೀಪೈರ್ನಿರಾಜನಾದತ್ತ ಸೈಪು ದೀಪಾವಲಿ ಸ್ಮತಾ॥

ಬಲಿಯ ರಾಜ್ಯದಲ್ಲಿ ದೀಪ ಹಚ್ಚಿದರೆ ಲಕ್ಷ್ಮಿಸ್ಥಿರವಾಗಿರುವಳು, ಎಂದು ಹೇಳುತ್ತಾರೆ. ಹೀಗೆ ದೀಪ ಹಚ್ಚುವುದರಿಂದಲೇ ದೀಪಾವಳಿ ಎಂಬ ಹೆಸರು ಬಂದಿದೆ ಎಂದು ಕೆಲವರು ಹೇಳುತ್ತಾರೆ. ದೀಪವೆಂದರೆ ಬೆಳಕುಮಾತ್ರವಲ್ಲ; ಲಕ್ಷ್ಮೀ ಆದ್ದರಿಂದ ದೀಪಾವಳಿಯಲ್ಲಿ ಲಕ್ಷ್ಮೀ ಪೂಜೆಯೂ ಆಚರಣೆಯಲ್ಲಿದೆ"[೨೦*] ನರಕ ಚತುರ್ದಶಿ ಶ್ರೀಕೃಷ್ಣನು ನರಕಾಸುರನ ಹುಟ್ಟು ಸಾಮಾನ್ಯವಲ್ಲ. ಶ್ರೀಮನ್ನಾರಾಯಣರು ವರಾಹಾವತಾರವನ್ನೆತ್ತಿ ಭೂಮಿ ಉದ್ಧರಿಸಿದ ಬಳಿಕ ಅವನ ಶರೀರದಿಂದ ಬಿದ್ದ ಒಂದು ತೊಟ್ಟು ಬೆಮರು ಅಸುರಾಕೃತಿಯನ್ನು ಪಡೆಯಿತು. ಅವನೇ ನರಕಾಸುರ 'ಚತುರ್ದಶಿ'ಯನ್ನು ಅಪಹರಿಸಿದನು. "ಪ್ರಗ್ಜ್ಯೋತಿಷಪುರವೆಂಬ ಪಟ್ಟಣದ ದೊರೆಯಾಗಿ ಇವನು ಮುಂದೆ ದೇವಾನುದೇವತೆಗಳಿಗೆ ವಿಶೇಷ ತೊಂದರೆ ಕೊಟ್ಟನು. ಬ್ರಹ್ಮನ ಮಗಳಾದ ವರುಣನ ಛತ್ರವನ್ನೂ ಅಪಹರಿಸಿ ಸಹಸ್ರಾರು ದೇವಸಿದ್ಧ ಅಪ್ಸರೆಯರನ್ನು ಕದ್ದೊಯ್ದನು. ಲೋಕಕ್ಷೇಮಕ್ಕಾಗಿ ಅವತರಿಸಿದ ಶ್ರೀ ಕೃಷ್ಣ ಇವನ ಉಪಟಳವನ್ನು ಕೊನೆಗೊಳಿಸುತ್ತಾನೆ"[೨೧*] ನರಕಾಸುರನ ತಾಯಿಯ ಅಪ್ಪಣೆ ಮೇರೆಗೆ ನರಕಾಸುರನನ್ನು ಎಲ್ಲರು ಪೂಜಿಸುವ ನೆನಪಿಡುವ ರೀತಿಯಲ್ಲಿ ಕೃಷ್ಣನು ಈ ಹಬ್ಬ ಸ್ಥವಗೊಳಿಸುತ್ತಾನೆ.

---

೨೦) 'ಭಾರತದ ಹಬ್ಬ ಹರಿದಿನಗಳು' ಪ್ರೊ. ಡಿ. ಟಿ ರಂಗಸ್ವಾಮಿ ಪು-೨೪

೨೧) 'ಭಾರತದ ಹಬ್ಬ ಹರಿದಿನಗಳು' ಪ್ರೊ. ಡಿ. ಟಿ ರಂಗಸ್ವಾಮಿ ಪು-೨೪

ಆ ದಿನದ ಸವಿನೆನಪು ನರಕ ಚತುರ್ದಶಿ ಇದಕ್ಕಾಗಿ ಅಭ್ಯಂಜನ ಯಮತರ್ಪಣ ಮೊದಲಾದವು ಗಳನ್ನು ಪುರಾಣಗಳು ವಿಧಿಸಿವೆ.

ದೀಪಾವಳಿ ಪ್ರಮುಖವಾಗಿ ಮೂರು ದಿನಗಳ ಹಬ್ಬವಾಗಿದೆ. ಮೊದಲನೆಯ ದಿನ ಚತುರ್ದಶಿ. ಅದು ನರಕಾಸುರನ ವಧೆಯಾದ ದಿನವಾಗಿದ್ದು ಆತನನ್ನು ಕೊಂದ ಹರಿಯ ಸ್ಮರಣೆ ಮಾಡಿಕೊಳ್ಳುವ ದಿನ ಆ ದಿನ ಹರಿಭಕ್ತರಿಗೆ ತುಂಬಾ ಪ್ರಿಯವಾದ ದಿನವಾಗಿದ್ದು ಅಂದು ಮನೆಗಳಲ್ಲಿ ಮುತ್ತೈದೆಯರು ತಮ್ಮ ತಮ್ಮ ಪತಿಗೆ ಮಂಗಳಾರತಿ ಬೆಳಗುವರು. ಹಾಗೂ ಅವರ ದೀರ್ಘಾಯುಷ್ಯಕ್ಕಾಗಿ ಅನನ್ಯ ಭಕ್ತಿಯಿಂದ ಭಗವಂತನನ್ನು ಪ್ರಾರ್ಥಿಸುವರು. ಎರಡನೆಯ ದಿನ ಅಮವಾಸ್ಯೆ ದಿನ ಅಂದು ಲಕ್ಷ್ಮೀ ಪೂಜೆ ಹೆಚ್ಚಿನ ಶ್ರದ್ಧಾಭಕ್ತಿಯಿಂದ ಆಚರಿಸಲ್ಪಡುವದು, ವ್ಯಾಪಾರಿಗಳು, ವರ್ತಕರು, ಲಕ್ಷ್ಮೀ, ಸರಸ್ವತಿ ಪೂಜೆಯ ಅಪಾರ ಶ್ರದ್ಧೆ, ಭಕ್ತಿ ಹಾಗೂ ವೈಭವದಿಂದ ಆಚರಿಸುವರು. ದೀಪಾವಳಿಯ ಈ ದಿನ ವ್ಯಾಪಾರಿಗಳ ವ್ಯವಹಾರಕ್ಕೆ ತುಂಬಾ ಶುಭದಿನವೆಂದು ಭಾವಿಸುಲಾಗಿದೆ. ವಿಕ್ರಮ ಸಂವತ್ಸರದ ಪ್ರಕಾರ ಉತ್ತರ ಭಾರತದವರು ವ್ಯಾಪಾರದ ತಮ್ಮ ಲಾಭ-ನಷ್ಟಗಳನ್ನು ಈ ದಿನದಿಂದಲೇ ಲೆಕ್ಕಚಾರ ಮಾಡುವ ಪರಿಪಾಠವುಳ್ಳವರಾಗಿದ್ದಾರೆ. ಆಪ್ತೇಷ್ಟರು ಹಾಗೂ ಮೆಚ್ಚಿನ ಗಿರಾಕಿಗಳಿಗೆ ಸಿಹಿ ಪದಾರ್ಥ ಹಂಚಿ ಶುಭಕೋರುವರು. ಆದರೆ ದಕ್ಷಿಣ ಭಾರತೀಯರು ಶಾಲಿವಾಹನ ಸಂವತ್ಸರಕ್ಕೆ ಹೆಚ್ಚಿನ ಮಹತ್ವ ಕೊಡಲಾಗುತಿದ್ದು ಅದರ ಆರಂಭದ ದಿನವಾದ ಯುಗಾದಿ ದಿನದಂದು ತಮ್ಮ ಲಾಭ-ನಷ್ಟಗಳು ಲೆಕ್ಕಚಾರ ಮಾಡುವ ಪರಿಪಾಠಯುಂಟು. ಮೂರನೆಯ ದಿನವೇ ಬಲಿಪಾಡ್ಯಮಿ. ಆ ದಿನ ಬಲೀಂದ್ರ ಪೂಜೆ, ಬಲಿಚಕ್ರವರ್ತಿಯ ನೆನಪಿಗಾಗಿ ಹಿಟ್ಟಿನ ಇಲ್ಲವೆ ಸಗಣಿಯ ಮೂರ್ತಿ ಮಾಡಿ ಪೂಜಿಸುವ ರೂಢಿಯಿದೆ. ಭಾರತದ ಹಬ್ಬಗಳಲ್ಲಿ ದೀಪಾವಳಿ ಒಂದು ವಿಶಿಷ್ಟವಾಗಿದ್ದು ಪಟಾಕಿಗಳ ಸಿಡಿತಕ್ಕೆ ಹೆಚ್ಚಿನ ಹೆಸರು ಪಡೆದಿದೆ. ಈ ಸಂದರ್ಭದಲ್ಲಿ "ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟಗುಟ್ಟುತ್ತ ಸಿಡಿಯುವುವು"[೨೨*] ಎಂಬ ಕವಿವಾಣಿ ಅಕ್ಷರಶಃ ಸತ್ಯವಾಗಿದೆ. ದೀಪಾವಳಿ ಹಬ್ಬದ ದಿನದಂದು ಸಂಜೆಯಾಗುತಿದ್ದಂತೆ 'ಆಣೆಪೀಣೆ' ಯೊಂದಿಗೆ ಪ್ರಾರಂಭವಾಗಿ ವಿಧವಿಧದ ಪಟಾಕಿಗಳ ಸಿಡಿತ, ಕುಣಿತ-ಮಿಣಿತಗಳ ಮೂಲಕ ಉಂಟಾಗುವ ಮನಮೋಹಕ ಬೆಳಕು, ಕಿವಿಗಡಚಿಕ್ಕುವಂತಹ ಶಬ್ದಗಳು ಮನಸ್ಸಿಗೆ ಅಪಾರ ಮುದ ನೀಡುತ್ತವೆ. ಚಕ್ರ, ಬಾಣ, ಸುರಸುರಬತ್ತಿ, ವಿಷ್ಣುಚಕ್ರ; ಹಾವಿನ ಗೋಳಿ ಮೊದಲಾದ ವಿವಿಧ ಬಗೆಯ ಪಟಾಕಿಗಳ ಹೆಸರು ಎಲ್ಲರಿಗೂ ಚಿರಪರಿಚಿತ. ಪಟಾಕಿ ಹಚ್ಚುವುದರಲ್ಲಿ ಸಿಡಿಸುವುದರಲ್ಲಿ ಮಕ್ಕಳದೇ ಪ್ರಮುಖ ಪಾತ್ರವಾದರೂ ಇತರ ಎಲ್ಲಾ ಸ್ತ್ರೀ-ಪುರುಷರು ಪಾಲ್ಗೊಳ್ಳುವುದನ್ನು ಎಲ್ಲಾಕಡೆ ನೋಡಬಹುದಾಗಿದೆ. ಬಡವರಾಗಲಿ ಶ್ರೀಮಂತರಾಗಲಿ ಮಕ್ಕಳ ಒತ್ತಾಯಕ್ಕಾದರೂ ಅವರವರ ಶಕ್ತ್ಯನುಸಾರ ಹಣ ಖರ್ಚುಮಾಡಿ ಪಟಾಕಿ ಸಿಡಿಸುವುದು ಮಹತ್ವದ ಸಂಗತಿಯಾಗಿದೆ.

"ಕಲಬುರಗಿ ಜಿಲ್ಲೆಯಲ್ಲಿ ದೀಪಾವಳಿ ಹಬ್ಬದ ಪದ್ಧತಿ"

---

೨೨) ಗ್ರಾಮೀಣ ಸಮಾಜ-ಕೆ. ಭೈರಪ್ಪ ಪುಟ-೩೯೮

ಅಪಾರ ಭಕ್ತಿಯುಳ್ಳ ತೈಲವು ಸುರವಿ ಬಿಟ್ಟು ಪವಿತ್ರವಾದ ಬತ್ತಿಯನ್ನುರಿಸಿಟ್ಟು ನಿರ್ಮಲವಾದ ಬೆಳಕು ಪಡೆಯೋಣ. ದೀಪಾವಳಿ ಅಮರಜ್ಯೋತಿಯಾಗಿ ಸರ್ವರ ಹೃದಯ ಬೆಳಗಲೆಂದು ಹಾರೈಸುವ ಶುಭದಿನವಾಗಿದೆ.

ನೀರು ತುಂಬುವದು:– ದೀಪಾವಳಿ ಹಬ್ಬದ ಆರಂಭದ ಮೊದಲು ದಿನವೇ ನೀರು ತುಂಬವ ದಿನ. ಈ ದಿನದಂದು ಮಹಿಳೆಯರು ಬೆಳಿಗ್ಗೆಯೇ ವಿಧಿಕ್ರಿಯೆಗಳನ್ನು ಮುಗಿಯಿಸಿ ಹಿಂದಿನದಿನದ ನೀರಿದ್ದರೂ ಅವು ಚೆಲ್ಲಿ ಮಿಾಸಲು ನೀರಿನೊಂದಿಗೆ ತಮ್ಮ ಮನೆಗಳೆಲ್ಲ ಸಗಣಿಯಿಂದ ಸಾರಣಿ ಮಾಡಿ, ಮನೆಯಲ್ಲಿಯ ಸಾಮಾನುಗಳೆಲ್ಲ ಸ್ವಚ್ಛ ಗೊಳಿಸುವರು. ಎಲ್ಲವು ಸ್ವಚ್ಛಗೊಳಿಸಿದ ಮೇಲೆ ಎರಿಕೆ ಮಾಡಿಕೊಂಡು ಎಲ್ಲಾ ಪಾತ್ರೆಗಳಲ್ಲಿಯೂ ನೀರುತುಂಬುವರು. ನೀರು ತುಂಬಿದ್ದ ಕೊಡ ಅಥವಾ ಹರವಿಗೆ ಐದು ಸುತ್ತು ನೂಲು ಸುತ್ತಿ ಸ್ಯಾಂವಿಗೆ-ಅನ್ನದ ನೈವೇದ್ಯ ಹಿಡಿದು ಭಕ್ತಿ ಶ್ರದ್ಧೆಯಿಂದ ಪೂಜಿಸುವರು.

ಹಬ್ಬದ ದಿನ:– ನೀರು ತುಂಬುವ ದಿನದ ಮಾರನೆಯ ದಿನವೇ 'ಚತರ್ದಶಿ'ಯು ಹಬ್ಬದ ದಿನವಾಗಿದೆ. ಅಂದು ರೈತರು ಸುರ್ಯೋದಯಕ್ಕಿಂತ ಮುಂಚೆಯೇ ನಸುಕಿನಲ್ಲೆದ್ದು ದನಕರುಗಳಿಗೆ ಸ್ನಾನ ಮಾಡಿದ ಮೇಲೆ ಅಣ್ಣ-ತಮ್ಮಂದಿರು ಅಕ್ಕ-ತಂಗಿಯರಿಂದ ಆರತಿ ಬೆಳಗಿಸಿಕೊಳ್ಳುವರು. ಇದರ ಉದ್ದೇಶ ತಮಗೆ ಶಾಂತಿ-ನೆಮ್ಮದಿಯಿಂದ ಸುಖ-ಸಂಪತ್ತು ಸಮೃದ್ಧಿಯಾಗಲೆಂದೂ ಹೆಣ್ಣು-ಮಕ್ಕಳು ತವರಿಗೆ ಹರಕೆ ಕೊಡಲೆಂದು ಅವರಿಗೆ ಉಡುಗೋರೆ ಕೊಟ್ಟು ಕಾಲಿಗೆ ನಮಸ್ಕರಿಸುವರು. ಅಕ್ಕ-ತಂಗಿಯರು ಅಣ್ಣ-ತಮ್ಮಂದಿರ ಬಾಯಿಗೆ ಸಿಹಿ ಹಾಕಿ ಹರಕೆಕೊಟ್ಟು ಆಶೀರ್ವದಿಸುವರು ಇದರಿಂದ ತನ್ನ ತವರು ಮನೆ ತಣ್ಣಗಿರಲೆಂದೆನ್ನುವ ಆಶಯ ಮಹಿಳೆಯರದಾಗಿದೆ. ಈ ನಂಬಿಕೆಯ ಹಿನ್ನೆಲೆಯಲ್ಲಿಯೇ ಜನಪದರು ತಮ್ಮ ಬದುಕಿನ ನೋವು-ನಲಿವುಗಳ ಕ್ಷಣಗಳು ಸಮನಾಗಿ ಎದುರಿಸುವ ಧೈರ್ಯ ತಂದು ಕೊಳ್ಳುತ್ತಾರೆ. ಅಂದು ಚಿಕ್ಕ ಮಕ್ಕಳಿಂದ ದೊಡ್ಡವರ ವರೆಗೆ ಹೊಸ ಉಡುಪುಗಳು ಧರಿಸುತ್ತಾರೆ. ಪ್ರತಿಯೊಬ್ಬರ ಮನೆಯಲ್ಲಿರುವ ಮಕ್ಕಳು ಸಂತೋಷದಿಂದ ಪಟಾಕಿ ಹಾರಿಸುವರು. ಅಂದು ರಾತ್ರಿ ದನ-ಕರುಗಳುಳ್ಳ ರೈತರು ತಮ್ಮ ತಮ್ಮ ದನಕರುಗಳಿಗೆ ಬೆಳಗಲು, ಹಳ್ಳದಲ್ಲಿ ಬೆಳೆದಿರುವ 'ಜೇಕಿನಿಂದ ತಯಾರಿಸಿದ 'ಆಣೆಪೀಣೆ' ಯಲ್ಲಿ ತೆಂಗಿನ ಕಾಯಿ ಪಟ್ಟಿ ಇಟ್ಟು ಅದರೊಳಗೆ ಬತ್ತಿಯಿಟ್ಟು ಎಣ್ಣೆಹಾಕಿ ದೀಪ ಹಚ್ಚುವರು. ಆಣೆಪೀಣೆಯೆಂದರೆ- ಜೇಕಿನ ಹುಲ್ಲಿನಿಂದ ತಯಾರಿಸಿದ ಮೂರು ಹಾವಿನ ಹೆಡೆ ಆಕಾರದ 'ಹೆಣಿಕೆ'. ಚಳ್ಳೆಣ್ಣೆ ಜೋಡಿಸಿದಾಗ ಒಂದು ಮಾಡದಾಕಾರವಾಗುತ್ತದೆ. ಆಗ ಅದರಲ್ಲಿ ತೆಂಗಿನ ಪರಟೆಯನ್ನಿಟ್ಟು ಅದರೊಳಗೆ ಸಿಹಿಎಣ್ಣೆ ಹಾಕಿ, ಹತ್ತಿಯಿಂದ ಹೊಸೆದ ಬತ್ತಿ ಅದರೊಳಗೆ ಹಾಕಿ ದೀಪ ಬೆಳಗಿಸುವುದಕ್ಕೆ ಆಣೆಪೀಣೆ ಎಂದು ಕರೆಯುವರು.' ಕೆಲವೊಬ್ಬರು ಕುಂಬಾರ ಮನೆಯಲ್ಲಿ ನಿರ್ಮಿಸಿದ ಹಣತೆ ಇಟ್ಟು ಅಥವಾ ಗೋಧಿ ಹಿಟ್ಟಿನಿಂದ ತಯಾರಿಸಿದ ಕಣಕದ ಹಣತೆಯಲ್ಲಿಯೂ ದೀಪ ಹಚ್ಚುವರು. 'ಆಣೆಪೀಣೆ' ನಿರ್ಮಿಸಿ ಪ್ರಥಮವಾಗಿ ದೇವರ ಗುಡಿಗೆ ಹೋಗಿ ದೇವರಿಗೆ ಬೆಳಗಿದ ನಂತರ ಸಾಕು ಪ್ರಾಣಿಗಳಿರುವವರ ಮನೆಗೆ ಹೋಗಿ 'ಆಣೆಪೀಣೆ' ಹಾಡುಗಳು ಹಾಡುವರು. ಮನೆಯ ಮಾಲಿಕರಿಂದ ಪಟಾಕಿಗಳು ಪಡೆದು ಹಾರಿಸುವರು. ಪ್ರಾಣಿಗಳಿಗೂ ವರ್ಷಕ್ಕೆರಡು ಸಲ ಬೆಳಗಿದರೆ ಪ್ರಾಣಿ-ಸಂಪತ್ತು ಹೆಚ್ಚುವದೆಂಬ ನಂಬಿಕೆಯಿದೆ. ಜೊತೆಗೆ ತಮ್ಮ ಪ್ರಾಣಿಗಳು

ಯಾವುದೇ ರೋಗಕ್ಕೆ ಬಲಿಯಾಗದೆ ಸುಖದಿಂದಿರಲೆಂದು ಬೆಳಗಿಸಿ ಕೊನೆಗೆ ದೇವರಗುಡಿಯಲ್ಲಿಯೇ ಇಟ್ಟು ತಮ್ಮ ತಮ್ಮ ಮನೆಗೆ ಹೋಗುವರು.

ಅಮವಾಸ್ಯೆ:- "ಅಮವಾಸ್ಯೆದಿನ ಪ್ರತಿಯೊಬ್ಬ ವ್ಯಾಪಾರಸ್ಥರು ತಮ್ಮ ತಮ್ಮ ಅಂಗಡಿಗಳಿಗೆ ಸುಣ್ಣ-ಬಣ್ಣಗಳಿಂದ ಅಲಂಕಾರ ಮಾಡಿ ಬಾಗಿಲಿಗೆ ತಳಿರು-ತೋರಣಗಳು ಕಟ್ಟಿ ಸಿಂಗರಿಸುವರು. ಅಂಗಡಿಯೊಳಗೆ ಕುರ್ಚಿಯ ಮೇಲೆ ಅಥವಾ ಮಂಟಪ ತಯಾರಿಸಿ ಲಕ್ಷ್ಮೀಪಟವಿಟ್ಟು ಅದರ ಮುಂದೆ ಪೂಜೆ ತಂಬಿಗೆಯ ಕುಂಭ ತಯಾರಿಸಿ ಅದಕ್ಕೆ ಹಸಿರು 'ಜಂಪರ' ಅಥವಾ 'ಕುಪ್ಪಸ' ದಿಂದ ಅಲಂಕರಿಸಿ, ಲಕ್ಷ್ಮೀ ಫೋಟೋದ ಮೇಲೆ ಕಂಠಮಂಡಲಿ ಕಟ್ಟಿ ಪುರೋಹಿತರಿಂದ ಅಥವಾ ಜಂಗಮರಿಂದ ಪೂಜೆ ಮಾಡಿಸುವರು. ಪೂಜೆಗೈದ ರಾತ್ರಿಯಿಂದ ಬೆಳಗಿನವರೆಗೂ ಭಜನೆ, ಕೀರ್ತನೆ, ಪುರಾಣ ಮತ್ತು ಇತ್ತೀಚಿನ ರೂಢಿಗಳಾದ ಇಸ್ಪೇಟು ಆಟದಿಂದ ರಾತ್ರಿ ಜಾಗರಣೆ ಮಾಡುವ ಪದ್ಧತಿ ಬೆಳೆದು ಬಂದಿದೆ. ಮಕ್ಕಳು ಅಂಗಡಿಯ ಮಾಲಿಕರಿಂದ ಪಟಾಕಿ ಪಡೆಯಲು ನಾ-ಮುಂದು ತಾ-ಮುಂದು ಸಾಲು ಸಾಲಾಗಿ ನಿಂತಿರುತ್ತಾರೆ. ವ್ಯಾಪಾರಿಗಳು ಈ ಪೂಜೆಯಿಂದ ತಮಗೆ ವ್ಯಾಪಾರದಲ್ಲಿ ಲಾಭ ವೃದ್ಧಿಸಲೆಂದು ಪೂಜಿಸುವ ವಾಡಿಕೆಯಿದೆ."[೧೧]*

ಬಲಿಪಾಡ್ಯ:- ದೀಪಾವಳಿ ಹಬ್ಬದ ನಾಲ್ಕನೆಯ ದಿನ ಅಂದರೆ ಅಮವಾಸ್ಯೆಯ ಮಾರನೆಯ ದಿನವೇ ಬಲಿಪಾಡ್ಯಮಿ ಆಚರಣೆ ಮಾಡುವರು. ಬಲೀಂದ್ರನ ಆಕೃತಿಯು ಅಕ್ಕಿ ಹಿಟ್ಟಿನಿಂದ ಅಥವಾ ಗೋದಿಹಿಟ್ಟಿನಿಂದ ಮತ್ತು ದನಗಳ ಸಗಣಿಯಿಂದ ತಯಾರಿಸುವರು. ಕೈಗೆ ಬಂದಿರುವ ಗೋದಿ, ಭತ್ತ ಮೊದಲಾದ ತೆನೆಗಳು ತಂದು ಎತ್ತಿನ ದಾವಣಿಯಲ್ಲಿಯೇ ನಿರ್ಮಿಸಿದ ಮನೆಯಲ್ಲಿ ಬಲೀಂದ್ರನ ಆಕೃತಿ ಸುತ್ತ ಮುತ್ತಲು ಸುಂದರವಾಗಿ ಕಾಣುವಂತೆ ಅವರೆಯ ಹೂವಿನ ಹಳದಿ ವರ್ಣದ ಹೂಗಳಿಂದ ಅಲಂಕರಿಸುವರು. ಹೀಗೆ ಮಾಡಲು ಜನಪದರಲ್ಲಿರುವ ನಂಬಿಕೆಯೇನೆಂದರೆ, "ಪಾಂಡವರು ಪಟ್ಟಕ್ಕೆ ಕುಳಿತರೆಂಬುವ ಭಾವನೆಯಿದೆ" ಪಂಚ ಪಾಂಡವರ ಮೂರ್ತಿ ಸಗಣಿಯಿಂದ ತಯಾರಿಸಿ ಪೂಜಿಸುವರು. ಇದಕ್ಕೆ 'ಬಲಿಪಾಡ್ಯಮಿ' ದಿನವೆಂದು ಪ್ರತೀತಿ ಇದೆ.

ನಾನು ಸಂದರ್ಶನ ಮಾಡಿದ ವಕ್ತಾರರ ಹೇಳಿಕೆಯ ಪ್ರಕಾರ "ಒಬ್ಬ ನರಕಾಸುರನೆಂಬ ದೈತ್ಯನ ಕೊಲೆ ಮಾಡಬೇಕೆಂದು ಎಷ್ಟೆ ಪ್ರಯತ್ನಪಟ್ಟರೂ ಆತನು ಯಾರ ಕೈಗೂ ಸಿಗದೆ. ಮಾನವನ ಹೊಟ್ಟೆಯಲ್ಲಿ ಸೇರಿ, ಜಂತಿನ ಹುಳವಾಗಿ ಕಕ್ಕಸದಿಂದ ಹೊರಬಂದಾಗ, ಶ್ರೀ ಕೃಷ್ಣನು 'ವರಾಹ' ಅವತಾರ ತೊಟ್ಟು ನರಕಾಸುರನ ಕೊಲೆ ಮಾಡಿ ಜಯಶಾಲಿಯಾಗಿ ಬಂದಾಗ ಶ್ರೀ ಕೃಷ್ಣನ ಸ್ನಾನಕ್ಕಾಗಿ ನೀರು ಬೇಕಾಗಿರುವುದರಿಂದ ನೀರು ತುಂಬುವ ದಿನವಾಯಿತೆಂದು, ವಿಷ್ಣುವಿನ ಸ್ನಾನವಾಗುವುದರೊಳಗೆ ನರಕಚತುರ್ದಶಿಯು ಬೆಳಗಾಯಿತೆಂದು. ಅಂದು ಬೆಳಗಿಸಿಕೊಂಡುದಕ್ಕೆ ಅದು ನರಕ 'ಚತುರ್ದಶಿ' ಹಬ್ಬವಾಯಿತೆಂದು

---

೧೨) ವಿಠಲ ಶಿವಪ್ಪ ಗವಾ ಇಂಗಳಗಿ (ಬಿ)-ಅಂಚೆ, ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

ಪ್ರತೀತಿಯಿದೆ. ಇದೆಲ್ಲ ನಡೆದುದರ ಮಾರನೆಯ ದಿನವೇ ಅಮವಾಸ್ಯೆಯೆಂದು ಹೆಸರಿಟ್ಟು "ಸ್ವಾತಿ ನಕ್ಷತ್ರ" ಕುಬೇರ ಅಥವಾ ಲಕ್ಷ್ಮೀ ಪೂಜೆಯಾಯಿತೆಂದು ಜನಪದರು ಅಂಗಡಿಯ ಪೂಜೆಯೊಂದಿಗೆ ಲಕ್ಷ್ಮೀ ಪೂಜೆ ಮಾಡಿದರು. ಇದೇ ಕ್ರಮೇಣ ಹಬ್ಬವಾಗಿ ಪರಿಣಮಿಸಿತೆಂದು ಜನಪದರ ನಂಬಿಕೆಯಾಗಿದೆ."[೧೨]*

"ದೀವಳಿಗೆ ಹಬ್ಬ ದೇವೇಂದ್ರನೈಭೋಗ
ಬೆಳೆದು ಬೀಗ್ಯಾಳೋ ಭೂಮಿ ತಾಯಿ। ತಾ ಆನಂದವೇ
ಬೆಳೆದು ಬೀಗ್ಯಾಳೋ ಭೂಮಿ ತಾಯಿ"[೨೪]*

ಭೂಮಿತಾಯಿಯ ಕುರಿತು ರೈತನು ಹೀಗೆ ಹಾಡಿ ದೀಪಾವಳಿ ಹಬ್ಬದಂದು ಹರಗಿ-ಬಿತ್ತಿದ್ದ ಮುಂಗಾರು ಬೆಳೆಗಳ ರಾಶಿಯು ರೈತರು ಪಡೆದಿರುತ್ತಾರೆ. ಈ ಹಬ್ಬದ ದಿನ ರೈತರಿಗೆ ಒಳ್ಳೇ ಸಂತೋಷದ ಸುದಿನವೆಂದು ಹೇಳಬಹುದು. ಏಕೆಂದರೆ ಈ ಹಾಡು ಹೇಳಿ ಸಂತೋಷ ಪಡುವ ದೀಪಾವಳಿಯು ಹಸುರಿನ ಗಿಡಮೂಲಿಕೆಗಳಿಂದ ಸಿಂಗರಿಸಿಕೊಂಡು ಹೊಸ ಭತ್ತದ ಬೆಳೆ ಹೊತ್ತು; ಭೂಮಿತಾಯಿ ದೀಪ ಹಚ್ಚಿದ ಹಾಗೆ ಹೊಸ ಪೈರುಗಳಿಂದ ಕಂಗೊಳಿಸು ತ್ತಾಳೆಂದು ಹೇಳುವ ಪ್ರೊ. ಡಿ. ಟಿ. ರಂಗಸ್ವಾಮಿಯವರು ಹೇಳುವ ಮಾತಿನಲ್ಲಿ ಸತ್ಯವನ್ನಡಗಿದೆ.

'ಆಣೆಪೀಣೆ':– ರೈತನು ತನ್ನ ಆರಾಧ್ಯ ದೈವವಾದ ಬಸವಣ್ಣನಿಗೆ ಇಡೀ ವರ್ಷ ದುಡಿದು ಬೇಸತ್ತು ಬಂದ ತನ್ನ ಎತ್ತುಗಳಿಗೆ, ದನ ಕರುಗಳಿಗೆ ದಿಪಾವಳಿ ಹಬ್ಬದ ದಿನ ಎಲ್ಲ ಜಾನವಾರುಗಳಿಗೂ ಒಳ್ಳೆ ವಿನಯದಿಂದ ಪೂಜೆಮಾಡಿ 'ಆಣೆಪೀಣೆ' ಬೆಳಗುತ್ತಾರೆ. ಈ ಸಮಯದಲ್ಲಿ ಎಲ್ಲಾ ಪ್ರಾಣಿಗಳಿಗೂ ಒಂದೊಂದು ರೀತಿಯ ಪ್ರತ್ಯೇಕ ಹಾಡುಗಳು ಹೇಳಿ ಪೂಜಿಸುವ ವಾಡಿಕೆ. ಆಣೆಪೀಣೆಗೆ ಸಂಬಂಧಪಟ್ಟ ಕೆಲವು ಹಾಡುಗಳನ್ನೆಲ್ಲ ಕೊಡಲಾಗಿದೆ.

ಹೋರಿಹಾಡು:–

"ಕಾಶಾಳ ಕಾಶಿ ಮಾಶಾಳಮಾಸಿ
ಕಾಶಿಗಿ ಹೋಗಾದು ಯ್ಯಾ ಹೋರಿ
ಹೋರಿ ಹೆಸರ ಚಾಮಚಾಮಕ
ಬಸವಪ್ಪ ಅವನ ಹೆಸರ

ರಾಂತರಾಗಿತ್ತು ಕಂದನ ಸಾಕ
ಹೇಳಲಿಕೇನು ? ಕೇಳಲಿಕೇನು ?
ಕಾಲಿಗಿ ನಾಲ ಬೆನ್ನಿಗಿ ಥೂಲಾ
ಮೋತಿಗಿ ಹಾಕ್ಯಾರ ಯಾತರ ಮಗಡ
ಬೆಳ್ಳಿ ತಗಡಿನ ಭಾಸಿಂಗ ಮಗಡ
ಮ್ಯಾಲ ಕುಂತಾಳ ಪಾರ್ವತಿ
ಹಿಂದ ಹೊಡಿತಾನ ಪರಮೇಶ್ವರ

---

೧೨) ಸಿದ್ರಾಮಯ್ಯ ಹಿರೇಮಠ ಆನೂರ-ಅಂಚಿ ಅಫಜಲಪುರ ತಾಲ್ಲೂಕು
೨೪) ಭಾರತದ ಹಬ್ಬ ಹರಿದಿನಗಳು ಪ್ರೊ. ಡಿ. ಟಿ. ರಂಗಸ್ವಾಮಿ ಪು-೯೭

ನಡೂ ಊರಾಗ ಹಣಮಂದೇವರ (ಹನುಮಂತ)
ಎಂಟು ದಿನಕ್ಕೊಮ್ಮ ಶರಣ ಸೋಮಾರ
ಜಾತರಾಗುತ್ತಿತ್ತು ಮಲ್ಲಾಬಾದಿ ಊರ
ಆಣೆಪೀಣೆ ನಮ್ಮ ಹೋರಿ ಮ್ಯಾಲ ಚಿಕ್ಕೋ"[೧೩]*

"ಡೊಳ್ಳು ಬಡಿಯೋ ಡೊಂಬರ ಪೋರಿ
ಡೊಂಬರ ಪೋರ್‍ಗಿ ಎರಡಾಟ
ಬ್ಯಾಣಕ್ಕೀಗಿ ಮೂರಾಟ
ನಂದಿ ಕೋಲಿಗಿ ನಾಲ್ಕಾಟ
ಬಸಪ್ಪನ ಹೋರಿಗಿ ಹಣ್ಕಟ್
ನಮ್ಮ ಹೋರಿಗಿ ಭಾಸಿಂಗ್
ಆಣೆಪೀಣೆ ನಮ್ಮ ಹೋರಿ ಪೀಡಾವಳಿಚಿಕ್ಕೋ"[೧೪]*

"ಕರಿ" ಹೋರಿ ಕಾಮನ ಕಂಟಿ
ಬಿಳಿ ಹೋರಿ ಭೀಮನ ಕಂಟಿ
ಒತ್ತಿ ಹೊಡೆದರ ಒಂದೇ ಕಂಟಿ
ಮುತ್ತಿನಂಥ ಹೋರಿಹುಟ್ಟಿ
ಹೋರಿ ಕೊಳ್ಳಾಗ ಗೆಜ್ಜೆ ಕಟ್ಟಿ
ಗೆಜ್ಜೆ ಹೋಯ್ತು ಭಂಕಾ ಪುರಕ
ಭಂಕಾಪುರದವರು ಭಂಟರು
ನಮ್ಮೂರವರು ನಂಟರು
ಆಣೆಪೀಣೆ ನಮ್ಮ ಹೋರಿ ಪೀಡಾವಳಿ ಚಿಕ್ಕೋ"[೧೫]*

ಎತ್ತಿನ ಹಾಡು:- "ಏಳೂರ ಗುಡ್ಡದಾಗ
ಏನೇನಾದ ಏನೇನಿಲ್ಲ
ಹೊಡಿಹುಲ್ಲಾದ ಮಡಿನೀರಾದ
ಅಣ್ಣನೆತ್ತ ಬಣ್ಣಮೇಯ್ತು
ಕಾಕನೆತ್ತು ಕಾರೇಳು ಮೇಯ್ತು
ಬೀಗನೆತ್ತು ಬಿಲ್ಲು ಮೇಯ್ತು
ನಮ್ಮೆತ್ತು ಹುಲ್ಲು ಮೇಯ್ತು
ಆಣೆಪೀಣೆ ನಮ್ಮ ಎತ್ತಿನ ಮ್ಯಾಲಚಿಕ್ಕೋ"[೧೬]*

---

೧೩) ವಿಠಲ ಮಲಕಪ್ಪ ಭಾವಿಕಟ್ಟೆ ರೇವೂರ (ಬಿ) ಅಂಚೆ, ಅಫಜಲ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ
೧೪,೧೫) ವಿಠಲ ಮಲಕಪ್ಪ ಭಾವಿಕಟ್ಟೆ ರೇವೂರ (ಬಿ) ಅಂಚೆ,ಅಫಜಲ ಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ
೧೬) ಸಾಯಬಣ್ಣ ಮತ್ತಪ್ಪ ಗ್ಯಾಂಗಮನ್ ಮಲ್ಲಾಬಾದ ಅಂಚೆ, ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

"ಲಕ್ಕಪ್ಪ ಲಕ್ಕಪ್ಪ ಲಾಲೋ
ಹನ್ನೆರಡೆತ್ತಿನ ಬಾಲೋ
ಬಾಲ ಮ್ಯಾಲ ನವಿಲೊ
ನವಿಲ ಪುಚ್ಛಾ ಕಿತ್ತಿ
ಚಿಗರಿ ಕೋಡಿಗಿ ಹಚ್ಚಿ
ಚಿಗರಿ ಹೊಡೊ ಜಾಣ
ಯಾವೂರ ತಾನss
ಬೀದನೂರ ತಾನss

ಬೀದನೂರ ಗೌಡ ಏನಾಗಿಸತ್ತ
ಅವನಿಗೇನು ಧಾಡಿ ಹುಣಸಿನ ರಾಡಿ
ಜೋಳದ ಹಿಟ್ಟ ಝಾಡಿಸಿಕೊಟ್ಟ
ಗೋದಿ ಹಿಟ್ಟ ಬೀಸಿಕೊಟ್ಟ
ಮೂಕಳ್ಯಾಗ ಮೂರು ಬಾಯ್ಯಾಗ ಮೂರು
ನೋಣ ಹೊಕ್ಕು ಸತ್ತ
ಆಣೆಪೀಣೆ ನಮ್ಮೆತ್ತಿನ ಮ್ಯಾಲ ಚಿಕ್ಕೋ"[೧೭]*

ಹಸುವಿನ ಹಾಡು;-

"ಆಕಳಆಕಳ ಇದಿರಬೇಕು
ಬಾಂದs-ಪೀಂದಾs ಮೈದಿರಬೇಕು
ಭುರಭುರ ಹಾಲ ಹಿಂಡಿರಬೇಕು
ಒಲಿಮ್ಯಾಲ ಕಾಸಲಿಕ್ಕಿಟ್ಟಿರಬೇಕು.
ಬೆಕ್ಕು ಬಂದು ಕುಡದಿರಬೇಕು
ಆಯಿ ಬಂದು ಹೊಡಿತಿರಬೇಕು
ಮುತ್ಯಾ ಬಂದು ಬಿಡಿಸಿರಬೇಕು
ಆಣೆಪೀಣೆ ನಮ್ಮ ಆಕಳ ಪೀಡಾವಳಿ ಚಿಕ್ಕೊ"[೧೮]*

"ಕಾಮನಾಕಳು ಕರಿ ಆಕಳು
ಭೀಮನಾಕಳು ಬಿಳಿಆಕಳು
ನಮ್ಮ ಆಕಳು ಕೆಂಪು ಆಕಳು
ದೀಪಾವಳಿಕೆ ಬೆಳ್ಗೋಣ
ಆಕಳ ಪೀಡಾ ಕಳೆಯೋಣ
ಜಯವಾಗಲೆಂದು ಹಾಡೋಣ
ಆಣೆಪೀಣೆ ನಮ್ಮ ಆಕಳ ಪೀಡೊವಳಿ ಚಿಕ್ಕೋ"[೧೯]

೧೭,೧೮) ಸಾಯಬಣ್ಣ ಮತ್ತಪ್ಪ ಗ್ಯಾಂಗಮೆನ್ ಮಲ್ಲಾಬಾದ-ಅಂಚೆ ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

"ಲಕ್ಕಪ್ಪ ಲಕ್ಕಪ್ಪ ಲಾಲೊ
ಲಕ್ಕಿ ಕಂಟ್ಯಾಗ ಜೇನೊ
ಜೇನು ಬಿಡಿಸಾಂವ ಜಾಣೆರಬೇಕು
ಜಾಣ್ಗೊಂದು ಅಂಗಿರಬೇಕು
ಅಂಗಿಗೊಂದು ಕಿಸೆಯಿರಬೇಕು
ಕಿಸ್ಯಾದಾಗೊಂದು ದುಡ್ಡಿರಬೇಕು
ದುಡ್ಡಿನ ಬೆಲ್ಲ ತರಸಿರಬೇಕು
ಆಕಳ ಗಿಣ್ಣ ಕಾಸಿರಬೇಕು
ಫರಕ ಫುರಕ್ ಸುರದಿರಬೇಕು
ಅಡಕಲ ಸಂದ್ಯಾಗ ಹೇತಿರಬೇಕು
ಅತ್ತಿ ಕೈಲೆ ಬಳಸಿರಬೇಕು.
ಮಾವನ ತಲಿಮ್ಯಾಲ ಹೊರಸಿರಬೇಕು.
ಆಣೆಪೀಣೆ ನಮ್ಮ ಆಕಳ ಮ್ಯಾಲ ಚಿಕ್ಕೋ"[೨೦]

"ಹಂಡಾಕಳೋ ಭಂಡಾಕಳೊ
ಕಲಬುರಗಿ ಕಾಶಾಕಳೊ
ಕಳ್ಳರ ಕೈಯ್ಯಾಗ ಬೆಳ್ಳಿಯ ಕುಡ್ಗೋಲು
ಬೆಳ್ಳಿಯ ಕುಡ್ಗೋಲಿಗಿ ಮಾರಮಾಹುಲ್ಲು
ಮಾರ ಮಾರ ಹುಲ್ಲಿಗಿ ಬೋರ ಬೋರೆ ಹಾಲು
ಬೋರ ಬೋರ ಹಾಲಿಗಿ ಘಟ್ಟಿ ಘಟ್ಟಿ ಮಸರ
ಘಟ್ಟಿ ಘಟ್ಟಿ ಮಸರೀಗಿ ಕಳ್‌ಕಳ್ ತುಪ್ಪ
ಕಳ್‌ಕಳ್ ತುಪ್ಪಿಗಿ ಬಳ್‌ಬಳ್ ರೊಕ್ಕ
ಆಣೆಪೀಣೆ ನಮ್ಮ ಆಕಳ ಪೀಡಾವಳಿಚಿಕ್ಕೋ"[೨೧]*

"ಆಕಳ ಆಕಳ ಇದಿರಬೇಕು
ಆಕಳ ಗಿಣ್ಣ ಕಾಸಿರಬೇಕು
ಫರಕs ಫುರಕs ಸುರದಿರಬೇಕು
ಮೂಲ್ಯಾಗ ಕುಂತು ಹೇತಿರಬೇಕು
ಅತ್ತಿಕೈಲೆ ಬಳಸಿರಬೇಕು
ಮಾವನ ತಲಿಮ್ಯಾಲ ಹೊರಸಿರಬೇಕೊ
ಆಣೆಪೀಣೆ ನಮ್ಮ ಆಕಳ ಪೀಡಾವಳಿ ಚಿಕ್ಕೋ"[೨೨]*

ಕುರಿಯ ಹಾಡು:-

" ಛೈ ಛೈ ಕೆಬ್ಬಾಗ ಕೈ

೨೦,೨೧,೨೨) ಸಾಯಬಣ್ಣ ಮಕ್ತಪ್ಪ ಗ್ಯಾಂಗಮೆನ್, ಮಲ್ಲಾಬಾದ್-ಅಂಚೆ,ಅಫಜಲಪುರ ತಾಲ್ಲೂಕು ಗುಲ್ಬಾರ್ಗ ಜಿಲ್ಲೆ

ನಾಳೀಗಿ ಬಂದು ಜ್ವಾಳ ಕೊಯ್ಯಿ
ನಾಡಿದ್ದು ಬಂದು ಕೂಲಿ ಒಯ್ಯಿ
ಆಣೆಪೀಣೆ ನಮ್ಮ ಕುರಿಪೀಡಾವಳಿ ಚಿಕ್ಕೋ"[೨೩]*

"ಛೈ ಛೈ ಜಾಲಿಕಾಯಿ
ನಾಳೀಗಿ ಬಂದು ಕೊನಿ ಕೊಯ್ಯಿ
ನಾಡದ್ದು ಬಂದು ಕೂಲಿ ಒಯ್ಯಿ
ಆಣೆಪೀಣೆ ನಮ್ಮ ಕುರಿ ಮ್ಯಾಲಿಚಿಕ್ಕೋ"[೨೪]*

ಕೋಣೆನ ಹಾಡು:- "ಕುಡ್ಡ ಕುಂಬಾರ ಕ್ವಾಣತಂದಾನ
ತೊಡ್ಡ ಬಡಿಲಾರದೆ ತಾನೆ ತಿಂದಾನ
ಮಕ್ಕಳ ಬಂದರೆ ಝಾಡಿಸಿ ಒದ್ದಾನ
ಹೆಂಡತಿಬಂದರ ಕರ್‍ಕೊಂಡು ಉಂಡಾನ
ಆಣೆಪೀಣೆ ನಮ್ಮ ಕ್ವಾಣೆನ ಮ್ಯಾಲ ಚಿಕ್ಕೋ"[೨೫]*

"ಲಕ್ಕಪ್ಪ ಲಕ್ಕಪ್ಪ ಲಾಲೊ
ಲಕ್ಕಿ ಕಂಟಿ ಸಾಲೊ
ಸಾಲನ್ಯಾಗೊಂದು ಕ್ವಾಣ
ಆ ಕ್ವಾಣ ತರಿಸಿ
ಊರ ತುಂಬಾ ಮೆರಸಿ
ಆಣೆಪೀಣೆ ನಮ್ಮ ಕ್ವಾಣೆನ ಪೀಡಾವಳಿಚಿಕ್ಕೊ"[೨೬]*

ಎಮ್ಮೆಹಾಡು:- "ಟುರs ಟುರs ಎಮ್ಮಿ ಕಾಯಿದೇವಣ್ಣಾ
ಘಟ್ಟಿ ಘಟ್ಟಿ ಮೊಸರ ಉಂಡೆವಣ್ಣಾ
ಸರs ಸುರs ಮಜ್ಜಿಗಿ ಕುಡದೇವಣ್ಣಾ
ಕಳ್ ಕಳ ತುಪ್ಪ ಸುರದೇವಣ್ಣಾ
ಆಣೆಪೀಣೆ ನಮ್ಮ ಎಮ್ಮಿ ಪೀಡಾವಳಿಚಿಕ್ಕೋ"[೨೭]*

"ಟ್ರು ಟ್ರು ಎಮ್ಮೆ ಕಾಯುತಾ ಬಂದೆ
ಗುಡ್ಡಾ ಗುಡ್ಡಾ ಮೇಯಿಸುತ ಬಂದೆ
ಹೊರಿ ಹೊರಿ ಹುಲ್ಲ ಎಮ್ಮೆಗೆ ತಂದೆ
ಆಣೆಪೀಣೆ ನಮ್ಮ ಎಮ್ಮಿ ಪೀಡಾವಳಿಚಿಕ್ಕೋ"[೨೮]*

ದೀಪಾವಳಿ ಹಬ್ಬದಲ್ಲಿ ಹಾಲುಮತ ಕುರುಬರದು ಒಂದು ವೈಶಿಷ್ಟ್ಯವಾಗಿದೆ.

೨೩,೨೪) ಬಸಪ್ಪ ಭೀಮಪ್ಪಾ ಮೋಟಗಿ, ಮಲ್ಲಾಬಾದ್-ಅಂಚಿ,ಅಫಜಲಪುರ ತಾಲ್ಲೂಕು, ಗುಲ್ಬಾರ್ಗ ಜಿಲ್ಲೆ
೨೫) ಶರಣಪ್ಪ ಲಕ್ಕಪ್ಪಸಿಂಗೆ, ಮಲ್ಲಾಬಾದ್-ಅಂಚಿ,ಅಫಜಲಪುರ ತಾಲ್ಲೂಕು, ಗುಲ್ಬಾರ್ಗ ಜಿಲ್ಲೆ
೨೬,೨೭,೨೮) ಶರಣಪ್ಪ ಲಕ್ಕಪ್ಪಸಿಂಗೆ, ಮಲ್ಲಾಬಾದ್-ಅಂಚಿ,ಅಫಜಲಪುರ ತಾಲ್ಲೂಕು, ಗುಲ್ಬಾರ್ಗ ಜಿಲ್ಲೆ

ಇವರು ಮೊದಲು ನೆರಳಿಲ್ಲದ ಐದು ಕಲ್ಲುಗಳು ತಂದು ಕುರಿಹಟ್ಟಿಯಲ್ಲಿಡುವರು. ಇದಕ್ಕೆ ಹಿನ್ನೆಲೆ ಹೀಗೆ ಊಹಿಸುತ್ತಾರೆ. ಬಿದ್ದ ಪಾಂಡವರಿಗೆ ಎಬ್ಬಿಸುವ ನಂಬಿಕೆಯಾಗಿದೆ. ಕಲ್ಲುಗಳಿಗೆ ಸುಣ್ಣ-ಬಣ್ಣ ಹಚ್ಚಿ ನೈವೇದ್ಯ ಹಿಡಿಯುವರು ದೀಪಾವಳಿ ಹಬ್ಬದಲ್ಲಿ ಕುರಿಹಟ್ಟಿಯಾಗಲಿ, ದನದಕೊಟ್ಟಿಗೆಯಾಗಲಿ, ಕಸಗೂಡಿಸದೆ ಹಾಗೆ ಬಿಟ್ಟು ಪಾಡ್ಯದ ದಿನದಂದು ಮಾತ್ರ, ಐದು ದಿನದ ಗೊಬ್ಬರಾಗಲಿ, ಸಗಣೆಯಾಗಲಿ, ಒಂದೆಡೆ ಕ್ರೋಢೀಕರಿಸುವರು. ಅಂದಿನ ದಿವಸ ಲಕ್ಕಿ ಅಥವಾ ಅವರೆ ಹೂವುಗಳ ಗೊಂಚಲು ತಂದು, ಗೊಬ್ಬರದ ಸುತ್ತ-ಮುತ್ತಲು ಗುಡಿಯ ಆಕಾರದಲ್ಲಿ ಕಮಾನಿನಂತೆ ನಿಲ್ಲಿಸುವರು. ಆ ಕಮಾನಿನಲ್ಲಿ ಗೋಧಿ ಕಣಕದ ಹಣತೆಯೊಳು ಎಣ್ಣೆಹಾಕಿ ಅರಳಿಯಿಂದ ಬತ್ತಿ ಹೊಸೆದು ಅದರೊಳಿಟ್ಟು ದೀಪ ಹಚ್ಚುತ್ತಾರೆ. ಹಾಗೆಯೇ ಆ ಕಮಾನಿನೊಳಗೆ ಬೀರಣ್ಣ ಅಥವಾ ಮಾಳಿಂಗರಾಯ ದೇವರ ಭಾವ ಚಿತ್ರಗಳಿಟ್ಟು ಉಣ್ಣೆ ಕತ್ತರಿಸುವ ಕತ್ತರಿಯಿಟ್ಟು ಕುರುಬ ಜನಾಂಗದವರು ಪೂಜಿಸುವ ಪರಂಪರೆ ದಟ್ಟವಾಗಿ ಬೆಳೆದು ಬಂದಿದೆ.

ಪಾಡ್ಯದ ದಿನದಂದು ಹಟ್ಟಿಯಿಂದ ಕುರಿಗಳಿಗೆ ಹೊರಹಾಕುವಾಗ, ಕುರಿದೊಡ್ಡಿಯ ಬಾಗಿಲ ಹೊರಗೆ ಉರಿಹಚ್ಚಿ ಕುರಿಗಳಿಗೆ ಹಾರಿಸುತ್ತಾರೆ. ಈ ಉರಿ ದಾಟುವಾಗ ಕುರಿಗಳು ಮೇಲಿನಿಂದ ಜಿಗಿದರೆ ತಾವು ಕೈಗೊಳ್ಳುವ ಕಾರ್ಯದಲ್ಲಿ ಯಶಸ್ಸು ಸಿಗುವುದೆಂಬ ನಂಬಿಕೆ ಇವರದಾಗಿದೆ. ಈ ಹಟ್ಟಿ ಪೂಜೆಗೆ ನೈವೇದ್ಯ ಹಿಡಿದ ನಂತರ ಐದು ಜನ ಸುಮಂಗಲೆಯರಿಂದ ಆಗಲು ಊಟ ಮಾಡಿಸುವರು. ಊಟ ಮುಗಿದಾಗ ಒಂದು ಮಡಕೆಯಲ್ಲಿ 'ಹಾಲು-ಸಾಂವಿಗೆ' ತರಗ ಹಾಕಿ ಕುರಿದೊಡ್ಡಿಯಲ್ಲಿಯೇ ಉಕ್ಕಿಸುತ್ತಾರೆ. ಹಾಲು ಪೂರ್ವ ಅಥವಾ ದಕ್ಷಿಣಕ್ಕೆ ಹರಿದರೆ ಒಳ್ಳೆಯದೆಂದು ಭಾವನೆಯಾಗಿದೆ. ಇದಾದ ಮೇಲೆ ಪೂಜೆಗಾಗಿ ಇಟ್ಟಿದ್ದ ಹಣ್ಣು-ಹಂಪಲು ಮಕ್ಕಳಿಗೆ ಹಂಚುವರು. ಕೂಡಿಸಿಟ್ಟ ಗೊಬ್ಬರ ತಿಪ್ಪೆಯಲ್ಲಿ ಹಾಕಿದರೆ ತಿಪ್ಪೆಗೊಬ್ಬರ ಹೆಚ್ಚುವುದೆಂಬ ನಂಬಿಕೆ ಗಾಢವಾಗಿದೆ. ಕೆಲವರು ಗೊಬ್ಬರ ಮತ್ತು ಸಗಣಿ ಒಟ್ಟಿಗೆ ಸೇರಿಸಿ ನೀರಿನಿಂದ ಹದಮಾಡಿ ಕುಳ್ಳು ತಟ್ಟುವರು. ಆ ಕುಳ್ಳುಗಳು ಉರಿಸಿ ಮಾಡಿದ ಅಡಿಗೆಯಿಂದ ಹಬ್ಬದ ನಿಮಿತ್ಯ ನೈವೇದ್ಯ ಕೊಡುವರು. ಕೆಲವೊಂದು ಹಳ್ಳಿಯಲ್ಲಿ ಹಾಲುಮತದ ಕುರುಬರು ದೊಡ್ಡಿಯಲ್ಲಿ ಕರಿಉಣ್ಣೆದಾರ ಹುರಿಹಾಕಿ ಎಲ್ಲರೂ ತಂತಮ್ಮ ಕೈಯಲ್ಲಿ ಕಟ್ಟಿಕೊಳ್ಳುವ ಸಂಪ್ರದಾಯ ಈಗಲೂ ಇದೆ. ಜನಪದರ ಬಾಯಿಂದ-ಬಾಯಿಗೆ ಹರಡಿಕೊಂಡು ಬಂದಿರುವ ಪದ್ಯ ಪದ್ಯ ರೂಪದಲ್ಲಿರುವ ಒಂದು ವಾಕ್ಯ ಕುರಿಗಳ ಮಧ್ಯ ದಲ್ಲಿ ನಿಂತು ಮಂತ್ರ ಓದಿದ ಹಾಗೆ ಜಪ ಮಾಡುವರು.

"ಕುರಿಗೆ ಕುರಿಯಾಗಲಿ ಮರಿಗೆ ಮರಿಯಾಗಲಿ
ತೋಳದ ಕುಂಡ್ಯಾಗ ಹುಳಬೀಳಲಿ
ಆಣಿಪೀಣಿ ಔಂದ ಬರತಾಽದ
ನಮ್ಮ ಕುರಿ ಪೀಡಾವಳಿ ಹೊಳಿ ಅಚ್ಯಾಕ"[೨೯]*

ಕೆಲವು ಕಡೆಗೆ ಕುರುಬ ಜನಾಂಗದವರು ದೀಪಾವಳಿಯಲ್ಲಿ ತಮ್ಮ ಧರ್ಮದ

---

೨೯) ಲಕ್ಷ್ಮಣ ಭೂತಾಳಿ ಪೂಜಾರಿ, ಮಲ್ಲಾಬಾದ್-ಅಂಚೆ,ಅಫಜಲಪೂರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

ದೇವರಾದ ಮಾಳ್ಳಿಂಗರಾಯ ಭೀರಣ್ಣದೇವರ ಹೆಸರಿನ ಮೇಲೆ ಅನ್ನದಲ್ಲಿ ಬಾಳೆ ಹಣ್ಣಿನ ಅಭಿಷೇಕ ತಯಾರಿಸಿ ಊಟ ಮಾಡಿಸುವರು. ಬೆಳಿಗ್ಗೆ ೧೦-೦೦ ಘಂಟೆಗೆ ಸರಿಯಾಗಿ ದೇವರಿಗೆ ಆರತಿ ಬೆಳಗುವರು. ಒಂದು ತಟ್ಟೆತುಂಬಾ ಅನ್ನವಿಟ್ಟು ಅನ್ನದ ಮೇಲೆ ಗೋದಿ ಕಣಕ ದಿಂದ ತಯಾರಿಸಿದ ಹಣತೆಯಲ್ಲಿ ದೀಪಹಚ್ಚಿ "ತನಾರತಿ" ಮಾಡಿ ಬೆಳಗುತ್ತಾರೆ. ನಂತರ ಪೂಜೆಗೆ ಬಂದಿರುವರೆಲ್ಲರಿಗೂ ಊಟ ಮಾಡಿಸುವರು. ಅಂದಿನಿಂದ ಪಂಚಮಿವರೆಗೆ ಬಾಳೆ ಹಣ್ಣು ತಿನ್ನುವರು. ಕಡೆ ಪಂಚಮಿ ಹಬ್ಬ ಮುಗಿದ ನಂತರ ಒಂದು ವರ್ಷದವರೆಗೆ ಬಾಳೆಹಣ್ಣು ತಿನ್ನಲಾರರು. ಹಬ್ಬದ ದಿನದಂದು ತಮ್ಮ ವಾದ್ಯಗಳಾದ ಡೊಳ್ಳು-ಝಾಂಜ್ ಹಾಗೂ ಕರಣೆಯೊಂದಿಗೆ ಪಲ್ಲಕ್ಕೋತ್ಸವ ನಡೆಸುವರು.

ದೀಪಾವಳಿ ಪಾಡ್ಯಾದ ದಿನದಂದು ದನದ ಕೊಟ್ಟಿಗೆಗೆ ಹಟ್ಟಿ ಮಂಗವ್ವನ ಪೂಜೆ ಮಾಡಿದ್ದಕ್ಕೆ ಕೊಂತೆಮ್ಮನ ಪೂಜೆ ಎನ್ನುವ ಅಭಿಪ್ರಾಯ ಇದ್ದು ಕೊಂತೆವ್ವ. ಎಂದರೆ, ಕೋಟೆ ದೇವತೆ, ಕೊಂಚ ಬಳಕೆ ವಂಶದವರೆಂದು ಸಾಮಾನ್ಯ ಜನರು ಭಾವಿಸಿದ್ದಾರೆ. ಇದು ಕ್ಷೇತ್ರಿಯ ಹಬ್ಬವೆಂದು ಕೆಲವರ ಅಭಿಪ್ರಾಯ. ಕೊಂತೆವ್ವಳು ಒಂದು ಕೋಟೆದೇವತೆ. (ಕೋಟೆಕಾಯುವಳು) ಸಗಣೆಯಿಂದ ಕೋಟೆ ಆಕಾರ ಮಾಡಿ ಒಂದು ದ್ವಾರ ಬಾಗಿಲಿನಂತೆ ತೆರೆದು ಬಿಟ್ಟಿರುತ್ತಾರೆ. ದೇವತೆಯ ಸುತ್ತಲು ವಿಧವಿಧದ ಕಾಳುಗಳು ಚೆಲ್ಲುವರು. ಒಟ್ಟಿನಲ್ಲಿ ಕೋಟೆಕಾಯುವ ದೇವತೆ ಕೊಂತೆವ್ವನ ಹಬ್ಬವೆಂದು 'ಹಾಲು ಮತ' (ಕುರುಬ) ಜನಾಂಗದವರು ಗಾಢವಾಗಿ ನಂಬಿಕೊಂಡು ಬಂದಿದ್ದಾರೆ. ಒಟ್ಟಿನಲ್ಲಿ ದೀಪಾವಳಿಹಬ್ಬವು ನರಕಾಸುರನಂಥ 'ತ್ಯಾಗ ಜೀವಿಗಳ' ಉತ್ಕರ್ಷಕ್ಕಾಗಿ ಕೋರುವ ಬದುಕಿನಲ್ಲಿ ಶಾಂತಿ-ಸಮಾಧಾನಗಳು ಪ್ರಾಪ್ತವಾಗಲು ಪ್ರಾರ್ಥಿಸುವ ಆತ್ಮೋನ್ನತಿಗಾಗಿ ಆಚರಿಸುವ ವಿಶಿಷ್ಟ ಹಬ್ಬವಾಗಿರುವುದು."[೩೦]*

---

೩೦) ಶಿವಗೊಂಡಪ್ಪ ದುಂಡಪ್ಪ ಗೌರ, ನಂದರಗಾ-ಅಂಚೆ,ಅಫಜಲಪುರ ತಾಲ್ಲೂಕು, ಗುಲ್ಬರ್ಗ ಜಿಲ್ಲೆ

೭. ಸಂಕ್ರಾಂತಿ

ಭಾರತ ದೇಶದ ಮಹತ್ವದ ಹಬ್ಬಗಳಲ್ಲಿ ಸಂಕ್ರಾಂತಿಯೂ ಹಿಂದೂಗಳ ಹಬ್ಬವಾಗಿದೆ. "ಕೊಳ್ಳಿ ಎಳ್ಳು ಸಕ್ಕರೆ ನಮ್ಮ ನಿಮ್ಮ ಅಕ್ಕರೆ" ಎಂದೂ ಇಲ್ಲವೆ "ಕೊಡಕೊಳಗಳ ಉಭಯಾಭವ, ಈ ಎಳ್ಳು ಬೆಲ್ಲ" ಹೊಸತಿಗೆ ಹೊಸಲಾಗಿದೆ. ಕೇಳ್, ಸಂಕ್ರಾಂತಿಯೆ ಸೊಲ್ಲ ಎಂದು ಗೆಳೆಯರಿಗೋ ಹಿರಿಯರಿಗೊ ಮನೆ ಮನೆಗೆ ಭೆಟ್ಟಿಕೊಟ್ಟು ಮಿತ್ರರು-ಬಳಗದವರು ಪರಸ್ಪರರು ಭೆಟ್ಟಿಯಾಗುವರು. ಸ್ನೇಹ ಸಂವರ್ಧನೆಗೆ ಸಂಕ್ರಾಂತಿಯಂತಹ ಹಬ್ಬಗಳು ಅನುಕೂಲ ಪ್ರಸಂಗಗಳು "ಬಂಧುಗಳ ದರ್ಶನ ಫಲವಲ ಸಂಸಾರ ತರುವಿಂಗೆ" ಎಂದು ಕುಮಾರವ್ಯಾಸನು ನುಡಿದ ಮಾತಿನಲ್ಲಿ ಅಡಗಿದ ಅರ್ಥವೆಷ್ಟು! ನಮ್ಮ ಸಂಸ್ಕೃತಿ ಸ್ಫುಟವಾಗಿ ಪ್ರತಿಬಿಂಬಗೊಂಡಿದೆ. ಈ ನುಡಿಗಳಲ್ಲಿ ಸಂಸಾರವೆಂಬ ವೃಕ್ಷಕ್ಕೆ ಬಂಧುಗಳ ದರ್ಶನವೇ ಫಲವಿದ್ದಂತೆ ಸಂಸಾರದಲ್ಲಿ ಇಂತಹ ಸಂದರ್ಶನ ಸಂತೋಷ ಕೂಟಗಳು ಜೀವನಕ್ಕೆ ಚೇತನವನ್ನು ನೀಡುತ್ತವೆ. ಜೀವನವು ಬದುಕಲು ಯೋಗ್ಯವಾಗಿದೆ, ಎಂಬ ಭಾವನೆ ತಂದು ಕೊಡುವ ಶುಭ ಪ್ರಸಂಗಗಳಲ್ಲಿ ಸಂಕ್ರಾಂತಿಯೂ ಒಂದಾಗಿದೆ.

ಸಂಕ್ರಾಂತಿಯ ಹಬ್ಬ ಭಾರತೀಯರಿಗೆ ಒಂದು ಪ್ರಮುಖ ಹಬ್ಬವಾಗಿ ಇದು ಸಾಮಾನ್ಯವಾಗಿ ಜನವರಿ ಹದಿನಾಲ್ಕನೆಯ ದಿನಾಂಕದಂದು ಬರುತ್ತದೆ. ಸಂಕ್ರಾಂತಿಯೆಂದರೆ ಉಜ್ವಲವಾದ ಬೆಳಕು, ಜೀವನದ ಹೊಸ ತಿರುವು ಇದು ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಆಚರಿಸುವ ಒಂದು ವಿಶಿಷ್ಟ ಹಬ್ಬವಾಗಿದೆ. ಇದು ಸೂರ್ಯದೇವನ ಹಬ್ಬವೆಂತಲೂ ಕರೆಯುತ್ತಾರೆ. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶಿಸುವದಕ್ಕೆ ಸಂಕ್ರಾಂತಿ ಎನ್ನುತ್ತೇವೆ. ಈ ದಿನ ಸೂರ್ಯನು ಮಕರ ಸಂಕ್ರಾಂತಿ ವೃತ್ತದಿಂದ ಕರ್ಕಾಟಕ ವೃತ್ತದ ಕಡೆಗೆ ಚಲಿಸಲು ಆರಂಭಿಸುತ್ತಾನೆ. ಈ ದಿನದಿಂದ ಸೂರ್ಯನ ಗತಿ ದಕ್ಷಿಣದ ಕಡೆಯಿಂದ ಉತ್ತರದ ಕಡೆಗೆ ಪ್ರಾರಂಭವಾಗುತ್ತದೆ. ಇದನ್ನು ಉತ್ತರಾಯಣ ಪುಣ್ಯಕಾಲದ ಆರಂಭವೆಂದು ಕರೆಯುತ್ತಾರೆ. ಮಳೆ-ಗಾಲ ಚಳಿಗಾಲಗಳಲ್ಲಿ ಸೂರ್ಯನ ಪ್ರಖರತೆ ಕಂಡು ಬರುವದಿಲ್ಲ. ಸಾಮಾನ್ಯವಾಗಿ ಜನವರಿ ೧೪ ರಂದು ಬರುವ ಮಕರ ಸಂಕ್ರಾಮಣವು ಸೂರ್ಯನ ಪ್ರಖರತೆಯನ್ನು ಹೆಚ್ಚಿಸುತ್ತ ಹೋಗುವುದು. ಅಂದಿನಿಂದ ಹಗಲುಗಳು ದೀರ್ಘವಾಗುತ್ತ ಹೋಗುವವು. ಭಾರತೀಯರ ದೃಷ್ಟಿಯಲ್ಲಿ ಮಕರ ಸಂಕ್ರಮಣವು, ಉತ್ತರಾಯಣದ ಪುಣ್ಯಕಾಲವೆಂದು ಪರಿಗಣಿಸಲ್ಪಟ್ಟಿದೆ. ಉತ್ತರಾಯಣದಲ್ಲಿ ಮರಣ ಹೊಂದುವವರು ಸ್ವರ್ಗ ಸೇರುತ್ತಾರೆಂಬ ಕಲ್ಪನೆ ಇಚ್ಛಾ ಮರಣಿಗಳಾದ ಭೀಷ್ಮಾಚಾರ್ಯರು ಶರಶಯ್ಯೆಯ ಮೇಲೆ ಮೃತ್ಯುಮುಖರಾಗಿ ಮಲಗಿದ್ದರೂ ಉತ್ತರಾಯಣವು ಸನ್ನಿಹಿತವಾಗುವವರೆಗೆ ಜೀವ ಹಿಡಿದುಕೊಂಡೆ ಇದ್ದರಂತೆ. ಆಸ್ತಿಕರಾದ ಭಾರತೀಯರ ಕಣ್ಣಲ್ಲಿ ಸೂರ್ಯನೆಂದರೆ ಬರಿ ಬೆಂಕಿ ಬೆಳಕುಗಳ ಪಿಂಡವಲ್ಲ. ಸೂರ್ಯನು ಸೂರ್ಯನಾರಾಯಣ ಭಗವಂತನ, ಸಾನ್ನಿಧ್ಯವೂ ಎಲ್ಲಿದ್ದರೂ ದೊರಕಬೇಕಾಗಿ ಅದು ಭಗವಾನ್ನಾರಾಯಣನಲ್ಲಿ ಎಲ್ಲಾ ದೇವತಾಕಲ್ಪನೆಗೂ ಸೂರ್ಯನಾರಾಯಣನು ಆದಿಮೂಲ. ಜಗತ್ತಿಗೆ ಜೀವಚೇತನ ನೀಡುವ ದಿವ್ಯ ಅಗಾಧ ಶಕ್ತಿ ಸೂರ್ಯದೇವ, ಅಂತೆಯೇ

ಸೂರ್ಯನೆಂದರೆ ಜಗಚ್ಚಕ್ಷುವೆಂದು ಋಷಿಗಳು ಕರೆದಿದ್ದಾರೆ. ಋಗ್ವೇದದಲ್ಲಿ ಸೂರ್ಯ ಸ್ವರ್ಗದ ಸ್ವರ್ಗಾಭರಣವೆಂದು ಕರೆದಿದ್ದಾರೆ-ಪೂರ್ವದ ಆರ್ಯರು ಸೂರ್ಯೋಪಾಸನೆ ಮಾಡುತಿದ್ದರು. ದೈನಿಕ ತ್ರಿಕಾಲ ಸಂಧ್ಯಾವಂದನೆ ಸೂರ್ಯೋಪಾಸನೆಯೇ ಆಗಿದೆ.

ಭೌಗೋಲಿಕವಾಗಿ ಪ್ರತಿತಿಂಗಳೂ ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಸಂಕ್ರಮಿಸುತ್ತಲೇ ಇರುತ್ತಾನೆ. ಇವುಗಳಲ್ಲಿ ಜನವರಿ ೧೪ಕ್ಕೆ ಬರುವ ಸಂಕ್ರಮಣ ಜುಲೈ ೧೬ಕ್ಕೆ ಕರ್ಕಾಟಕ ಸಂಕ್ರಮಣ ಇವು ನಮಗೆ ಹಬ್ಬದ ದಿನಗಳು. ಸಂಕ್ರಾಂತಿಯ ಹಾಗೂ ಸಾಂಸ್ಕೃತಿಕ ಮಹತ್ವವು ಅಷ್ಟೇಗಮನಾರ್ಹವಾಗಿದೆ. ಮಕರ ಸಂಕ್ರಾಂತಿಯ ಹೊತ್ತಿಗೆ ಸುಗ್ಗಿಯಕಾಲ ಬಂದಿರುತ್ತದೆ. ಕಬ್ಬು ದವಸ-ಧಾನ್ಯ ಮನೆಯಲ್ಲಿ ಸಮೃದ್ಧಿಯಾಗಿ ಕಣಜ ತುಂಬಿರುವಾಗ ಮಕ್ಕಳಿಗೆ ಅಭ್ಯಂಜನ ಮಾಡಿಸಿ ಭೋಗಿಯ ಕರಿ ಎರೆಯುತ್ತಾರೆ. ಆರತಿ ಮಾಡುತ್ತಾರೆ. ಕಬ್ಬು ಕಡಲೆಯ ಗಿಡ, ಗಜ್ಜರಿ, ಬಾರಿ (ಕಾಯಿ) ಹಣ್ಣು-ಇವು ಸಾಂಕೇತಿಕವಾಗಿ ಧಾನ್ಯ-ಫಲ ಪಲ್ಯಗಳ ಸಮೃದ್ಧಿಯು ಸೂಚಿಸುತ್ತವೆ. ಸಂಕ್ರಾಂತಿಯು ಸುಗ್ಗಿಯ ಹಬ್ಬ. ಬಿತ್ತಿದ ಬೀಜಗಳು ಹುಟ್ಟಿ ಹುಲಸಾಗಿ ಬೆಳೆದು ಕೊಯ್ಲಾಗಿ, ಕಣದಲ್ಲಿ ಒಕ್ಕಣೆಮಾಡಿ ರಾಶಿರಾಶಿ ಹಾಕಿ ಮನೆಗೆ ತಂದು ಶೇಖರಿಸುವ ಸಂದರ್ಭದಲ್ಲಿ ಸಮೃದ್ಧಿಯ ಸನ್ನಿವೇಶದಲ್ಲಿ ಬರುವ ಹಬ್ಬ "ಸಂಕ್ರಾಂತಿ ಹಬ್ಬ ಬಂದಿತು ನಾಡಿಗೆ ಸುಖ-ಶಾಂತಿ ತಂದಿತು"[೨೩]* ಎಂಬುದು ನಾಣ್ನುಡಿಯೋಪಾದಿಯ ಹಿಗ್ಗಿನ ಮಾತಾಗಿದೆ.

"ಎತ್ತಿನ ಕೋಡಿಗೆ ದುಡ್ಡಿನ ಚೀಲ ಕಟ್ಟಿ ರಭಸದಿಂದ ಬಿಟ್ಟಿರುತ್ತಾರೆ"[೨೪]* ಧೈರ್ಯವಂತರಿದ್ದರೆ ಮುಂದೆ ಬಂದು ಎತ್ತಿಗೆ ತಡೆದು ದುಡ್ಡಿನ ಚೀಲ ಪಡೆಯುವ ವಾಡಿಕೆಯಿದೆ. ಎತ್ತುಗಳು ಮೆರೆಸುವುದು ಹಾಗೂ ಕೋಣಗಳು ಓಡಿಸುವದು ಮಾಡುವರು."[೨೫]* ಅವುಗಳ ಸ್ಪರ್ಧೆಕೂಡ ಏರ್ಪಡಿಸುತ್ತಾರೆ. "ತಮಿಳುನಾಡು ಆಂಧ್ರಗಳಲ್ಲಿ ಈ ಹಬ್ಬಕ್ಕೆ ಪೊಂಗಲ್ ಹಬ್ಬವೆಂದು ಕರೆಯುತ್ತಾರೆ."[೨೬]* ಸುಖ ಸಂತೋಷದ ದಿನದಂದು ಜನಪದರು ದುಃಖ ಮರೆತು ಒಬ್ಬರಿಗೊಬ್ಬರು ಪಾಲ್ಗೊಂಡು ಹಬ್ಬ ಆಚರಿಸಿ ಊರ ಶಾಂತಿಗೆ ದೀಪ ಹಚ್ಚುವ ದಿವ್ಯ ಕಾರ್ಯಕ್ರಮವು ನಡೆಯುವಂತೆ ನೋಡಿಕೊಳ್ಳುವರು ಈ ಹಬ್ಬವು ಉತ್ತರ ಕರ್ನಾಟಕದ ವಿಜಾಪುರಜಿಲ್ಲೆಯಲ್ಲಿ ಶ್ರೀ ಸಿದ್ಧರಾಮೇಶ್ವರ ದೇವಾಲಯದ ಜಾತ್ರೆ ಕೂಡ ನಡೆಯುತ್ತದೆ. ಅಂದು ನಗರದ ಜನತೆಯು ವಿಜಾಪುರದಲ್ಲಿ ವಾಸಿಸುವ ಜನರೆಲ್ಲರಿಗೂ ಒಳ್ಳೆಯ ಸಡಗರವೇ ಸಡಗರ ಹೀಗೆ ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕು ಸ್ಥಳದಲ್ಲಿಯೂ ಶ್ರೀ ಸಿದ್ಧರಾಮೇಶ್ವರ ಜಾತ್ರೆಯು ಅತಿ ವಿಜೃಂಭಣೆಯಿಂದ ನಡೆಸುತ್ತಾರೆ. ಇದೆ ತಾಲ್ಲೂಕಿನ ನಂದರಗಾ ಗ್ರಾಮದಲ್ಲಿಯೂ ಶ್ರೀಭೂತಾಳಸಿದ್ಧೇಶ್ವರ ಪಲ್ಲಕ್ಕೋತ್ಸವವು ನಡೆಯುತ್ತದೆ. ಅಫಜಲಪುರ ತಾಲ್ಲೂಕು ಕೇಂದ್ರ ಸ್ಥಳದಲ್ಲಿ ಪಲ್ಲಕ್ಕೋತ್ಸವ

---

೨೩) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ ಪುಟ-೬೧೮

೨೪,೨೫,೨೬) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ ಪುಟ-೬೧೮

ನಡೆಯುವ ಸಂದರ್ಭದಲ್ಲಿ ವೈವಿಧ್ಯತೆಯಲ್ಲಿ ಏಕತೆ ಎತ್ತಿ ತೋರಿಸುವ ಪುರುವಂತರಿಂದ ಬೆಡಗಿನ ವಚನಗಳ ಸುರಿಮಳೆಗರೆದು ಶಸ್ತ್ರಹಾಕುವ ಕ್ರಿಯೆ ನಡೆಯುತ್ತದೆ. ಈ ಜಾತ್ರೆಯಲ್ಲಿ ಲಕ್ಷಾಂತರ ರೂಪಾಯಿಗಳು ಖರ್ಚುಮಾಡಿ ಮದ್ದು ಸುಡುವ ರೂಢಿ ಬಹಳ ದಿನಗಳಿಂದಲೂ ನಡೆಯುತ್ತಾ ಬಂದಿದೆ. ದೂರದೂರದ ಊರುಗಳಿಂದ ಪ್ರಸಿದ್ಧ ಕಲಾವಿದರು ಗೀಗೀ ಮೇಳದವರು ಕಲೆಯ ಪ್ರದರ್ಶನ ನೀಡುತ್ತಾರೆ ರೈತರು ಸಂಕ್ರಾಂತಿಯಂದು ದನಗಳ ಪ್ರದರ್ಶನ ಮಾಡುತ್ತಾರೆ. ಮಹಾರಾಷ್ಟ್ರದ ಗಡಿಭಾಗದ ಜಿಲ್ಲೆಯಾಗಿರುವ ಸೋಲ್ಲಾಪುರ ಹಾಗೂ ಅದೇ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ದುಧನಿ ಗ್ರಾಮದಲ್ಲಿಯೂ ಶ್ರೀ ಸಿದ್ಧರಾಮೇಶ್ವರ ಜಾತ್ರೆಯು ಬಹು ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಾರೆ. ಈ ಬಗೆಯ ಆಚರಣೆ ಪರಸ್ಪರ ಸಿಹಿ (ಕುಸರೇಳ್ಳು)ಯನ್ನು ಕೊಡು-ಕೊಳ್ಳವುದು ಶುಭಕೋರುವುದು ಸಮೂಹ ಜೀವಿಗಳಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ಹಾಗೂ ಸಮೂಹಗಳ ಐಕ್ಯತೆ ಭಾವೈಕ್ಯತೆ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವ ಪೂರ್ಣವಾದ ಸಂಗತಿಯಾಗಿದೆ. ಇದೊಂದು ಅತ್ಯುತ್ತಮ ಆದರ್ಶಪ್ರಾಯ ಅನುಕರಣೀಯ ಸಾಮಾಜಿಕ ಸಂಪ್ರದಾಯವಾಗಿದೆ. ಇದು ಜಾತಿ-ಮತ, ಪಂಥ, ವರ್ಗಭೇದಗಳನ್ನು ಸಂಪೂರ್ಣವಾಗಿ ಬತ್ತಿ ಆಗುತವುದಾದರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವುದರಲ್ಲಿ ಸಂದೇಹವಿಲ್ಲ. ಹಬ್ಬಗಳ ಹಿಂದಿರುವ ಮೂಲ ಸಾಮಾಜಿಕ ಸದುದ್ದೇಶ ಇಂತಹ ಆಚರಣೆಗಳ ಮೂಲಕ ಸುಸ್ಪಷ್ಟವಾಗುವುದನ್ನು ನಿಚ್ಚಳವಾಗಿ ಗುರುತಿಸಬಹುದು.

---

೩೧) ಕಲ್ಲಪ್ಪ ಮಾರ್ಕಂಡಪ್ಪ ಪೂಜಾರಿ ಅಂಚೆ-ಚಿಂಚೋಳಿ ತಾಲ್ಲೂಕು, ಅಫಜಲಪುರ ಜಿಲ್ಲೆ

೮. ರಮ್‌ಜಾನ್

ರಮಜಾನ್ ಹಬ್ಬವು ಮುಸ್ಲಿಂ ಬಾಂಧವರಿಗೆ ಪವಿತ್ರ ಹಾಗೂ ಮಹತ್ವವಾದ ಹಬ್ಬವಾಗಿದೆ. ಇದರಲ್ಲಿ ಮುಖ್ಯವಾಗಿ ಇಡೀ ತಿಂಗಳು ಮತ್ತು ದಿನವಿಡೀ ಉಪವಾಸಮಾಡಿ ಸೂರ್ಯಾಸ್ತವಾದ ಮೇಲೆ ಊಟ ಮಾಡುವರು. ಉಪವಾಸ ವ್ರತದೊಂದಿಗೆ ಬಡವರಿಗೆ ದಾನ ಮಾಡುವದು ಅತಿ ಮುಖ್ಯ ಲಕ್ಷಣವಾಗಿದೆ. ಉಪವಾಸದಿಂದ ಮನೋನೈರ್ಮಲ್ಯವು ಪಾವಿತ್ರ್ಯವು ಹೆಚ್ಚುತ್ತವೆಯೆಂದು ಮುಸ್ಲಿಂ ಬಂಧುಗಳು ನಂಬುತ್ತಾರೆ. ದೀನ-ದಲಿತರ ದುಃಖ ನಿವಾರಣೆ ಮಾಡುವದು ಇಸ್ಲಾಂ ಧರ್ಮದ ಮೂಲ ತತ್ವವಾಗಿದೆ. ಸರ್ವರು ತಮ್ಮ ಸಂಪತ್ತಿನ ಭಾಗ, ಬಡಬಗ್ಗರಿಗೆ ದಾನ ಮಾಡಬೇಕೆಂದು ಮನವಿ ಮಾಡುತ್ತದೆ. ಇದು ಸಮತಾವಾದದ ಸಾಧನಮಾರ್ಗದಾನ ಪದ್ಧತಿಯು ಇಸ್ಲಾಂ ಧರ್ಮಕ್ಕೆ ಮಾತ್ರ ವಿಶಿಷ್ಟವಾದುದೇನೂ ಅಲ್ಲ.

ರಮ್‌ಜಾನ್ ತಿಂಗಳಲ್ಲಿ ಉಪವಾಸ ಮಾಡಿದ ಮುಸ್ಲಿಂ ಬಂಧುಗಳು ಹಬ್ಬದ ದಿನ ಸ್ನಾನ ಮಾಡಿ ಚೂಡಿದಾರ ಪೈಜಾಮ, ಮಲಮಲಶರ್ಟ್, ಉಪ್ಪರ ಶೇರವಾನಿ, ಜಮ್ಮು ಟೋಪಿ ಶಾಹಿಜಾತಾ ಮೈತುಂಬ ಘಮ್ ಘಮ್ ನಾರುವ ಅತ್ತರ ಎಣ್ಣೆ ಕಣ್ಣಿಗೆ ಸುರಮಾ, ಅಂಗೈಗೆ ಮೆಂದಿ ಬಾಯಿ ತುಂಬಾ ಘಗ್ ಘಮಿಸುವ ಮಸಾಲ್‌ಪಾನ ಹಾಕಿಕೊಂಡು 'ಸಲಾಂ ಅಲೆಕು' ಎಂದಾಗ' 'ವಾಲೆಕು ಸಲಾಂ' ಎಂದ್ಹೇಳುತ್ತ ಒಬ್ಬರಿಗೊಬ್ಬರು ತೋಳು ತೆಕ್ಕೆಯಿಂದ ಅಪ್ಪಿಕೊಳ್ಳುತ್ತ ನಲಿಯುತ್ತಿರುವುದು ರಮ್‌ಜಾನ್ ಹಬ್ಬದ ವೈಶಿಷ್ಟ್ಯ. ರಂಜಾನ್ ಹಬ್ಬವು ಮುಸಲ್ಮಾನರ ಅತ್ಯಂತ ಪವಿತ್ರವಾದ ಮಹತ್ವದ ಹಬ್ಬ. ಈ ಹಬ್ಬದಂದು ಪ್ರತಿಯೊಬ್ಬ ಮುಸ್ಲಿಂ ವ್ಯಕ್ತಿಯು ಒಳ್ಳೆಯ ಸಡಗರದಿಂದ ಆಚರಿಸುತ್ತಾನೆ. ಈ ಹಬ್ಬಕ್ಕೆ 'ಈದ್-ಎ-ರಂಜಾನ್' ಕುತುಬ್-ಎ-ರಂಜಾನ್ ಈದ್ ಪೀಕರ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಈ ಹಬ್ಬ ರಂಜಾನ್ ತಿಂಗಳು ಕೊನೆಯದಿನ ಚಂದ್ರನ ದರ್ಶನವಾದ ಮೇಲೆ ಆಚರಿಸುತ್ತಾರೆ. ಹಿಂದೂಗಳಿಗೆ ಶ್ರಾವಣಮಾಸ ಹೇಗೆ ಇರುತ್ತದೆಯೋ ಹಾಗೆಯೇ ಮುಸ್ಲಿಂ ಬಾಂಧವರಿಗೆ ಈ ಹಬ್ಬವು ಪವಿತ್ರ ತಿಂಗಳಾಗಿದೆ. ಶ್ರಾವಣ ಮಾಸದಲ್ಲಿ ಪ್ರತಿಯೊಬ್ಬ ಹಿಂದೂಗಳು ದೇವರ ಗುಡಿ ಅಥವಾ ಮಠಮಂದಿರಗಳಲ್ಲಿ ಭಜನೆ ಕೀರ್ತನೆ ಹೇಗೆ ಮಾಡುತ್ತಾರೆಯೋ ಹಾಗೆಯೇ ರಮ್‌ಜಾನ್ ತಿಂಗಳಲ್ಲಿ ಪ್ರತಿಯೊಬ್ಬ ಮುಸ್ಲಿಂ 'ತರಾವಿ' ನಮಾಜ ಮಾಡಿ 'ಅಲ್ಲಾ'ನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಈ ತಿಂಗಳ ಕಾಲ ಅತ್ಯಂತ ಭಯ ಭಕ್ತಿಯಿಂದ ಎಲ್ಲಿಯೂ ತಪ್ಪಾಗದಂತೆ ಮೈ ತುಂಬಾ ಎಚ್ಚರಿಕೆ ವಹಿಸುತ್ತಾರೆ. ಈ ಹಬ್ಬದ ವೈಶಿಷ್ಟವೇನೆಂದರೆ ಏಳು ತೊಲಿ ಬಂಗಾರ, ಐವತ್ತೆರಡು ಬೆಳ್ಳಿಯ ಬೆಲೆಗಿಂತ ಹೆಚ್ಚು ಇರುವ ಪ್ರತಿಯೊಬ್ಬ ಮುಸ್ಲಿಂರು ತಮ್ಮ ಸಂಪತ್ತಿನ ಅಲ್ಪಭಾಗ ದೀನರಿಗೆ ದಾನ ಮಾಡಬೇಕೆಂಬುದು ಈ ಮತದ ನಿಯಮವಿದೆ. ಇವರ ಸಂಪತ್ತಿನ ದಾನವೇ ನಿಜವಾದ ಭೂಷಣವೆಂದೂ, ಹಿರಿಮೆಯೆಂದೂ ನಂಬಿ ದಾನ ಮಾಡುವರು.

ರಂಜಾನ್ ತಿಂಗಳಲ್ಲಿ ಪವಿತ್ರ ಧರ್ಮ ಗ್ರಂಥವಾದ 'ಖುರಾನಿ'ನ ರಚನೆ ಆರಂಭಗೊಂಡು ೨೬ನೇ ದಿನಕೆ ಪೂರ್ಣಗೊಂಡಿತಂತೆ, ಇಡೀ ರಾತ್ರಿ 'ಲೈಲಿತ್ ಉಲ್

ಖದರ್' ಅಥವಾ 'ಶಕ್ತಿರಾತ್ರಿ' ಯೆಂದು ಕರೆಯುವುದುಂಟು ಹಬ್ಬದ ದಿನ ಓಣಿಯ ಹಿರಿಯ-ಕಿರಿಯ ಪುರುಷರೆಲ್ಲರೂ ಊರ ಹೊರಗೆ ಪ್ರಾರ್ಥನೆಗಾಗಿ ನಿರ್ಮಿಸಿದ 'ಮಸೀದಿ'ಗೆ ಸರ್ವರು ಸೇರುವರು. ಅಲ್ಲಿ ಸೇರಿದ ಬಂಧುಗಳಿಗೆ ಮೌಲ್ವಿಗಳೊಬ್ಬರು ಉಪದೇಶದ (ಮಾರ್ಗದರ್ಶನ) ಮಾತುಗಳು ಹೇಳುವರು. ಇದಕ್ಕೆ 'ಕುತ್ಬಾ' ಎನ್ನುವರು ಆ ಉಪದೇಶದ ಮಾತುಗಳು ಹೀಗಿವೆ—ಸೃಷ್ಟಿಕರ್ತನಾದ ಅಲ್ಲಾನಿಗೆ ಸದಾ ನೆನೆಯಿರಿ. ಆತನ ಆಜ್ಞೆಗೆ ಶಿರಬಾಗಿಸಿರಿ, ಶ್ರೀ ಮಹ್ಮದ್ ಪೈಗಂಬರರ ಪವಿತ್ರ ಜೀವನ ನಿಮಗೆಲ್ಲರಿಗೂ ಆದರ್ಶವಾಗಿರಲಿ, ಪರಸೇವೆ ಮಾಡಿರಿ, ಪರೋಪಕಾರದಿಂದ ಇಹಪರಗಳಲ್ಲಿ ನಿಮಗೆ ಸುಖವುಂಟು. ಲೋಕಕಲ್ಯಾಣವೇ ನಿಮ್ಮ ಜೀವನದ ಗುರಿಯಾಗಲಿ, ನಿಷ್ಠಾವಂತರಾಗಿ ಬಾಳಿರಿ ಸದ್ಗುಣವಂತರಾಗಿರಿ, ಪವಿತ್ರಗ್ರಂಥ 'ಖುರಾನ್' ನಿಮ್ಮ ಏಕೈಕ ಮಾರ್ಗದರ್ಶಿ ಎಂದು ಅಪ್ಪಣೆ ಕೊಡಿಸುವರು. 'ರಮಜಾನ್' ಪವಿತ್ರದಿವಸಕ್ಕೆ 'ಕುತುಬ್ ಏ ರಂಜಾನ್' ಎಂಬುವ ಹೆಸರಿನಿಂದ ಕರೆಯುವ ವಾಡಿಕೆಯಿದೆ. ಈ ಪವಿತ್ರ ಹಬ್ಬದ ದಿನದಂದು 'ಶಿರ್‌ಖುರುಮಾ' ಶಾಂವಿಗೆ ಮತ್ತು ಸುರುಕುಂಬ ವಿವಿಧ ರೀತಿಯ ಪಕ್ವಾನ್ನಗಳನ್ನು ತಯಾರಿಸುವರು. ಈ ದಿನ 'ಈದಗಾ'ದಲ್ಲಿಯ ಪ್ರಾರ್ಥನೆ ಮುಗಿದ ಮೇಲೆ ಹಿಂದೂ-ಮುಸ್ಲಿಂ ಭೇದ-ಭಾವ ಜಾತಿಮತದ ಹೊಟ್ಟು ಗಾಳಿಗೆ ತೂರಿ ಸರ್ವಧರ್ಮಗಳು ಸಮವೆಂದು ಸಮನ್ವಯಮೂರ್ತಿಗಳಾಗಿ ಎಲ್ಲಾ ಧರ್ಮದ ತಮ್ಮ ಆತ್ಮೀಯ ಮಿತ್ರರಿಗೆ ಔತಣಕೂಟಕ್ಕೆ ಆಹ್ವಾನಿಸುವರು. ರಂಜಾನ್ ಹಬ್ಬ ನಿಜಕ್ಕೂ ಭಾವೈಕ್ಯದ ಬೀಜ ಮಂತ್ರವಾಗಿದೆ. ರಂಜಾನ್ ಹಬ್ಬವು ಪ್ರಪಂಚದಾದ್ಯಂತ ನಡೆಯುವ ದೊಡ್ಡ ಹಬ್ಬ ಇದಾಗಿದೆ.

೩.೨) ಸಾಹೇಬಗೌಡ ಎಂ. ಪಾಟೀಲ ಮು॥ ಮಾತೋಳಿ ಅಂಚೆ-ಮಲ್ಲಾಬಾದ ತಾಲ್ಲೂಕು ಅಫಜಲಪುರ ಕಲಬುರಗಿ ಜಿಲ್ಲೆ

೩.೨) ಉಸ್ಮಾನಸಾಬ ಮುಲ್ಲಾ- ಬಿಲ್ವಾಡ (ಕೆ) ರಸ್ತೆ ಹತ್ತಿರ ಮನೆ ಅಂಚೆ-ತೆಲ್ಲೂರ ಅಫಜಲಪುರ ತಾಲ್ಲೂಕು, ಕಲಬುರಗಿ ಜಿಲ್ಲೆ

೮. ಉಪಸಂಹಾರ

ಭಾರತೀಯ ಜನಪದರ ಜೀವನದಲ್ಲಿ ಹಬ್ಬಗಳಿಗೆ ಅಪಾರವಾದ ಮಹತ್ವವಿದೆ. ಹಬ್ಬಗಳು ಮಹತ್ತರವಾದ ಪಾತ್ರ ವಹಿಸುತ್ತವೆ. ಜನಸಾಮಾನ್ಯರು ಹಬ್ಬದ ದಿನವು ಪವಿತ್ರ ದಿನವೆಂಬುದಾಗಿಯೂ ಭಾವಿಸುತ್ತಾರೆ. ಹಬ್ಬದ ದಿನದಂದು ಒಳ್ಳೆಯ ನಡೆ-ನುಡಿಯಿಂದ, ಸ್ವಚ್ಛತೆಯಿಂದಿರಲು ಎಚ್ಚರಿಕೆ ವಹಿಸುವರು. ಆ ದಿನ ಒಳ್ಳೆಯ ರೀತಿಯಿಂದ ನಡೆದುಕೊಂಡರೆ ಇಡೀ ವರ್ಷ ಹಾಗೆಯೇ ಸಾಗುತ್ತದೆ. ಇಲ್ಲವಾದರೆ ಇಡೀ ವರ್ಷ ಸಂಕಷ್ಟಗಳ ಸರಮಾಲೆ ಯನ್ನು ಅನುಭವಿಸಬೇಕಾಗುತ್ತದೆಂದು ಭಾವಿಸುತ್ತಾರೆ. ಹಬ್ಬಗಳು ಧಾರ್ಮಿಕ ದೃಷ್ಟಿಯಿಂದ ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ. ಅಂದು ಪೂಜೆ-ಪುನಸ್ಕಾರ ಹಾಗೂ ಪ್ರಾರ್ಥನೆಗೆ ಅಪಾರವಾಗಿ ಅವಕಾಶವಿರುತ್ತದೆ. ವಿವಿಧ ದೇವರು-ದೇವತೆಗಳನ್ನು ಪೂಜಿಸಲಾಗುತ್ತದೆ. ದಯೆ, ದಾನ, ಧರ್ಮ, ಕರುಣೆ ಹಾಗೂ ಅನುಕಂಪದಿಂದ ವರ್ತಿಸಲಾಗುತ್ತದೆ. ಜನರು ಸ್ನಾನಮಾಡಿ ಮಡಿ ಬಟ್ಟೆಯನ್ನುಟ್ಟು ಶುಚಿಯಾಗಿರುತ್ತಾರೆ. ಹಬ್ಬದ ದಿನ ಕೆಟ್ಟ ಆಲೋಚನೆ ದುಷ್ಪ್ರವರ್ತನೆಗಳನ್ನು ತಂದುಕೊಳ್ಳುವುದಿಲ್ಲ. ಅಂದು ಧಾರ್ಮಿಕ ಸಭೆ-ಸಮಾರಂಭಗಳನ್ನು ಏರ್ಪಡಿಸುತ್ತಾರೆ. ಹರಿಕಥೆ, ಶಿವಕಥೆ, ಸಂಗೀತ ಕಛೇರಿ ಮೊದಲಾದ ಉಪಯುಕ್ತ ಉತ್ತಮ ಕಾರ್ಯಕ್ರಮ ಗಳಲ್ಲಿ ಭಾಗವಹಿಸುತ್ತಾರೆ. ಎಲ್ಲೆಲ್ಲಿಯೂ ಅಧ್ಯಾತ್ಮಿಕ ವಾತಾವರಣ ಚಿಂತನೆ ಕಂಡುಬರುತ್ತದೆ. ಜನರು ವ್ಯವಹಾರಗಳಿಗಿಂತ ಪಾರಮಾರ್ಥಿಕ ಚಿಂತನೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿರುತ್ತಾರೆ. ಮಠ-ಮಂದಿರಗಳಿಗೆ ಭಕ್ತಿ-ಭಾವದಿಂದ ಮತ್ತು ಸದ್ಭಾವನೆಗಳಿಂದ ನಡೆದುಕೊಳ್ಳುವರು. ಜನಪದರ ಜೀವನದಲ್ಲಿ ಹಬ್ಬಗಳು ಸಾಮಾಜಿಕ ದೃಷ್ಟಿಯಿಂದಲೂ ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಹಬ್ಬದ ದಿನದಂದು ವಿವಿಧ ಜಾತಿಗಳ ಜನ ಪರಸ್ಪರ ಬೆರೆಯುತ್ತಾರೆ. ಅದು ಅವರ ನಡುವೆ ಇರಬಹುದಾದ ಬಿಗುವು ಕಡಿಮೆ ಮಾಡಿಕೊಳ್ಳಲು ನೆರವಾಗುತ್ತದೆ. ಜನರು ಒಬ್ಬರ ಮನೆಗೊಬ್ಬರು ಭೇಟಿಕೊಟ್ಟು ಶುಭಾಷಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅನೇಕ ಹಬ್ಬಗಳಲ್ಲಿ ಜನರ ವೈಯಕ್ತಿಕ ಕಾರ್ಪಣ್ಯಗಳನ್ನೂ ಮರೆತು ಆನಂದವಾಗಿ ಕಾಲ ಕಳೆಯುತ್ತಾರೆ. ಸುಖ-ಸಂತೋಷದಿಂದ ಇತರರೊಡನೆ ಕೂಡಿ ವ್ಯವಹರಿ ಸುತ್ತಾರೆ. ಸಣ್ಣ-ಪುಟ್ಟ ವೈಮನಸ್ಸುಗಳನ್ನು ಮರೆತು ಸ್ನೇಹದಿಂದ ವರ್ತಿಸುತ್ತಾರೆ. ತಪ್ಪು ತಿಳುವಳಿಕೆಗಳನ್ನು ದೂರ ಮಾಡುತ್ತಾರೆ. ಪ್ರೀತಿಸಹಕಾರ ಕೂಡಿ ಬಾಳುವ ತುಂಬು ಮನಸ್ಸಿನಿಂದ ನಡೆದುಕೊಳ್ಳುತ್ತಾರೆ. ಹೆಣ್ಣುಮಕ್ಕಳು ಹತ್ತಿರದ ಬಂಧುಗಳು ದೂರದ ಸಂಬಂಧಿಕರು ಗ್ರಾಮದ ಎಲ್ಲಾ ಜನರು ಆಪ್ತೇಷ್ಟರೊಡನೆ ಕೂಡಿ ಆನಂದದಿಂದ ಕಾಲಕಳೆಯುತ್ತಾರೆ. ಇಡೀ ಸಂತೋಷದಾಯಕ ವಾತಾವರಣದಿಂದ ತುಂಬಿ ತುಳುಕಾಡುತ್ತಿರುವಂತೆ ಭಾಸವಾಗುತ್ತದೆ.

ಹಬ್ಬಗಳು ವಿಶೇಷವಾತಾವರಣ ಸೃಷ್ಟಿಸಿ ಮನೋರಂಜನೆ ಒದಗಿಸುತ್ತವೆ. ಜನರು ಬಹುಮಟ್ಟಿಗೆ ಉತ್ಸಾಹ ಸಡಗರ ಆನಂದದಿಂದ ವರ್ತಿಸುತ್ತಾರೆ. ದೇವರ ಉತ್ಸವ ಮೆರವಣಿಗೆ ನೃತ್ಯ, ಕುಣಿತ, ಸಂಗೀತ ಕಲೆ ಸಾಹಿತ್ಯ ವಿಶೇಷವಾಗಿ ಅಭಿವ್ಯಕ್ತವಾಗುತ್ತವೆ. ನಾಟಕ, ಸರ್ಕಸ್, ಕುಸ್ತಿ, ಪಂದ್ಯ, ಪಟಾಕಿಗಳ ಸಿಡಿತ ಬಾಣ ಬಿರುಸುಗಳನ್ನು ಸುಡುವುದು ಇವೆ ಮೊದಲಾದವು ಜನಪದರಿಗೆ ಹೆಚ್ಚಿನ ಮನೋರಂಜನೆ ಒದಗಿಸುತ್ತವೆ. ದಿನವಿಡೀ ದುಡಿದು ಬರುವ, ವರ್ಷವಿಡೀ ಪರಿಶ್ರಮ ಪಡುವ ಹಳ್ಳಿಯ ಜನರ ಮನಸ್ಸಿಗೆ ಮುದ ನೀಡುವ ಅಪೂರ್ವ ಅವಕಾಶ ಹಬ್ಬದ ದಿನದಂದು ವಿಶೇಷವಾಗಿ ಲಭ್ಯವಾಗುತ್ತದೆ.

ಜನಪದರ ಜೀವನದಲ್ಲಿ ಹಬ್ಬಗಳು ಸಾಂಸ್ಕೃತಿಕ ದೃಷ್ಟಿಯಿಂದಲೂ ಮಹತ್ವಪೂರ್ಣವಾದವುಗಳಾಗಿವೆ. ಆಯಾ ಗ್ರಾಮಗಳಲ್ಲಿರುವ ಸುತ್ತ-ಮುತ್ತಲಿನ ಗ್ರಾಮಗಳಲ್ಲಿನ ಜನರ ಜಾನಪದ ಕಲೆ ಮತ್ತು ಸಾಹಿತ್ಯಗಳು ಹಬ್ಬಗಳಲ್ಲಿ ವಿಶೇಷವಾಗಿ ಪ್ರಕಟಗೊಳ್ಳುತ್ತವೆ. ಜಾನಪದ ಕಲಾವಿದರು. ಅಪರೂಪದ ಅವಕಾಶ ಪಡೆದು ಬೆಳಕಿಗೆ ಬರುತ್ತಾರೆ. ಗ್ರಾಮೀಣರ ಸುಪ್ತಸಾಮರ್ಥ್ಯಗಳು ಜಾಗೃತಗೊಳ್ಳಲು ವಿಪುಲ ಅವಕಾಶ ದೊರೆಯುತ್ತದೆ. ಸಾಮೂಹಿಕ ಗಾನ, ಸಾಮೂಹಿಕ ನರ್ತನ, ಕುಣಿತ ಮೊದಲಾದವು ಹಳ್ಳಿಯ ಜನರಲ್ಲಿ ಸಮುದಾಯ ಭಾವನೆ ಅಧಿಕಗೊಳ್ಳಲು ನೆರವಾಗುತ್ತವೆ. ಅವರಲ್ಲಿ ಉನ್ನತ ಮಟ್ಟದ ಸಾಂಸ್ಕೃತಿಕ ಚಟುವಟಿಕೆ ಹಾಗೂ ಸಾಂಸ್ಕೃತಿಕ ಪರಿಸರ ಅಭಿವೃದ್ಧಿಗೊಳ್ಳಲು ಪೂರಕ ಸನ್ನಿವೇಶಗಳನ್ನು ಒದಗಿಸುತ್ತವೆ. ಒಟ್ಟಿನಲ್ಲಿ ಜನರ ಧಾರ್ಮಿಕ, ಸಾಮಾಜಿಕ, ಆರೋಗ್ಯದ ನೈರ್ಮಲ್ಯದ ಸಾಂಸ್ಕೃತಿಕ ಮನೋರಂಜನೆ ಮೊದಲಾದವುಗಳ ದೃಷ್ಟಿಯಿಂದ ತುಂಬಾ ಮಹತ್ವವಾದ ಪಾತ್ರವಹಿಸುತ್ತದೆ.

ಜನಪದ ಹಬ್ಬಗಳು ಯಾವ ವಿಧದಲ್ಲಿಯೂ ಹಿಂದೆ ಬಿದ್ದಿಲ್ಲ. ಹಬ್ಬಗಳು ಒಳ್ಳೆಯ ಶುಭದಿನಗಳೆಂದು ಹೇಳುವ ಅಭ್ಯಾಸವಿದೆ. ಯುಗಾದಿ ಹಬ್ಬ ಹಳೇ ವರ್ಷ ಕಳೆದು ಹೊಸ ವರ್ಷದ ಶುಭದಿನ ತಂದು-ಕೊಡುವ ಸುದಿನವಾಗಿದೆ. ಕಾರಹುಣ್ಣಿವೆ ಬಸವಣ್ಣನ ಹಬ್ಬವೆಂದು ಹೇಳಬಹುದು. ಬಸವಣ್ಣನು ಹಗಲಿರುಳೆನ್ನದೆ ದುಡಿದು ಶ್ರಮ ಪಟ್ಟಿದ್ದಕ್ಕೆ ಅವನಿಗೂ ಕೂಡ ಪ್ರತ್ಯೇಕವಾಗಿ ಹಬ್ಬ ನೇಮಿಸಿ ಅವನ ಹೆಸರಿನಲ್ಲಿ ರೈತನು ಸಂತೋಷ ಪಡುವ ಸಂತೋಷದ ದಿನ ಇದಾಗಿದೆ.

ನಾಗರ ಪಂಚಮಿ ನಾಗಪ್ಪನಿಗೆ ಹಾಲನ್ನೆರೆಯುವ ದಿನ. ನಾಗದೇವನಿಗೆ ಹಾಲನ್ನೆರೆದರೆ ಹಾವುಗಳು ಕಚ್ಚುವದಿಲ್ಲವೆಂಬ ನಂಬಿಕೆಯ ಜೊತೆಗೆ ಮಹಿಳೆಯರು ಗಂಡನ ಮನೆಯಿಂದ ತವರುಮನೆಗೆ ಬಂದು ಆನಂದದಿಂದ ಜೋಕಾಲಿ ಜೀಕುವ ಹಬ್ಬವಾಗಿದೆ. ವಿಜಯದಶಮಿ ಯಂದು ಹಬ್ಬ ದೇವರ ಪೂಜೆಗೋಸ್ಕರ ವಿಶೇಷವಾಗಿ ದೇವಿ ಆರಾಧನೆ ಹೆಸರಿನಲ್ಲಿ ನವರಾತ್ರಿಗಳ ಕಾಲ ದೀಪ ಹಚ್ಚುವರು. ಈ ದೀಪಗಳನ್ನು ನಂದಿಹೋಗದಂತೆ ಹಗಲಿರುಳು ಕಾದು ದೇವಿಸ್ಮರಣೆ ಮಾಡುತ್ತಾರೆ. ಜನಪದರು ಅಬಟೆ-ಬನ್ನಿಯನ್ನು ಬೆಳ್ಳಿ-ಬಂಗಾರವೆಂದು ಸ್ವೀಕರಿಸಿ ಸಹಬಾಳ್ವೆ ನಡೆಸುವ ಉದ್ದೇಶ ಇದಾಗಿದೆ.

ದೀಪಾವಳಿಯೂ ಜನರಿಗೆ ಅಜ್ಞಾನ ದೂರವಿರಿಸಿ ಸುಜ್ಞಾನ ತಂದು ಕೊಡುವ ಶುಭದಿನವಾಗಿದೆ. ಅಂದು ಎಲ್ಲಿ ನೋಡಿದರಲ್ಲಿ ಹೊಸಲು ದೀಪಗಳಿಂದ ಅಲಂಕರಿಸಲಾಗುತ್ತದೆ. ಮಾನವರ ಮತ್ತು ಪ್ರಾಣಿಗಳ ಪೀಡೆ ಕಳೆಯುವ ಹಬ್ಬ ಇದಾಗಿದೆ. ಸಂಕ್ರಾಂತಿ ಇದೊಂದು ಸೂರ್ಯ ಮತ್ತು ನಕ್ಷತ್ರ ವೃತ್ತದ ಮೇಲೆ ಬರುವುದನ್ನು ತೋರಿಸುವ ದಿನ. ಅಂದು ಎಳ್ಳು-ಸಕ್ಕರೆ ಹಂಚಿ ತಿನ್ನುವ ಸಂತೋಷದ ದಿನವಾಗಿದೆ. ರಂಜಾನ್ ಹಬ್ಬವು ಮುಸ್ಲಿಂ ಬಾಂಧವರ ಪವಿತ್ರದಿನ. ರಂಜಾನ್ ತಿಂಗಳು ಪೂರ್ತಿ ಉಪವಾಸವಿದ್ದು ಹಬ್ಬದಂದು ಹೊಸ ಬಟ್ಟೆ ಧರಿಸಿ ಮಸೀದಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿ ದೀನರಿಗೆ ದಾನ ನೀಡಿ ಒಳ್ಳೇಯವರಾಗುವ ಸುದಿನವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಉತ್ಸವಗಳು

"ಉತ್ಸವಗಳು ಮಾನವನ ಸುಖ-ದುಃಖಗಳ ಸಮರಸ ಜೀವನದ ಸಂಕೇತಗಳಾಗಿವೆ. ಇವುಗಳು ಕಷ್ಟದ ಹೊರೆ ಪರಿಹರಿಸಿಕೊಳ್ಳಲು ದುಷ್ಟಪ್ರವೃತ್ತಿಯಿಂದ ದೂರಸರಿದು ಸದ್ವರ್ತನೆಗೆ ಇಳಿಯುವಲ್ಲಿ ಸಹಾಯಕವಾಗಿದೆ. ಮಾನವನ ಬೆಳವಣಿಗೆ ಮತ್ತು ಸಾಮಾಜಿಕ ಪರಿವರ್ತನೆಗೆ ಮಾರ್ಗದರ್ಶಕವಾಗಿವೆ. ಸಹಕಾರದಿಂದ ಬಾಳಲು ಒಕ್ಕಟ್ಟು ಹೆಚ್ಚಿಸುವಲ್ಲಿ ಪರಸ್ಪರ ಪ್ರೇಮ ಬೆಳೆಸಲು ಸಹಕಾರ ಮನೋಭಾವ ಕುದುರಿಸಲು ಇದು ತರಬೇತಿನೀಡುವಂತಿದೆ."[೨೭]*

ನಮ್ಮ ಭಾರತದೇಶವು ಸರ್ವಧರ್ಮಗಳ ನೆಲೆ ಬೀಡಾಗಿದೆ. ಕರ್ನಾಟಕದಲ್ಲೂ ಹಲವಾರು ಮತಧರ್ಮಗಳ ಜನರು ವಾಸವಾಗಿದ್ದಾರೆ. ಹಿಂದೂ ಧರ್ಮ ಮತ್ತು ಉತ್ಸವಗಳ ಆಚರಣೆ ನಡೆಯುವಂತೆ ಇನ್ನಿತರ ಧರ್ಮದವರು ತಮ್ಮ ತಮ್ಮ ಉತ್ಸವಗಳನ್ನು ಈ ನಾಡಿನಲ್ಲಿ ಆಚರಿಸುತ್ತಾರೆ. ಅಂಥವುಗಳಲ್ಲಿ ಅನೇಕ ಜಾತ್ರೆಗಳು ಉತ್ಸವಗಳು ಪ್ರಮುಖವಾಗುತ್ತವೆ. ಇಲ್ಲವೆ ಕೆಲವು ಚಲನ ಚಿತ್ರಗಳಲ್ಲಾದರೂ ಜಾತ್ರೆಯ ರಮಣೀಯವಾದ ದೃಶ್ಯಗಳನ್ನು ಕಂಡಿರಬಹುದು. ನಮ್ಮ ಗುರುಹಿರಿಯರು ಜಾತ್ರೆ ಉತ್ಸವಗಳ ಬಗ್ಗೆ ಅನೇಕ ರೀತಿಯ ಕಥೆಗಳನ್ನು ಕಟ್ಟಿದ್ದಾರಾದರು, ಅದರಷ್ಟೇ ಸ್ವಾರಸ್ಯವಾಗಿರುವುದಿಲ್ಲ. ಜಾತ್ರೋತ್ಸವ ನಡೆಯುವ ಸ್ಥಳಗಳಿಗೆ ಹೋಗಿ ಅಲ್ಲಿನ ನೂರಾರು ದೃಶ್ಯಗಳ, ಸಂಗತಿಗಳ, ಸೊಗಸು ಮನೋರಂಜನೆಗಳನ್ನು ಸ್ವತಃ ಕಣ್ಣಾರೆ ಕಂಡು ಅನುಭವಿಸಿದರೇನೇ ಚೆನ್ನ. ಅದನ್ನಷ್ಟೇ ಅಲ್ಲ ಜಾತ್ರೆಗಳೆಂದರೇನು? ಅವು ಏಕೆ ಮತ್ತು ಯಾವಾಗ ನಡೆಯುತ್ತವೆ? ಅವುಗಳಿಂದ ಮನುಷ್ಯನಿಗಾಗುವ ಲಾಭಗಳೇನು? ಅಲ್ಲಿ ಎಂಥೆಂಥ ಜನ ಬರುತ್ತಾರೆ? ಹೀಗೆ ಹತ್ತಾರು ರೀತಿಗಳಲ್ಲಿ ನಮ್ಮ ತಲೆಯಲ್ಲಿ ಉದ್ಭವಿಸುವ ಪ್ರಶ್ನೆಗಳಿಗೆ ನಾವೆ ಉತ್ತರಗಳ ಬಗ್ಗೆ ಯೋಚಿಸಬೇಕು. ಆಗ ಸಂಸ್ಕೃತಿಯ ತಿರುಳನ್ನು ನಾವು ತಿಳಿದುಕೊಳ್ಳಲು ಪ್ರಯತ್ನ ಮಾಡಿದಂತಾಗುತ್ತದೆ.

ನಾವು ಇತಿಹಾಸದ ಪುಟಗಳನ್ನು ಹೆಕ್ಕಿ ತೆಗೆದಾಗ ಮಂಗನಿಂದ ಮಾನವನಾದ ಮೇಲೆ ಆತನಿಗೆ ಪ್ರತ್ಯೇಕವಾದ ಅಸ್ತಿತ್ವ ಬಂತು. ಹೀಗೆ ಪ್ರಾಣಿವರ್ಗದಿಂದ ಬೇರೆಯಾದ ಮಾನವ ಬೇಟೆಯಾಡುವುದನ್ನು ಕಲಿತುಕೊಂಡನು. ಅಲೆಮಾರಿ ಜೀವನ ಬಿಟ್ಟು ಬೆಳೆಗಳನ್ನು ಬೆಳೆಯುವುದು ಕಲಿತುಕೊಂಡನು. ಕ್ರಮೇಣ ಬೆಳೆಗಳ ರಕ್ಷಣೆಗೆ ದೇವದೇವತೆಗಳು ದೇವರ ಸಂತೃಪ್ತಿಗೆ ಯಾಗಗಳ ವ್ಯವಸ್ಥೆ ಕಂಡು ಹಿಡಿದನು. ಇದೆ ಸಂದರ್ಭದಲ್ಲಿ ಜಾತ್ರೆ-ಉತ್ಸವಗಳು ಹುಟ್ಟಿಕೊಂಡವು. ಹಾಗೆಯೇ ದೇವತೆಗಳನ್ನು ಆರಾಧಿಸುವ ಪದ್ಧತಿ ಸಹ ಬೆಳೆದು ಬಂತು. ಹೀಗೆ ದೇವತೆಗಳನ್ನು ಪೂಜಿಸುವುದು, ಹಬ್ಬಗಳು ಮತ್ತು ಉತ್ಸವಗಳನ್ನು ಆಚರಿಸುವ ಸಂಪ್ರದಾಯ ಇವತ್ತಿನದಲ್ಲ. ಪುರಾತನ ಕಾಲದಿಂದ ನಿರಂತರವಾಗಿ ಬೆಳೆದು ಬಂದ ಪದ್ಧತಿಯಾಗಿದೆ.

ಆರಾಧನೆ ಮತ್ತು ಆಚರಣೆಗಳು:- ಮಾನವನು ಸೌಖ್ಯಕ್ಕಾಗಿ ಪ್ರಯತ್ನಿಸುತ್ತಿದ್ದ ಅಂತಹ

---

೨೭) ಜಾನಪದ ದೀಪ್ತಿ ಭಾಗ-೨ ಡಾ. ಎಂ.ಎಸ್. ಲಠ್ಠೆ ಪುಟ-೩೫

ಸಂದರ್ಭದಲ್ಲಿ ಒಮ್ಮೊಮ್ಮೆ ರೋಗರುಜಿನಗಳು ತಲೆ ಹಾಕಿದಾಗ ಮಾನವ ಭೂತಗಳ ಹಾವಳಿಯೇ ರೋಗಕ್ಕೆ ಕಾರಣವೆಂದು ನಂಬುತ್ತಿದ್ದನು. ಹೀಗಾಗಿ ಇಂದಿನ ವರೆಗೂ ಮಂಗಳೂರುಜಿಲ್ಲೆಯಲ್ಲಿ ನಾವು ಭೂತಾರಾಧನೆ ಆಚರಣೆ ಬಳಕೆಯಲ್ಲಿರುವುದು. ಸ್ಮರಿಸಿಕೊಳ್ಳಬಹುದು. ಇವುಗಳೆಲ್ಲದರ ಭಯಭೀತಿ ನಿವಾರಣೆಗಾಗಿ, ಕಲ್ಲು-ಮಣ್ಣು, ಮರಗಳನ್ನೆಲ್ಲಾ ದೇವರೆಂದು ಪೂಜಿಸುತ್ತ ಬಂದರು. ಅಂದಿನ ದಿನಗಳಲ್ಲಿ ಪ್ರಕೃತಿಯ ವಸ್ತುಗಳಲ್ಲಿ ಗುಡುಗು, ಮಿಂಚು, ಸಿಡಿಲು, ಗಾಳಿ, ಮನುಷ್ಯನಿಗೆ ಸಹಜವಾಗಿಯೇ ಭೀತಿಯನ್ನುಂಟು ಮಾಡಿದವು. ಇವುಗಳಿಂದ ಭಯ ಹುಟ್ಟಿಸಿಕೊಂಡ ಮಾನವನು ತನಗೆ ತೊಂದರೆಯಾಗದಿರಲೆಂದು ಅವುಗಳನ್ನು ಪೂಜಿಸಿ ಆರಾಧಿಸುತ್ತ ಬಂದನು. ಸೂರ್ಯ,ಚಂದ್ರ ಪಶುಪಕ್ಷಿಗಳನ್ನೆಲ್ಲಾ ಪೂಜಿಸುವಷ್ಟು ಆಗಾಧವಾಗಿ ಬೆಳೆಯಿತು. ಈ ನಂಬಿಕೆಯೇ ಕ್ರಮೇಣವಾಗಿ ಒಂದು ಧಾರ್ಮಿಕ ಆಚರಣೆಯಾಯಿತು. ಆ ಧಾರ್ಮಿಕ ಹಿನ್ನೆಲೆಯಲ್ಲಿಯೇ ಈ ಜಾತ್ರೋತ್ಸವಗಳು ಹುಟ್ಟಿಕೊಂಡವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನಮ್ಮ ಅಭಿಪ್ರಾಯವಾಗಿದೆ.

೧. "ಶಿವಯೋಗಿ ಸಿದ್ಧರಾಮೇಶ್ವರ ಜಾತ್ರೋತ್ಸವ" ಮಲ್ಲಾಬಾದ

ಹೈದ್ರಾಬಾದ ಕರ್ನಾಟಕದ ಕಲಬುರಗಿ ಜಿಲ್ಲೆಯು ಪ್ರಸಿದ್ಧವಾಗಿರುವ ವಿಭಾಗೀಯ ಕೇಂದ್ರವಾಗಿದೆ. ಅಂಥ ಮಣ್ಣಿನಲ್ಲಿ ಜನಿಸಿ ಪುಣ್ಯ ಪುರುಷರಾದ ಶರಣಬಸವೇಶ್ವರರು, ಖಾಜಾಬಂದೇನವಾಜರ ತಂಗು ದಾಣವಾಗಿರುವ ಈ ತಾಯ್ನಾಡಿನಲ್ಲಿ ಶರಣರು ಸಂತರು, ಮಹಾಂತ-ಮಡಿವಾಳರು, ಸಿದ್ಧಿಪುರುಷರು ಬೆಳಗಿದ ನಾಡು ನಮ್ಮದಾಗಿದೆ. ಹನ್ನೆರಡನೆಯ ಶತಮಾನ ಜ್ಞಾಪಿಸಿಕೊಂಡರೆ ಕಲ್ಯಾಣದಣ್ಣನೆಂದೇ ಖ್ಯಾತಿಹೊಂದಿರುವ ಜಗಜ್ಯೋತಿ ಬಸವೇಶ್ವರರು, ಅಲ್ಲಮಪ್ರಭು, ಮಡಿವಾಳ ಮಾಚಿದೇವ. ಅಕ್ಕಮಹಾದೇವಿ ಚೆನಬಸವಣ್ಣಾ, ನೀಲಾಂಬಿಕೆ, ಗಂಗಾಂಬಿಕೆ ಮುಂತಾದ ಶರಣ-ಶರಣೆಯರು ಶಿವಾನುಭವಮಂಟಪ ಸ್ಥಾಪಿಸಿ ಜಗತ್ತಿನ ಮಾನವಜೀವಿಗಳಿಗೆ ಪ್ರಕಾಶ ಜ್ಯೋತಿಯಾಗಿ ಬಾಳನ್ನೆ ಬೆಳಗುವಂತೆ ನಮ್ಮ ತತ್ವಗಳ ಬೀಜ ಬತ್ತಿ ಬೆಳೆಬೆಳೆದು ಫಲವತ್ತಾದ ಫಲ ಫಲಿಸುವಂತೆ ಮಾಡಿ ಹೋಗಿದ್ದಾರೆ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕು ಕೇಂದ್ರದಿಂದ ಪೂರ್ವದಿಕ್ಕಿಗೆ ೮.ಕಿ.ಮೀಟರ್ ಅಂತರದಲ್ಲಿ, ರಾಜ್ಯದ ಹೆದ್ದಾರಿಯ ಮೇಲಿರುವ ಮಲ್ಲಾಬಾದ ಗ್ರಾಮದಲ್ಲಿರುವ; ಶ್ರೀ ಷಡಕ್ಷರಿ ಶಿವಯೋಗಿ ಸಿದ್ಧರಾಮೇಶ್ವರರ ರಥೋತ್ಸವವು ಒಂದಾಗಿದೆ.

ಶ್ರೀ ಸಿದ್ಧರಾಮೇಶ್ವರರು ನಮ್ಮದೇ ಜಿಲ್ಲೆಯ ಆಳಂದ ತಾಲೂಕಿನ ಜಂಬಗಾ ಗ್ರಾಮದಲ್ಲಿ ಜಂಗಮ ದಂಪತಿಗಳಾದ ಶ್ರೀ ಚೆನ್ನವೀರಯ್ಯ ಶ್ರೀಮತಿ ಶರಣಮ್ಮ ತಾಯಿಯವರು ಸದಾ ತಮ್ಮ ಕಾಯಕ ಮಾಡುತ್ತ ಅದರಲ್ಲಿಯೇ ಬಿಡುವುಮಾಡಿಕೊಂಡು ಪುಣ್ಯದ ಕೆಲಸ ಮಾಡುತ್ತ ಶರಣರ ಪರಿಸರದಲ್ಲಿಯೇ ತಮ್ಮ ನಿತ್ಯ ಜೀವನ ಸಾಗಿಸುತ್ತಿದ್ದರು. ಬಡತನವಿದ್ದರೂ ತುಂಬುಮನದ ಹೃದಯವಂತಿಕೆ ಸ್ನೇಹ ಜೀವಿಗಳಾಗಿದ್ದರು. ಇವರಿಗೆ ನಾಲ್ಕು ಜನ ಮಕ್ಕಳಿದ್ದರು. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು. ಇವರೆಲ್ಲರಲ್ಲಿ ನಾಲ್ಕನೇಯವರೇ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು. ಸಿದ್ಧರಾಮೇಶ್ವರರ ತಾಯಿ-ತಂದೆಯವರು ಕಲಬುರಗಿಯ ಶರಣಬಸವೇಶ್ವರರಲ್ಲಿ ಭಯ-ಭಕ್ತಿಯಿಂದ ನಡೆದು ಕೊಳ್ಳುತ್ತಿದ್ದರು. ಅಥಣಿಯ ಗಚ್ಚಿನ ಮಠದ ಶ್ರೀಮುರಘೇಂದ್ರ ಶಿವಯೋಗಿಗಳ ಕೃಪಾಶೀರ್ವಾದ ಪಡೆದರು. ಕಲಬುರಗಿಗೆ ಶರಣ ಬಸವೇಶ್ವರರ ಗುಡಿಗೆ ಅಥಣಿ ಗಚ್ಚಿನ ಮಠದ ಶಿವಯೋಗಿಗಳು ದಯಮಾಡಿಸಿದ್ದರು. ಆಗ ಶರಣಮ್ಮತಾಯಿಯು ತವರು ಮನೆಯಾದ ಉದನೂರಿನಿಂದ ಎಲ್ಲಾ ಭಕ್ತರ ಸಂಗಡ ಕಲಬುರಗಿಗೆ ಶಿವಯೋಗಿಗಳ ದರ್ಶನಕ್ಕೆ ಬರುತ್ತಾರೆ. ಭಕ್ತರು ಕಿಕ್ಕಿರಿದು ಭಯಭಕ್ತಿಯಿಂದ ದರ್ಶನ ಪಡೆಯುತ್ತಿದ್ದರು. ಶರಣಮ್ಮತಾಯಿಯವರು ಶಿವಯೋಗಿಗಳ ಆಶೀರ್ವಾದ ಪಡೆಯಬೇಕೆಂದು ಮನದಲ್ಲಿ ಸಂತೋಷದಿಂದ ಎಲ್ಲರಂತೆ ಗುರುಗಳ ಪಾದಮುಟ್ಟಿ ನಮಸ್ಕರಿಸಬೇಕೆನ್ನುವಷ್ಟರಲ್ಲಿ ಮೊದಲೇ ಶಿವಯೋಗಿಗಳು ಶರಣಮ್ಮ ತಾಯಿಯನ್ನು ಕಂಡ ತಕ್ಷಣವೇ ಬಾಗಿ ಸಂತೋಷದಿಂದ ಕೈ ಜೋಡಿಸಿ ನಮಸ್ಕರಿಸಿದರಂತೆ. ಆಗ ಶಿವಯೋಗಿಗಳ ದೃಷ್ಟಿ ಶರಣಮ್ಮಳ ಮೇಲೆ ಕೇಂದ್ರಿಕೃತವಾಗಿತ್ತು. ಹೀಗಾಗಿ ಆದರದಿಂದಲೇ ಬಾ ತಾಯಿಯೆಂದು ಕರೆದರು. ಆವಾಗ ಶರಣಮ್ಮ ತಾಯಿಯವರು

"ಎಪ್ಪಾ ಎಲ್ಲರಿಗೂ ಆಶೀರ್ವಾದಮಾಡಿ ನನಗೇಕೆ ಕೈಜೋಡಿಸಿದರೆಂದು" ಭಯದಲ್ಲಿಯೇ ಗಾಬರಿಯಾಗಿ ಕೇಳುವರು. ನಿನಗಲ್ಲ ತಾಯಿ ನಿನ್ನ ಉದರದಲ್ಲಿರುವ ಆ ಮಹಾತ್ಮನಿಗೆ ನಮಸ್ಕಾರ ಮಾಡಿದೆ ಎಂದಾಗ, ತದೇಕ ಚಿತ್ತದಿಂದ ನೋಡುತ್ತಾ ನಿನ್ನ ಗರ್ಭದಲ್ಲಿ ಹುಟ್ಟುವ ಮಗು ಅಂತಿಂಥ ಮಗನಲ್ಲ ಈ ಜಗತ್ತನ್ನೇ ಬೆಳಗಲು ಜನ್ಮವೆತ್ತುತ್ತಿದ್ದಾನೆ. ನಿನ್ನ ಹೆತ್ತೊಡಲು ತುಂಬಾ ಪವಿತ್ರವಾದದ್ದು. ಅಂಥ ಕಂದನಿಗೆ ಜನ್ಮ ನೀಡುವ ಭಾಗ್ಯ ನಿನ್ನದಾಗಿದೆಯವ್ವ ಅಥಣಿಯಿಂದ ನಿನಗೆ ಆಶೀರ್ವಾದ, ಮಾಡಾಕ ಬಂದೀನಿ ನೋಡವ್ವ ನಾಡಿನ್ಯಾಗ ನಿನ್ನ ಹೆಸರು ಉಳಿತ್ಯಾಽದ ನೋಡವ್ವವೆಂದು ಹೇಳುತ್ತ ತಮ್ಮ ಜೋಳಿಗೆಗೆ ಕೈಹಾಕಿ ಬೆಳ್ಳಿ ಕರಡಗಿ (ಲಿಂಗದ ಕಾಯಿ) ಹೊರತೆಗೆದರು. ಶರಣಮ್ಮ ನಿನ್ನ ಇಬ್ಬರು ಗಂಡು ಮಕ್ಕಳಲ್ಲಿ ಎರಡನೆಯವನೇ 'ಜಗದೊಡೆಯ' ಅವನೇ ಲಿಂಗ, ಜಗದ ಜನ ಪೂಜಿಸುವ ಲಿಂಗಯ್ಯನವ್ವ, ವಿಭೂತಿ ಪುರುಷನವ್ವ, ಅವನೇ ದೇವರವ್ವ ಹೀಗೆ ಏನೇನೋ ಹೇಳುತ್ತ ಬೆಳ್ಳಿ ಗುಂಡಗಡಗಿ ಶರಣಮ್ಮತಾಯಿ ಉಡಿಯಲ್ಲಿ ಫಲಪುಷ್ಪದೊಂದಿಗೆ ಹಾಕಿ, ಆಶೀರ್ವಾದ ಮಾಡಿದರಂತೆ. ಮಠದಲ್ಲಿ ಸೇರಿದಭಕ್ತರು ಆಶ್ಚರ್ಯದಿಂದ ಶರಣಮ್ಮ ತಾಯಿಗೆ ನೋಡುವರು. ಮುಂದೆ ಈ ತಾಯಿಯ ಉದರದಿಂದ ಜನಿಸಿದ ಮಗುವೆ ಶ್ರೀ ಷಡಕ್ಷರ ದೇವನೆ ಶಿವಯೋಗಿ ಸಿದ್ಧರಾಮೇಶ್ವರ ಜನನವಾಯಿತೆಂದು "ಕೆ. ಶಾಂತಾದೇವಿ ಬಸವರಾಜ ಅವರು ಬರೆದಿರುವ "ಮುಗಳ ಖೋಡದ ಶ್ರೀ ಷಡಕ್ಷರಿ ಶಿವಯೋಗಿ ಸಿದ್ಧರಾಮೇಶ್ವರ ಪ್ರಸಾದ ಮಹಿಮೆ" ಈ ಕೃತಿಯಿಂದ ತಿಳಿದುಕೊಳ್ಳಲಾಗಿದೆ. ವೈಶಾಖಮಾಸದಲ್ಲಿ ಬರುವ ಈ ಉತ್ಸವ ವಸಂತನಾಗಮನದ ಸಂದೇಶವಾಹಕಗಳೇ ಬರುತ್ತವೆ. ಸುಂಟರಗಾಳಿಯ ಆಸೆ ಪೂರೈಕೆಯಿಂದ ಒಂದು ಗೂಡಿಸಿ ಎಲ್ಲಾಕಡೆಗೂ ಚಿಗುರು, ಹೂವು, ಮಾವಿನ ಮಿಡಿಗಾಯಿಗಳು ತೂಗಿಸಿದ ಪ್ರಕೃತಿ ವಸಂತನ ಸ್ವಾಗತದ ಸಿದ್ಧತೆಯಲ್ಲಿರುತ್ತದೆ. ಚೈತ್ರದ ಚೇತನ ಹೂವಿನ ಚಲುವಾಗಿ ಹಕ್ಕಿ ಚಿಲಿಪಿಲಿಯಾಗಿ ದುಂಬಿಗಾನವಾಗಿಯೇ ಎಲ್ಲಾಕಡೆಗೂ ಚಿಮ್ಮುತ್ತಿರುತ್ತದೆ. ಆ ಸಮಯದಲ್ಲಿ ಎಲ್ಲಾ ಮರಗಳು ಚಿಗುರೊಡೆಯುವಾಗ ಈ ಅಗಿ ಹುಣ್ಣಿವೆಯಲ್ಲಿ ಮಲ್ಲಾಬಾದ ಗ್ರಾಮದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ರಥೋತ್ಸವ ನಡೆಯುವದು. ಪೂರ್ಣಿಮೆ ಯಂದು ಅಚಲೇರಿಯಿಂದ ಸಿದ್ಧರಾಮೇಶ್ವರರು ಆಗಮಿಸುವರು. ಅಂದು ಗ್ರಾಮಸ್ಥರೆಲ್ಲರು ಸೇರಿ ನವಬಂಡಿ ಮೆರವಣಿಗೆಯೊಂದಿಗೆ ಸ್ವಾಗತಿಸುವರು. ಭಕ್ತಾದಿಗಳು ಪೂಜ್ಯರಿಗೆ ಬರಮಾಡಿಸಿಕೊಂಡಿರುವ ಮಾರನೆಯ ದಿನದಂದು ರಥೋತ್ಸವ ಬಹು ವಿಜೃಂಭಣೆಯಿಂದ ಆಚರಣೆಯಾಗುತ್ತದೆ. ಊರಿನ ಪ್ರಮುಖರು ಪರಸ್ಥಳದಿಂದ ಜಾತ್ರೆಗಾಗಿ ಆಗಮಿಸಿದ ಭಕ್ತಾದಿಗಳು ಸೇರಿ ಶ್ರೀಗಳವರ ದಿವ್ಯದರ್ಶನ ಪಡೆಯುವರು.

ನೌಬಂಡಿ ಉತ್ಸವದಿಂದ ಆರಂಭವಾದ ಜಾತ್ರೆ ಭಜನೆ, ಕೀರ್ತನೆ, ರಥೋತ್ಸವನ್ನೊಳಗೊಂಡು ಪ್ರಸಿದ್ಧ ಪೈಲವಾನರ ಕುಸ್ತಿಯ ಖಡೆ ತೊಡಿಸುವುರೊಂದಿಗೆ ಮುಕ್ತಾಯವಾಗುವದು. ಈ ಜಾತ್ರೋತ್ಸವಕ್ಕೆ ಬಿಜಾಪುರ ಮತ್ತು ಸೋಲ್ಲಾಪುರ ಜಿಲ್ಲೆಗಳಿಂದ ಪ್ರಸಿದ್ಧ ಗೀಗೀ ಹಾಡುಗಾರರನ್ನು ಕರೆಯಿಸಿ, ಜಾತ್ರೆಯ ಬಿಡುವಿನ ಸಮಯಕ್ಕನುಸಾರವಾಗಿ 'ಹರದೇಶಿ-ನಾಗೇಶಿ' ಹಾಡುಗಳನ್ನು ಹಾಡಿಸುವರು.

ಶ್ರೀ ಶಿವಯೋಗಿ ಸಿದ್ಧರಾಮೇಶ್ವರರು ಆಳಂದ ತಾಲೂಕಿನ ಜಂಬಗಾ(ಬಿ) ಗ್ರಾಮದಲ್ಲಿ ಜನಿಸಿದರು ಅಲ್ಲಿ ಕೆಲವು ವರ್ಷ ಬಾಲ್ಯದ ಜೀವನ ವಿದ್ಯಾಭ್ಯಾಸ ಪೂರೈಸಿ ತಾಲೂಕಿನ ಜಿಡಗಾ ಗ್ರಾಮದ ಮಠಾಧೀಶರಾಗಿ ಅಧಿಕಾರ ಸ್ವೀಕರಿಸಿದರು. ಅಲ್ಲಿಂದ ಮಹಾರಾಷ್ಟ್ರದ

ಉಸ್ಮಾನಬಾದ ಜಿಲ್ಲೆಯ ಅಚಲೇರಿ ಮಠದಲ್ಲಿಯೂ ಅಧಿಕಾರ ವಹಿಸಿಕೊಂಡರು. ಅಲ್ಲಿಯೇ ಕೆಲವು ವರ್ಷಗಳವರೆಗೆ ಇದ್ದರು. ಅಲ್ಲಿಂದ ಮುಗಳ ಖೋಡದ ಯಲ್ಲಾಲಿಂಗ ಮಹಾರಾಜರಿಂದ ಗುರುದೀಕ್ಷೆ ಪಡೆದು ಅನೇಕ ಪವಾಡಗಳು ಪ್ರದರ್ಶಿಸಿದರೆಂದು ಹೇಳುವರು. ಅದೇ ರೀತಿಯಾಗಿ ಅಫಜಲಪುರ ತಾಲೂಕಿನ ಕರಜಗಿ ಸೇರಿದಂತೆ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಇತರೆಡೆಗಳಲ್ಲಿಯೂ ಹಲವಾರು ಮಠಗಳು ಸ್ಥಾಪಿಸಿದರು. ಪ್ರಸ್ತುತವಾಗಿ ಆಳಂದ ತಾಲೂಕಿನ ಜಿಡಗಾ (ಜೆ) ಕ್ಷೇತ್ರದ ಮಠದಲ್ಲಿ ವಾಸ್ತವ್ಯವಾಗಿದ್ದಾರೆ. ಶ್ರೀಯುತರ ಅಧೀನದಲ್ಲಿ ಸುಮಾರು ಮುನ್ನೂರು ಮಠದ ಶಾಖೆಗಳಿಗೂ ಹೆಚ್ಚಿರಬಹುದೆಂದು ವಕ್ತಾರರಿಂದ ತಿಳಿದುಬರುತ್ತದೆ. ಕಲಬುರಗಿ ಹತ್ತಿರದ ಕೋಟನೂರ (ಡಿ) ಗ್ರಾಮದಲ್ಲಿಯೂ ಅತಿ ದೊಡ್ಡದಾದ ಕಟ್ಟಡಯುಳ್ಳ ಮಠವು ಇವರ ಅಧೀನದಲ್ಲಿದೆ. ಬೆಳಗಾವಿ ಜಿಲ್ಲೆ ಮುಗಳ ಖೋಡದಲ್ಲಿಯೆ, ಅತಿದೊಡ್ಡ ಮಠವಿದೆ. ಬಿಜಾಪುರಜಿಲ್ಲೆಯ ಲಚ್ಯಾಣದಲ್ಲಿ ಮೂಲತಃ ಯಲ್ಲಾಲಿಂಗರ ಗುರುಗಳಾದ ಲಚ್ಯಾಣದ ಶ್ರೀ ಸಿದ್ಧಲಿಂಗ ಮಹಾರಾಜರ ಸಂಸ್ಥಾನ ಮಠ ದೊಡ್ಡಪ್ರಮಾಣದಲ್ಲಿದೆ. ಮಲ್ಲಾಬಾದದಲ್ಲಿ ನಡೆಯುವ ರಥೋತ್ಸವವು ಶ್ರೀ ಸಿದ್ಧಲಿಂಗ ಮಹಾರಾಜರ ಸ್ಮರಣಾರ್ಥವಾಗಿ ನಡೆಯುತ್ತದೆ. ಈ ರಥೋತ್ಸವ ಜರುಗುವ ಸಮಯದಲ್ಲಿ ಶ್ರೀ ಸಿದ್ಧರಾಮೇಶ್ವರರು ರಥದಲ್ಲಿ ಆಸೀನರಾದಾಗಲೇ ರಥಕ್ಕೆ ಹಗ್ಗಕಟ್ಟಿ ಜಾತ್ರೆಗೆ ಆಗಮಿಸಿದ ಜನರೆಲ್ಲರು ರಥ ಎಳೆಯುತ್ತಾರೆ. ಮಠದ ಪಾರಾಂಗಣದ ಕೊನೆಯಲ್ಲಿ ಸ್ಥಾಪಿಸಿರುವ ಲಿಂಗದವರೆಗೂ ರಥ ಎಳೆದು ಅಲ್ಲಿಂದ ಮಠದ ಕಡೆಗೆ ನಿರ್ಗಮಿಸುವರು.

ರಥ ಎಳೆಯುವಾಗ ಜನಪದರಲ್ಲಿ ಕಂಡು ಬರುವ ಅದ್ದೂರಿ ಸಿರಿ ಎಷ್ಟು ವರ್ಣಿಸಿದರೂ ಸಾಲದು. ಬೀದಿಗಳೆಲ್ಲಾ ಅಲಂಕಾರಗಳಿಂದ ಕಂಗೊಳಿಸುವಂತೆ ಮಾಡುವರು. ರಥ ಬರುವಾಗ ಅಕ್ಕಪಕ್ಕದ ಅಂಗಡಿಯವರೆಲ್ಲಾ ಭಯಭೀತರಾಗಿ ರಥ ಹೋಗಲು ಸ್ಥಳ ಒದಗಿಸುತ್ತಾರೆ. ರಥೋತ್ಸವದ ಸಮಯಕ್ಕೆ ಜಾತ್ರೆಗೆ ಬಂದಿರುವ ಜನತೆ ರಥ ವೀಕ್ಷಿಸುವಾಗ ಬಾಳೆಹಣ್ಣು, ಖಾರೀಕ, ಬೆಂಡ ಬತ್ತಾಸ ಮತ್ತು ಫಳಹಾರಗಳು ಎಸೆಯುತ್ತಾರೆ. ಜನರ ಕೇಕೆ ಹಾಕುವ ಲಗ್ಗೆಯು ಮುಗಿಲು ಮುಟ್ಟುವದು. ಜನಗಳ ಗೊಂದಲ ಗಡಿ-ಬಿಡಿ, ನೂಕು-ನುಗ್ಗಲು ಆ ಮಧ್ಯ ದೇವರ ಪೂಜೆ ಸರಮಾಲೆ ಇತ್ಯಾದಿ ಕಾರ್ಯಕ್ರಮಗಳು ಜರುಗುವವು. ರಥ ಎಳೆಯುವ ಸಂದರ್ಭದಲ್ಲಿ ಒಬ್ಬ ಸುಸ್ತಾದಾಗ ಮತ್ತೊಬ್ಬ ಹಗ್ಗ ಎಳೆಯುವ ಜಂಗುಯಳಿಲ್ಲಿ ಸೇರುವ ತವಕಯುಳ್ಳವರಾಗುತ್ತಾರೆ. ಈ ಸಂದರ್ಭದಲ್ಲಿ ನೆರೆದಿರುವ ಜನಸಮೂಹದವರು ಶ್ರೀ ಸದ್ಗುರು ಸಿದ್ಧಲಿಂಗ ಮಹಾರಾಜಕೀ ಜೈ ಎನ್ನುವ ಉದ್ಗಾರದ ಘೋಷಣೆಗಳು ಮುಗಿಲು ಮುಟ್ಟುತ್ತವೆ. ಅದೇ ಸಮಯಕ್ಕೆ ಶ್ರೀ ಶಿವಯೋಗಿ ಸಿದ್ಧರಾಮೇಶ್ವರರ ದಿವ್ಯದರ್ಶನ ಪಡೆದ ಭಕ್ತಾದಿಗಳಾದ ಮಹಿಳೆಯರು ತಮ್ಮ ತಮ್ಮ ಮನೆಗಳಿಗೆ ನಿರ್ಗಮಿಸುವರು.

ಮಲ್ಲಾಬಾದ ಮತ್ತು ಮಾತೋಳಿ ಸುತ್ತ-ಮುತ್ತಲಿರುವ ಗ್ರಾಮದ ಮಹಿಳೆಯರು ತಮ್ಮ ಹೊಲಗದ್ದೆಗಳಲ್ಲಿ ಕಳೆ ತೆಗೆಯುವಾಗ ಈ ಹಾಡು ಹೇಳಿ ದಣಿವು ಆರಿಸಿಕೊಳ್ಳುವರು.

ಹಾಡು

ಮಲ್ಲಾಬಾದ ಊರವ್ವ ಮಲ್ಲಿಗೆ ಮಾಟವ್ವ
ಸಿದ್ಧಲಿಂಗ ಅಲ್ಲಿಗಿ ಬರತಾರ। ಕೋಲು ಕೋಲ ॥ಪಲ್ಲ॥

ಸಿದ್ಧಲಿಂಗ ಬರತಾರ ಆಳಂದ ತಾಲೂಕಿನ
ಜಂಬಗಾದಲ್ಲಿ ಜನ್ಮ ತೇತ್ಯಾರ। ಕೋಲುಕೋಲ ॥

ಸಿದ್ಧಲಿಂಗ ಬರತಾರ ಜೀಡಗ್ಯಾಗಿ ನೆಲಸ್ಯಾರ
ಆಗಿ ಹುಣ್ಣಿವೆಗೆ ಮಲ್ಲಾಬಾದದಲ್ಲಿ ಕೀರ್ತಿ ಪಡೆದಾರ। ಕೋಲು ಕೋಲ

ಮಲ್ಲಾಬಾದ ಊರವ್ವ ಸಿದ್ಧಲಿಂಗನ ಥೇರವ್ವ
ಯಲ್ಲಾಲಿಂಗ ಅವರ ಗುರುವವ್ವ। ಕೋಲುಕೋಲ॥

ಯಲ್ಲಾ ಲಿಂಗ ಅವರ ಗುರುವವ್ವ ತಾಯವ್ವ
ಗುರುಶಿಷ್ಯರು ಸೇರಿ ಗುಂಪಾ ಕಟ್ಟಿಸ್ಯಾರ। ಕೋಲಾಕೋಲ

ಗುರುಶಿಷ್ಯರು ಗುಂಪಾ ಕಟ್ಟಿಸ್ಯಾರ ಗುಂಪಾದ ಮುಂದ
ಸಿದ್ಧಲಿಂಗನ ಥೇರ ಎಳಿತಾರ। ಕೋಲು ಕೋಲ

ಅಗಿ ಹುಣ್ಣಿವೆ ದಿನ ಅರ್ಥಟೇನು ಹೇಳಲಿ
ಸಿದ್ಧಲಿಂಗರು ರಥವ ಏರುತಾರ। ಕೋಲು ಕೋಲ ॥

ಸಿದ್ಧಲಿಂಗ ರಥವು ಏರತಾರ ಮಲ್ಲಾಬಾದ ಗುಂಪಾದ
ಲಿಂಗಕ್ಕೆ ನಮಸ್ಕಾರ ಮಾಡೇವ। ಕೋಲು ಕೋಲ॥

ಸಿದ್ಧನ ಥೇರಿನ ಹೊಸಮಿಣಿಯ ಹಿಡ್ಕೊಂಡು
ಬಹುಜನ ಭಕ್ತರು ಎಳದಾರ। ಕೋಲು ಕೊಲ॥

ಅಗಿಹುಣ್ಣಿವೆ ದಿನ ಅವತಾರೇ ನ್ಹೇಳಲಿ
ಸಿದ್ಧನ ಥೇರಿಗಿ ಹೊಸಮಿಣಿಯೋ ಕೋಲು ಕೋಲ॥

ಹೀಗೆ ತಮ್ಮ ಕೆಲಸದ ದಣಿವು ಹಿಂಗಿಸುಕೊಳ್ಳುವಲ್ಲಿ ಸಿದ್ಧಲಿಂಗದೇವರ ಸ್ಮರಣೆಯೊಂದಿಗೆ ಹಾಡುಗಳು ಹೇಳುವರು. ಶ್ರೀ ಸಿದ್ಧರಾಮೇಶ್ವರರ ಮಠದಲ್ಲಿ ಪರಸ್ಥಳದಿಂದ ಬಂದ ಭಕ್ತಾದಿಗಳಿಗೆ ದಾಸೋಹವಿದೆ. ಜಾತ್ರೆಯ ದಿನದಂದು ಭಕ್ತಾದಿಗಳು ತಾವು ಹೊತ್ತಿರುವ ಹರಕೆಗಳಾದ ಜೆಡೆ (ಜಾವುಳ) ತೆಗೆಯುವುದು. ದಂಡನಮಸ್ಕಾರಗಳು ಹಾಕುವದು. ವಿವಾಹಗಳು ನಡೆಯುತ್ತವೆ. ರಥೋತ್ಸವವಾದ ಮಾರನೆಯ ದಿನ ಸಾಯಂಕಾಲ ೪-೦೦ ನಾಲ್ಕು ಘಂಟೆಯಿಂದ ಪ್ರಸಿದ್ಧ ಪೈಲವಾನರಿಂದ ಕುಸ್ತಿ ಸ್ಪರ್ಧೆ ನಡೆದಾದ ಮೇಲೆ ಈ ಜಾತ್ರೋತ್ಸವವು ಮಂಗಳ ಹಾಡುವ ಸಂಪ್ರದಾಯ ಇಂದಿಗೂ ಬೆಳೆದು ಬಂದಿದೆ.

೩೪) ಬಾಬುರಾಯ ಚೆನ್ನಪ್ಪ ಗಾಡಿ ಅಂಚೆ-ಮಲ್ಲಾಬಾದ, ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ
೩೫) ಶ್ರೀಮತಿ ಎಲ್ಲವ್ವ ಪೀರಪ್ಪ ಸಿಂಗೆ ಅಂಚೆ-ಮಲ್ಲಾಬಾದ, ಅಫಜಲಪುರ ತಾಲ್ಲೂಕು, ಗುಲ್ಬಾರ್ಗ ಜಿಲ್ಲೆ

೨. "ಶ್ರೀಮಲ್ಲಿಕಾರ್ಜುನ ಜಾತ್ರೋತ್ಸವ ಆನೂರ"

ಅಫಜಲಪುರ ತಾಲೂಕಿನಿಂದ ಒಂಬತ್ತು ಕಿಲೋಮೀಟರ ಅಂತರದಲ್ಲಿರುವ ಆನೂರ ಗ್ರಾಮ. ಈ ಗ್ರಾಮದಲ್ಲಿರುವ ಮಲ್ಲಿಕಾರ್ಜುನ ದೇವರ ಪಲ್ಲಕೋತ್ಸವವು ಶ್ರಾವಣಮಾಸದಲ್ಲಿ ಜರಗುವದು. ಪ್ರಕೃತಿದೇವತೆಯು ಹಸಿರು ಚಿಗುರುತ್ತಿರುವ ಸುಸಮಯಕ್ಕೆ ಶ್ರಾವಣಮಾಸದ ಕೊನೆಯ ಸೋಮವಾರ ಪಲ್ಲಕ್ಕೋತ್ಸವ ನೆರವೇರುವುದು. ಶ್ರಾವಣಮಾಸದಲ್ಲಿ ಒಂದು ತಿಂಗಳು ಕಾಲ ಪ್ರತಿದಿನ ರಾತ್ರಿ ಎಂಟರಿಂದ ಮಧ್ಯರಾತ್ರಿ ಹನ್ನೆರಡು ಘಂಟೆವರೆಗೆ ಭಜನೆ ಮಾಡುವರು. ಶ್ರಾವಣಮಾಸದ ಕೊನೆಯ ಸೋಮವಾರದ ಮೊದಲನೆಯ ದಿನವಾದ ರವಿವಾರದಂದು ಮಲ್ಲಿಕಾರ್ಜುನ ದೇವರು ಗಂಗಸ್ನಾನ ಮಾಡಿಬರುವ ರೂಢಿ ಮೊದಲಿನಿಂದಲೂ ಬಂದಿದೆ. ಅಂದುರಾತ್ರಿ ಪರಸ್ಥಳಗಳಾದ ದೇಸಾಯಿ ಕಲ್ಲೂರ ಘೂಳನೂರ ಗ್ರಾಮದ ಭಜನಾಮಂಡಳಿಯವರಿಂದ ಕಾರ್ಯಕ್ರಮ ನಡೆಸಲಾಗುತ್ತದೆ. ಮಾರನೆಯ ದಿನ ಸೋಮವಾರ ಬೆಳಿಗ್ಗೆ ೮-೦೦ ಗಂಟೆಯಿಂದ ಮಧ್ಯಾಹ್ನ ೩-೦೦ ಗಂಟೆವರೆಗೆ ನಂದಿಕೋಲ ಮತ್ತು ಪಲ್ಲಕ್ಕೋತ್ಸವ ನಡೆಯುವುದು. ಡೊಳ್ಳಿನ ವಾಲಗ ತಾಳಿನ ಗತ್ತು ಭಜನೆ ಮೇಳಗಳ ಸಹಿತವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕೋತ್ಸವ ನಡೆಯಿಸಿದಾದ ಮೇಲೆ ಕೊನೆಯದಾಗ್ಗಿ ಮಲ್ಲಿಕಾರ್ಜುದೇವಾಲಯ ಪ್ರವೇಶಿಸಿ ಅಲ್ಲಿಯೇ ಪಲ್ಲಕ್ಕಿ ತಂಗಿಸುವರು. ಈ ಉತ್ಸವದಲ್ಲಿ ೧೦೧ ಜಂಗಮರಿಗೆ ಕರೆಯಿಸಿ ಸಿಹಿ ಅಡಿಗೆಗೆ ಹಾಲು-ತುಪ್ಪ ಬೆರೆಸಿ ಊಟಮಾಡಿಸುವರು. ಊಟದ ನಂತರ ತುಪ್ಪದಲ್ಲಿಯೇ ಜಂಗಮರು ಕೈ ತೊಳೆಯಬೇಕೆಂಬುವ ಸಂಪ್ರದಾಯ ಬಹುದಿನಗಳಿಂದಲೂ ಆಚರಣೆಯಲ್ಲಿದೆ.

ಈ ಪಲ್ಲಕೋತ್ಸವದಲ್ಲಿ ೧೦೧ ಜಂಗಮರ ಆಗಮನವಾಗದಿದ್ದರೆ, ದೇವರ ಪಲ್ಲಕ್ಕಿ ಇಟ್ಟಿರುವ ಸ್ಥಳದಿಂದ ಮೇಲೇಳುವುದಿಲ್ಲವೆಂಬ ನಂಬಿಕೆ ಈಗಲೂ ಆ ಗ್ರಾಮಸ್ಥರ ಮನದಲ್ಲಿ ನೆಲೆಯೂರಿದೆ. ಇದೊಂದು ವಿಶಿಷ್ಟ ಸಂಪ್ರದಾಯವೆಂದು ಹೇಳಲಾಗುತ್ತದೆ. ಮಲ್ಲಿಕಾರ್ಜುನ ದೇವರ ಪಲ್ಲಕೋತ್ಸವಕ್ಕೆ ಚಂದಾವಸೂಲಿ ಮಾಡದೆ, ಅದೇ ಗ್ರಾಮದ ಪೋಲಿಸ ಪಾಟೀಲರ ವಂಶದವರಾದ ಬಾಬುರಾವ ಪೋಲಿಸ ಪಾಟೀಲ, ಶರಣಗೌಡ ಪೋಲಿಸಪಾಟೀಲ ಶ್ರೀಮಂತರಾವ ಪೋಲಿಸಪಾಟೀಲ, ಬಸವರಾಜ ಪೋಲಿಸ ಪಾಟೀಲ, ಚೆನ್ನಗೌಡ ಪೋಲಿಸಪಾಟೀಲ ಹೀಗೆ ಪೋಲಿಸ ಪಾಟೀಲ ವಂಶಾವಳಿಯ ಏಳುಜನ ಸಹೋದರರ ಸಂಬಂಧಿಗಳವರಿಂದಲೇ ಹಣ ಮತ್ತು ಆಹಾರ ಸಾಮಗ್ರಿಗಳು ಸಂಗ್ರಹಿಸಿ ಈ ಕಾರ್ಯಕ್ರಮ ಜರುಗಿಸುವದು ಒಂದು ವೈಶಿಷ್ಟ್ಯ ಪೂರ್ಣವಾದ ಉತ್ಸವವಾಗಿದೆ.

ಪಲ್ಲಕೋತ್ಸವ ಸಂದರ್ಭದಲ್ಲಿ ಭಜನೆಯು ಜರುಗುವಾಗ ಅದೇ ಗ್ರಾಮದ ಗವಾಯಿಗಳಾದ ಶರಣಪ್ಪ ಬಳೂಂಡಗಿ ಅವರು ರಚಿಸಿರುವ ಮಲ್ಲಿಕಾರ್ಜುನ ದೇವರ ಸ್ತುತಿ ಪದ್ಯವೊಂದು ಹೀಗಿದೆ.

ಹಾಡು

"ಗಜಮುಖ ಗಣಪತಿ ಗೌರಿಯ ಕಂದ
ಸರ್ಪಭೂಷಣ ಶಿವ ದರ್ಶಿದಾನಂದ (ದರ್ಶಿದ ಆನಂದ)
ಕಥಿಸುವ ಜನರಿಗೆ ಹಿತನುಡಿ ಚಂದ
ಜೋ ಎಂದು ಪಾಡುವೆ ನಾ ನಿಮ್ಮಮುಂದ ।।ಪಲ್ಲ।।

ಶಂಭು ಶಂಕರ ತಾನೇರಿದ ರಥವು
ಅದರಾಗ ಕೂತಿದ್ದ ಅವತಾರಿ ಬಸವು
ಬಲಗೊಂಡು ಸ್ಮರಣೆ ಮಾಡುವೆ ಶಿಶುವು
ಅತಿಸಂತೋಷದಿ ಕೊಡು ಮುಕ್ತಿಪಥವು ॥೧॥

ನಂದಿಗಿ ಹೇಳಿದ ಇಂದ ನೀ ಹೋಗಿ
ಮರ್ತ್ಯಲೋಕದೊಳು ಜನಿಸು ಶರಣಾಗಿ
ಉದ್ಧಾರ ಮಾಡುದಕ ಸರ್ವಜನರಿಗಿ
ನಿನಗೆ ತಪ್ಪದೆ ಕರೆಸಿದ ಕೈಲಾಸ ಪುರುಷರಿಗಿ ॥೨॥

ಅರಳಗುಂಡಗಿಯಲ್ಲಿ ಸಾಲಕ್ಕಿ ಆದಪ್ಪ
ಮಡಿಯಮ್ಮ ಎಂಬುವ ಸತಿಯಳ ರೂಪ
ಸಂತಾನ ಸಲುವಾಗಿ ಉಭಯ ಚಿಂತಿಪ್ಪ
ಅವರ ಭಕ್ತಿಗೆ ಒಂದು ಮಾಡ್ಯಾನ ಕೃಪ ॥೩॥

ಆದಪ್ಪನ ಹೊಟ್ಟೀಲೆ ಹುಟ್ಯಾರನಾಲ್ವರು
ಶರಣಪ್ಪ ಅಂಬುವ ಸಾಧುನ ಅವತಾರು
ಅಣ್ಣ-ತಮ್ಮರೆಲ್ಲಾ ಭೇದ ಮಾಡ್ಯಾರು
ದಾನ ಮಾಡಿದ ಮನಿ ಹಾಳು ಅಂದಾರು ॥೪॥

ಅಣ್ಣ-ತಮ್ಮರೆಲ್ಲರು ಒಂದಾನ್ನೊಂದು ದಿನ
ಶರಣಾರ ಸಂಗ್ಯಾಟ ತೆಗೆದಾರ ಕದನ
ಮನಿಹಾಳ ಮಾಡೀದಿ ಉಣಿಸಿ ಅನ್ನ
ನೀನು ಬ್ಯಾರ್ಯಾಗಿದ್ದು ಮಾಡಪ್ಪ ದಾನ ॥೫॥

ಬೀಳಾ ಕರಕಿ ಹೊಲಾ ಕೊಟ್ಟಾರ ನಿನಗ
ಹಾಳು ಮನಿಯೊಂದು ಇರಲ್ಯಾಕ ಜಾಕ
ಒಡಕ ಗಂಗ್ಯಾಳ ಚರಗಿ ಉಣಲಾಕ ಅಂದವಗ
ಹಿಂಗ ಪಾಲ ಮಾಡಿ ಕೊಟ್ಟರು ಪಂಚರದಾಗ ॥೬॥

ತನ್ನ ಪಾಲಿಗಿ ಬಂದs ಹೊಲವು ಬಿತ್ತಿಸಿ
ಹಕ್ಕೀಗಿ ಕರೆಕರೆದು ಧಾನ್ಯವು ತಿನಿಸಿ
ಮನ ದಣಿದು ಕುಡಿಲ್ಯಾಕೆ ನೀರವು ಇಡಿಸಿ
ಹಿಂಗs ಕಾಳಿಲ್ಲದ ತೆನಿತಿನಿಸಿ ಮಾಡ್ಯಾನ ರಾಶಿ ॥೭॥

ಮುರಿಲಿಕ್ಕ ಕರದಾರ ಬರಲಿಲ್ಲ ಯಾರ್‍ಯಾರು
ಯಾರ್‍ಯಾರು ಕರೆಲಾರದ ಹಳೇ ಮುದುಕ್ಯಾರು

---

೩೬) ಕುಪ್ಪಣ್ಣಗೌಡ ಅಯ್ಯಣ್ಣಗೌಡ ಪೋಲಿಸ್ ಪಾಟೀಲ, ಅಂಚೆ ಆನೂರ, ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

ಖಣದ ಸುತ್ತ-ಮುತ್ತ ಹೋಗಿ ಕುಂತಾರು
ಹಿಂಗ ಶರಣರ ಪದಹಾಡಿ ಗೂಡು ಮುರಿದಾರು ॥೮॥

ಕೂಲಿ ಕಂಕಿಯೊಯ್ದು ಕುಟ್ಟಿ ನೋಡ್ಯಾರು
ಮೂಲಿ ಕುಂಚಿಗಿ ಹಾಸಿ ಬೇಸಿ ಕೇರ್‍ಯಾರು
ಅಳ್ದು ನೋಡಿದರ ಹನ್ನೆರಡು ಸೇರು
ಶರಣಗ ಮನದಣಿದು ರಾಶಿ ಕೊಡಲೆಂದರವರು ॥೯॥

ಹತ್ತು ಎತ್ತಿನ ಹಂತಿ ಎರಡು ಕಟ್ಟಿದಾರು
ಹೊತ್ತು ಹೊಂಡುವ ತನಕ ಕಂಕಿ ತೆಗೆದಾರು
ಅವರು ಶರಣರ ಪದಹಾಡಿ ಹಂತಿ ಬಿಟ್ಟಾರು
ಜೋಡ ಹಾಲ್ಲಿ ಹಚ್ಚಿ ತೂರಿನೋಡ್ಯಾರು ॥೧೦॥

ಐದು ಬುಟ್ಟಿಗೊಂದು ಚೀಲ ತುಂಬ್ಯಾರು
ಊರ್‍ಯಾನ ಬಂಡಿಯು ಹಿಡಿದು ತಂದಾರು
ಹೊತ್ತ ಹೊಂಡುತನ ರಾಶಿ ಹೊಡದಾರು
ಊರಾನ ಹೊಗೆಗಳೆಲ್ಲಾ ತುಂಬ್ಯಾರು ॥೧೧॥

ಇದ್ದ ರಾಶಿ ಇದ್ದಂಗೆ ಅಂದಾರು
ಶರಣ ಬಸವರು ಕಣಕೆ ಬಂದಾರು
ಕಣದೊಳಗೆ ಹೋಗಿ ನಿಂತು ಅಂದಾರು
ಜಗ್‌ಭರಿತ ಜಂಗಮರಿಗೆ ಕರಿರಿ ಅಂದಾರು ॥೧೨॥

ಆಯಗಾರ ಮಂದಿಯೆಲ್ಲ ಓಡಿ ಬಂದಾರು
ದಾನಕೊಟ್ಟು ಗಂಟಿ ಎತ್ತಿ ಕಳುಪ್ಯಾರು
ಆಯಗಾರ ಮಂದಿಗೆ ಹರುಷ ಬಿಡಿಸ್ಯಾರು
ಶರಣನ ಪವಾಡ ಬೆಳೆಯಲಂದಾರು ॥೧೩॥

ಮಂಗಲಕರವಾದ ಆನೂರ ಊರ
ತುಂಗಭದ್ರ ಸಿರಿ ಮಲ್ಲದೇವರ
ಶರಣಪ್ಪ ಮಾಡ್ಯಾನ ಈ ಕಾಫಿಸಾರ
ಹಿಂಗಿಸು ನೀ ನಮ್ಮ ಮಾಯೆ ಸಂಸಾರ ॥೧೪॥

ಶರಣಪ್ಪ ಬಳೂಂಡಗಿ ಗವಾಯಿಗಳು ರಚಿಸಿದ ಈ ಸ್ತುತಿ ಪದ್ಯದಿಂದ ಅರಳಗುಂಡಗಿಯ ಶ್ರೀಶರಣಬಸವೇಶ್ವರ ಸಂಕ್ಷಿಪ್ತ ಇತಿಹಾಸ ತಿಳಿಸುವುದರೊಂದಿಗೆ ಸ್ವಗ್ರಾಮದ ಮಲ್ಲಿಕಾರ್ಜುನ ದೇವರಪಲ್ಲಕ್ಕಿ ಉತ್ಸವದಲ್ಲಿ ತುಂಗಭದ್ರೆಯ ನದಿಯ ಪ್ರವಾಹದಂತೆ ವಿಜೃಂಭಿಸುತ್ತದೆಂದು ಉಲ್ಲೇಖಿಸುತ್ತಾರೆ. ಹೀಗೆ ಮಲ್ಲಿಕಾರ್ಜುನ ದೇವರ ಪಲ್ಲಕ್ಕೋತ್ಸವ ಕಾರ್ಯಕ್ರಮದ ವಿವರ ಬರೆಯಲಾಗಿದೆ.

---

೩೮) ಶರಣಪ್ಪ ಬಳೂಂಡಗಿ, ಅಂಚೆ ಆನೂರ, ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

೩. ಶ್ರೀ ಕಾಳಿಂಗೇಶ್ವರ ಉತ್ಸವ ಇಂಗಳಗಿ (ಬಿ)

ಚಳಿಗಾಲದ ಸಮಯ ಹಿಂಗಾರಿ ಬೆಳೆಯು ಹಸಿರು ಕಾಂತಿ ಬೀರುತ್ತ ತನ್ನ ಶೋಭೆ ತೋರಿಸುತ್ತಿರುವಾಗ ಶ್ರೀ ಕಾಳಿಂಗೇಶ್ವರ ಉತ್ಸವ ಜರುಗುವದು. ಈ ಉತ್ಸವವು ಅಫಜಲಪುರ ತಾಲೂಕಿನ ಕೇಂದ್ರ ಸ್ಥಳದಿಂದ ಪೂರ್ವ ದಿಕ್ಕಿನಡೆಗೆ ೧೯ ಕಿ.ಮೀ ದೂರದಲ್ಲಿರುವ ಇಂಗಳಗಿ (ಬಿ) ಗ್ರಾಮದಲ್ಲಿ ನಡೆಯುತ್ತದೆ. ಕಾಳಿಂಗೇಶ್ವರ ಉತ್ಸವ ಇಂಗಳಗಿ (ಬಿ) ಗ್ರಾಮದ ಗೌಡರ ಮನೆತನದ ಶ್ರೀ ಕಾಳಿಂಗಪ್ಪ ಪಾಟೀಲರವರೆ ಖರ್ಚು-ವೆಚ್ಚ ನಿಭಾಯಿಸುವರೆಂದು ಪ್ರತೀತಿಯಿದೆ. ಹಿಂದೆ ಹೇಳಲಾದ ಮಲ್ಲಿಕಾರ್ಜುನ ಉತ್ಸವದ ವೈಶಿಷ್ಟ್ಯ ಪೂರ್ಣವಾದ ವ್ಯವಸ್ಥೆ ಇಲ್ಲಿಯೂ ಇದೆಯೆಂಬುದು ಜನಜನಿತವಾಗಿದೆ. ಆನೂರ ಗ್ರಾಮದಲ್ಲಿ ಏಳು ಜನ ಅಣ್ಣ-ತಮ್ಮಂದಿರು ಖರ್ಚು ನಿಭಾಯಿಸಿದರೆ, ಇಲ್ಲಿ ಕೇವಲ ಒಂದೇ ಮನೆತನಕ್ಕೆ ಸಂಬಂಧಿಸಿದ ಕಾಳಿಂಗಪ್ಪ ಪಾಟೀಲ ಅವರೆ ನಿಭಾಯಿಸುತ್ತಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಕಾಳಿಂಗೇಶ್ವರ ಉತ್ಸವ ಹೊಸ್ತಿಲ ಹುಣ್ಣಿವೆಯ ದಿನ ಪುರುವಂತರ ನೃತ್ಯಮೇಳ ಹಿಡಿದು ವಿವಿಧ ಗ್ರಾಮಗಳಿಂದ ಆಗಮಿಸಿದ ಭಜನಾಮಂಡಳಿಯವರನ್ನೊಳಗೊಂಡ ಜನರು ಭಾಗವಹಿಸುವರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುತ್ತಾರೆ. ಕಾಳಿಂಗೇಶ್ವರ ದೇವರು ಹೊಸ್ತಿಲ ಹುಣ್ಣಿಮೆಯಂದು ಅಮರಜ ನದಿಯಲ್ಲಿ ಮಿಂದು ಬಂದು ಸರ್ವರಿಗೂ ದರ್ಶನ ನೀಡುವ ಸಂದರ್ಭದಲ್ಲಿ , ಆ ದೇವರ ಮಹಿಮೆಯು ವೈಶಿಷ್ಟಪೂರ್ಣ ವಾಗಿದೆಯೆಂದು ಭಕ್ತಾದಿಗಳು ವರ್ಣಿಸುತ್ತಾರೆ.

ಮಲ್ಲಿಕಾರ್ಜುನ ದೇವಸ್ಥಾನ ಅಮರಜ ನದಿಯ ದಡದಲ್ಲಿದೆ. ದೇವಾಲಯದ ದೃಶ್ಯ ನೋಡುಗರ ಕಣ್ಣೋಟಕ್ಕೆ ರಸದೂಟ ನೀಡುತ್ತದೆ. ಎಂಥ ಕಠೋರ ಹೃದಯದವರಿಗೂ ಈ ದೇವರ ದಂತಕಥೆಯು ಕೇಳುವುದರೊಂದಿಗೆ ಬೆರಗುಗೊಳಿಸುತ್ತದೆಂದು ಊಹಿಸಲಾಗಿದೆ. ಜನಪದ ಕಥನ ಕಾವ್ಯದಲ್ಲಿರುವ 'ಚೆನ್ನಮ್ಮನ ದಂಡಿ' ಕಥನ ಗೀತೆಗೂ ಈ ದಂತಕಥೆಗೂ ಸಂಬಂಧ ಕಲ್ಪಿಸುವ ರೀತಿಯಲ್ಲಿ ಕೇಳುಗರನ್ನು ಕರೆದೊಯ್ಯುವ ಹಿನ್ನೆಲೆ ಈ ದೇವರದಾಗಿದೆ. ಈ ದೇವಾಲಯದಲ್ಲಿ ಮೂವತ್ತಾರು (೩೬) ಕೋಟಿ ದೇವತೆಗಳ ವಿಗ್ರಹಗಳಿವೆ ಎನ್ನುತ್ತಾರೆ. ಕಾಳಿಂಗೇಶ್ವರ ಗುಡಿ ಶಿಖರವು ೧೫೦ ಅಡಿ ಎತ್ತರವಿದೆ. ದೇವಸ್ಥಾನದ ಮುಂಭಾಗದಲ್ಲಿ 'ಅಮರಜಾ' ಗಂಗೆಯೂ 'ಕಾಳಿಂಗೇಶ್ವರ'ನ ಸ್ನಾನಕ್ಕಾಗಿ ಹರಿದು ಬರುತ್ತಾಳೆನ್ನುವಂತೆ ಭಾಸವಾಗುತ್ತದೆ. ದೇವತೆಗೆ ಸಂಬಂಧಿಸುವ ದಂತಕಥೆಯೊಂದು ಹೀಗಿದೆ;-

ಅರವತ್ತು ವರ್ಷದಾಯುಷ್ಯ ದಾಟಿದ ರಾಜರಾಣಿಯರು (ಶಿವ ಭಕ್ತೆ- ಶಿವಭಕ್ತರು ಇದ್ದರು. ಅವರು ಹೆಸರು ಬಳಸದೆ ಶಿವಭಕ್ತೆ-ಶಿವಭಕ್ತ ಎಂದೆ ಊಹಿಸಿದ್ದಾರೆ. ಅವರ ಹೆಸರು ಉಲ್ಲೇಖಿಸಿಲ್ಲ) ಅವರಿಗೆ ಬಹುದಿನಗಳಿಂದಲೂ ಮಕ್ಕಳಿರಲಿಲ್ಲ. ಮಕ್ಕಳಾಗದವರಿಗೆ ಸದ್ಗತಿ ಸಿಗುವದಿಲ್ಲವೆಂಬುದನ್ನರಿತ, ಈ ದಂಪತಿಗಳು 'ಮಹಾದೇವನನ್ನು ಕುರಿತು ವ್ರತ ಕೈಗೊಂಡರು. ಅವರು ಕೈಗೊಂಡ ವ್ರತದಿಂದ ಮಹಾತಪಸ್ವಿಗಳಾದಾಗ, ಇವರ ತಪಸ್ಸಿಗೆ ಮೆಚ್ಚಿದ ಪಾರ್ವತಿ-ಪರಮೇಶ್ವರರು ಪ್ರತ್ಯಕ್ಷರಾಗಿ ನಿಮಗೆ ಯಾವ ವರ ಪ್ರತಿಪಾದಿಸಲೆಂದು

ಕೇಳಿದರಂತೆ. ಆಗ ಆಶ್ಚರ್ಯಗೊಂಡ ದಂಪತಿಗಳು ತಪಸ್ಸಿನಿಂದ ಎಚ್ಚರಗೊಂಡು ಕೇಳಿದರಂತೆ. ದೇವಾ ನಮಗೆ ಮಕ್ಕಳ ಭಾಗ್ಯ ಪರಿಪಾಲಿಸಿ ಮೋಕ್ಷ ದೊರೆಯುವಂತೆ ಮಾಡಬೇಕೆಂದು ಮೊರೆಯಿಟ್ಟರಂತೆ. ಆತ ಪರಮೇಶ್ವರರು ಹೀಗೆ ನುಡಿದರಂತೆ, ಮಹಾತಪಸ್ವಿಗಳೀರ್ವರೇ ನಿಮಗೆ ಒಂದೇ ಒಂದು ಫಲಸಂತಾನವಿದೆ. ನೂರು ವರುಷ ಬಾಳುವ ಮೂರ್ಖ ಮಗನ್ನು ಕೊಡಲೋ ಅಥವಾ ಹದಿನಾರು ವರ್ಷ ಬಾಳುವ ಸುಪುತ್ರನನ್ನು ಕೊಡಲೆಂದು ಪ್ರಶ್ನಿಸಿದರಂತೆ. ಶಿವಭಕ್ತರುನಮಗೆ ೧೬ ವರುಷದ ಸುಪುತ್ರನನ್ನು ಕೊಡಿರೆಂದು ಮೊರೆಹೋದರು. ನಿಮಗೆ ಹದಿನಾರು ವರುಷಬಾಳುವ ಸುಪುತ್ರನನ್ನೇ ದಯಪಾಲಿಸಿದ್ದೇನೆ. ಆದರೆ ಮಧ್ಯದೊಳಗೆ ಒಂದು ದುರ್ಘಟನೆ ಜರುಗುವದು. ಆ ಘಟನೆಯಿಂದ ಪಾರುಮಾಡಲು ಒಬ್ಬ ಮಹಾಸತಿಯಳ ಪ್ರಯತ್ನದ ಫಲದಿಂದ ಚಿರಂಜೀವಿ ಯಾಗುವನೆಂದು ಆಶೀರ್ವದಿಸಿ ಮಾಯವಾದರೆಂದು ಹೇಳುತ್ತಾರೆ. ದೇವರ ಅನುಗ್ರಹ ದಿಂದ ಒಂದು ವರ್ಷದಲ್ಲಿಯೇ ರಾಜ-ರಾಣಿಯರಿಗೆ ಫಲಸಂತಾನ ಪ್ರಾಪ್ತವಾಯಿತು. ರಾಜನು ಜ್ಯೋತಿಷ್ಯರನ್ನು ಕರೆಯಿಸಿ ಕೇಳಿದರು. ಪ್ರತ್ಯಕ್ಷವಾದ ಶಿವ-ಶಕ್ತಿಯ ವಾಣಿಯಂತೆ ಹೇಳಿದಾಗ ಅವರಿಗೆಕಾಣಿಕೆ ಕೂಡ ಕೊಟ್ಟು ಕಳುಹಿಸಿದರಂತೆ. ರಾಜಮನೆತನದಲ್ಲಿ ಬೆಳೆಯುತ್ತಿರುವ ಶಿಶುವಿಗೆ ಕಾಳಿಂಗನೆಂಬ ನಾಮಕರಣ ಮಾಡಿದರು.

ಮಗು ಕಾಳಿಂಗನು ದಿನದಿಂದ ದಿನಕ್ಕೆ ಬೆಳೆದು ೧೬ನೇ ವವಯಸ್ಸಿನವನಾದಾಗ ತನ್ನ ಗೆಳೆಯರೊಡನೆ ಅರಣ್ಯಕ್ಕೆ ಹೋಗುವುದಾಗಿ ತಾಯಿಗೆ ತಿಳಿಸುತ್ತಾನೆ. ತಾಯಿ ಪರಿಪರಿಯಿಂದ ಕಾಳಿಂಗನಿಗೆ ಅರಣ್ಯಕ್ಕೆ ಹೋಗಲು ಬೇಡವೆಂದರೂ ಕೇಳದೆ ಕ್ಷತ್ರಿಯ ವಂಶದ ಸಂಪ್ರಾದಾಯ ತಾಯಿಗೆ ತಿಳಿಸುವನು. ಅಮ್ಮ ಮನೆಯಲ್ಲಿ ಕುಳಿತುಕೊಳ್ಳುವದು ಕ್ಷತ್ರಿಯ ವಂಶದವರಿಗೆ ಸಲ್ಲುವ ಗೌರವವಾಗುವದಿಲ್ಲ ತಾಯಿಯೆಂದು ಸಮಧಾನ ಹೇಳಿ, ತಾಯಿ ಮಾತು ಮೀರಿ ಅರಣ್ಯಕ್ಕೆ ಹೋಗುತ್ತಾನೆ. Y:36 P04

ಗೆಳೆಯರೊಂದಿಗೆ ಅರಣ್ಯಕ್ಕೆ ಹೋದ ಕಾಳಿಂಗನು ಗೆಳೆಯರೊಡನೆ ಸುತ್ತಾಡಿದರೂ ಬೇಟೆ ಸಿಗದಾದಾಗ ವಿಶ್ರಾಂತಿಗಾಗಿ ಪ್ರಶಾಂತವಾದ ಸ್ಥಳ ವೀಕ್ಷಿಸುತ್ತ ಅಲೆದಾಡಿದರು. ಕೊನೆಗೂ ಅಲೆದಾಡಿ ಒಂದು ವಿಶಾಲವಾದ ಸ್ಥಳದಲ್ಲಿ ದೊಡ್ಡದಾದ ಗುಡಿಯೊಂದು ಕಂಡಿತು. ಗೆಳೆಯರ ಸಮೂಹದೊಂದಿಗೆ ಗುಡಿ ಪ್ರವೇಶಿಸಿದಾಗ ಆ ಗುಡಿಯಲ್ಲಿ ಚಿತ್ರಿಸಿದ ಚಿತ್ರದ ಹುಲಿಗಂಜಿ ಕಾಳಿಂಗನು ಪ್ರಾಣಬಿಟ್ಟನು.

ಈ ಸುದ್ದಿ ರಾಜರಿಗೆ ಮುಟ್ಟಿತು. ಮಹಾರಾಜರು ಪ್ರಾಣಕಳೆದು ಕೊಂಡಿರುವ ಮಗನ ಶವ ಮನೆಗೆ ತಂದರು. ಮಗನ ಶವ-ಸಂಸ್ಕಾರ ಮಾಡಬೇಕಾದರೆ. ಆತನು ೧೬ ವರುಷದವನಾಗಿರುವುದರಿಂದ ವಿವಾಹ ಮಾಡಿ ಶವ-ಸಂಸ್ಕಾರ ಮಾಡಬೇಕೆಂಬುವ ತೀರ್ಮಾನ ಕೈಗೊಂಡರು. ತಮ್ಮ ರಾಜ್ಯದೊಳು ಮಗ ಕಾಳಿಂಗನಿಗೆ ಕನ್ಯಾದಾನ ಮಾಡುವವರು ಯಾರಾದರು ಇದ್ದರೆ ಅಂಥವರಿಗೆ ರಾಜ್ಯದಲ್ಲಿ ಅರ್ಧರಾಜ್ಯ ಕೊಡುವುದಾಗಿ ಆದೇಶ ಹೊರಡಿಸಿರೆಂದು ಹೇಳಿದರು. ರಾಜಾದೇಶ ರಾಜ್ಯದ ಮೂಲೆ ಮೂಲೆಗೂ ಕಳಿಸಿದರು. ಯಾರೂ ಕನ್ಯಾ ದಾನಮಾಡಲು ಮುಂದೆ ಬರಲಿಲ್ಲ. ಇದನ್ನು ನಿರೀಕ್ಷಿಸಿದ ಒಬ್ಬ ಬಡ ಬ್ರಾಹ್ಮಣನು ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವುದರಿಂದ ವರದಕ್ಷಿಣೆ ಕೊಡಲು ತನ್ನ

ಹತ್ತಿರ ಹಣವಿಲ್ಲವಾದ್ದರಿಂದ, ಅಸಹಾಯಕನಾಗಿ ಮಗಳ ಮದುವೆ ಮಾಡಲಿಲ್ಲ. ಆದರೀಗ ಮಗಳ ಮದುವೆಗೆ ಸಮಯ ಕೂಡಿ ಬಂದಿದೆ ಎಂದು ಭಾವಿಸಿದನು. ಈ ಸಂದರ್ಭದಲ್ಲಿ ತಂದೆ ನಡೆದಿರುವ ಘಟನೆ ತಾಯಿಗೆ ಪ್ರಸ್ತಾಪಿಸುವ ಸಮಯದಲ್ಲಿ ಚೆನ್ನಮ್ಮಳ ಕಿವಿಗೆ ಮುಟ್ಟಿತು. ತಾಯಿ ಬೇಡವೆನ್ನುವುದು, ತಂದೆ ಮದುವೆಗೆ ಸಿದ್ಧತೆ ಮಾಡುವುದಾಗಿ, ವಾದ ವಿವಾದ ನಡೆದಾಗ ಮಗಳಾದ ಚೆನ್ನಮ್ಮಳೆ ಮುಂದೆ ಬಂದು ಹೀಗೆ ಹೇಳುತ್ತಾಳೆ. ನನ್ನ ವಿವಾಹ ಶವದೊಂದಿಗೆ ಮಾಡಲು ನನ್ನ ತಾಯಿ ಸಿದ್ಧವಿರದಿದ್ದರೂ ಪುರುಷ ಪ್ರಧಾನವಾದ ಭಾರತದಲ್ಲಿ ತಂದೆಯ ಸ್ಥಾನ ಮಹತ್ವದಾಗಿದೆ. ಆದ್ದರಿಂದ ನಾನು ತಂದೆಯ ನಿರ್ಧಾರಕ್ಕೆ ಸಮ್ಮತಿಸಿ ರಾಜಕುಮಾರರನ್ನು ವಿವಾಹವಾಗಲು ಸಿದ್ಧಳಿರುವುದಾಗಿ ಅನುಮತಿ ನೀಡಿದಳು.

ಚೆನ್ನಮ್ಮನ ಒಪ್ಪಿಗೆ ಪಡೆದೆ ರಾಜರು ಅವಳ ತಂದೆಯವರಿಗೆ ಕರೆಯಿಸಿ, ಜೀವಂತ ವ್ಯಕ್ತಿಯ ಮದುವೆ ಹೇಗೆ ನಡೆಯುತವುದು, ಅದೇ ಸಂಪ್ರದಾಯದಂತೆ ಶವದೊಂದಿಗೆ ಮದುವೆ ಅದ್ದೂರಿಯಾಗಿ ನೆರವೇರಿಸಿದರು. ಚೆನ್ನಮ್ಮಳ ತಂದೆಗೆ ಇದೇ ಸಂದರ್ಭದಲ್ಲಿ ಅರ್ಧರಾಜ್ಯ ಹಂಚಿಕೊಟ್ಟರು. ಚೆನ್ಮಮ್ಮಳ ಪತಿಯಾದ ಕಾಳಿಂಗನ ಶವವು ಅಂತಿಮ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ತೆಗೆದು ಕೊಂಡೊಯ್ದರು. ಭಾರತೀಯ ಸಂಪ್ರದಾಯದ ಪ್ರಕಾರ ವಿಧಿಕ್ರಿಯೆಗಳೆಲ್ಲ ಮುಗಿದಾದ ಮೇಲೆ ಶವ ಹೂಳಲಣಿಯಾದಾಗ, ಚೆನ್ನಮ್ಮ ಪತಿಯ ಶವ ಹೂಳಲು ಬಿಡಲಿಲ್ಲ. ರಾಜರು ರಾಜ್ಯದ ಪ್ರಜೆಗಳೆಲ್ಲರು ವಿವಿಧ ಪರಿಯಿಂದ ಕೇಳಿಕೊಂಡರು ಚೆನ್ನಮ್ಮ ತನ್ನ ಹಟವು ಬಿಡಲಿಲ್ಲ. ಆಗ ಮೋಡವಿಲ್ಲದೆ ವಿಚಿತ್ರ ರೀತಿಯಿಂದ ಭಯಂಕರವಾದ ಮಳೆ ಬಂದಿತು. ಮಳೆಯ ರಭಸಕ್ಕೆ ತಾಳದ ಜನತೆ ಬಿದ್ದೇವೊ, ಕೆಟ್ಟೆವೋ ಎನ್ನುವ ರೀತಿಯಲ್ಲಿ ಓಡಿ ಹೋದರು. ಆದರೆ ಚೆನ್ನಮ್ಮ ಮಾತ್ರ ತನ್ನ ಪತಿಯ ಶವ ಬಿಟ್ಟು ಕದಲಲ್ಲ. ತನ್ನ ಪತಿಯ ಶವದ ಮೇಲೆ ಬಿದ್ದು ಮೌನ ತಪಸ್ಸು ಮಾಡಿದಳೆಂಬ ವಾಡಿಕೆ. ಅವಳ ತಪಸ್ಸು ಪರೀಕ್ಷಿಸಲು ಬೆಂಕಿ ಮಳೆಗರೆದರೂ, ಸರ್ಪಮಳೆಗರೆದರೂ, ವಿವಿಧ ಕಾಡು ಪ್ರಾಣಿಗಳಿಗೆ ಕಳಿಸಿದರೂ ಹೆದರದೆ ತಪಸ್ಸುಗೈದಳು. ಇವಳ ತಪಸ್ಸಿಗೆ ಮೆಚ್ಚಿದ ಪಾರ್ವತಿವಾದಕ್ಕಿಳಿದಳು. ಅವಳ ಪರೀಕ್ಷೆ ಮಾಡುವುದಕ್ಕಾಗಿ ಪಾರ್ವತಿ- ಪರಮೇಶ್ವರರು ಚೆನ್ನಮ್ಮಳನ್ನು ತಡೆದರು. ಆದರೆ ಅವಳು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಅಯ್ಯೋ ಶಿವನೆ ನನ್ನ ಪತಿಯು ಬದುಕುಳಿಯದಿದ್ದರೆ, ನಾನಿದ್ದು ಫಲವೇನು. ತಾನೂ ನೀರಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವುದಾಗಿ ಹಾರಲಣಿಯಾದಾಗ, ಪರಮೇಶ್ವರರು ಪ್ರತ್ಯಕ್ಷನಾಗಿ ಕಾಳಿಂಗನನ್ನು ಕೂಗಿದರು. ಕಾಳಿಂಗನು ಮಲಗಿದವರು ಎಚ್ಚರವಾದಂತೆ ಎದ್ದು ಕುಳಿತು ನಾನೇಕೆ ಇಲ್ಲಿದ್ದೇನೆಂದು ವಿಚಾರಿಸಿದನು. ನಡೆದ ಘಟನೆ ಪರಮೇಶ್ವರ ತಿಳಿಸಿದಾಗ ಅವರ ಪಾದಕ್ಕೆರಗಿದ ಕಾಳಿಂಗನು ನನ್ನ ಸ್ಥಾನವೆಲ್ಲಿ ದೇವಾ? ನಾನು ತಮ್ಮಲ್ಲಿಗೆ ಬರುವುದಾಗಿ ಹೇಳಿದನಂತೆ, ಆಗ ಪರಮೇಶ್ವರರು ಕಾಳಿಂಗನನ್ನು ಕುರಿತು ಕುಮಾರ ನಿನ್ನ ಸ್ಥಾನ ಕಲಿಯುಗದಲ್ಲಿದೆ ಅಲ್ಲಿಗೆ ಹೋಗೆಂದು ಉಪದೇಶಿಸಿದರಂತೆ. ಆ ದೇವನ ಆದೇಶದಂತೆ ಕಾಳಿಂಗನು ಮಡದಿ ಚೆನ್ನಮ್ಮಳೊಂದಿಗೆ ಬಂದನೆಂದು ಹೇಳುವ ಪರಿಪಾಠ ಇಲ್ಲಿಯ

ಗ್ರಾಮಸ್ಥರಲ್ಲಿ ನೆಲೆಯೂರಿದೆ. ಜನಪದರ ನಂಬಿಕೆಯ ಪ್ರಕಾರ ಮೂರು ಅವತಾರದವನೆಂದು ಹೇಳುತ್ತಾರೆ.

೧) ರಾಮಾಯಣದಲ್ಲಿ ರಾಮನ ಅವತಾರ
೨) ದ್ವಾಪರ ಯುಗದಲ್ಲಿ ಕೃಷ್ಣನ ಅವತಾರ
೩) ಕಲಿಯುಗದಲ್ಲಿ ಕಾಳಿಂಗ (ಸರ್ಪ)ನ ಅವತಾರ

ಇನ್ನೊಂದು ದಂತಕಥೆಯ ಪ್ರಕಾರ ಕಾಳಿಂಗನು ಕಾರ್ತಲ್‌ರಾಜ ಮತ್ತು ಕುಂಕುಮ ದೇವಿಯರಿಗೆ ಬಹಳ ದಿನಗಳಿಂದಲೂ ಮಕ್ಕಳಿರಲಿಲ್ಲ. ಅವರ ಉತ್ತರಾಧಿಕಾರಕ್ಕೆ ತಮ್ಮ ವಂಶಜರಾರು ಇಲ್ಲದಕ್ಕೆ ದತ್ತು ಸ್ವೀಕಾರಕ್ಕೆ ಇಚ್ಛೆ ಪಡೆಯದ ದಂಪತಿಗಳಿಬ್ಬರೂ ಚಿಂತಾಮಗ್ನರಾಗಿ ತಪಸ್ಸು ಕೈಗೊಳ್ಳುತ್ತಾರೆ. ಅವರ ತಪಸ್ಸಿಗೆ ಮೆಚ್ಚಿದ ಶಿವನು ಬ್ರಾಹ್ಮಣ ವೇಷ ಧರಿಸಿ ಭೆಟ್ಟಿಯಾಗಿ ಮಗಳೇ ನೀನೇನು ಚಿಂತಿಸಬೇಡ. ನಿನಗೊಬ್ಬ ಮುತ್ತಿನಂಥ ಮಗುವಿನ ಜನನವಾಗುವದೆಂದು ಹೇಳಿ ತನ್ನಲ್ಲಿರುವ ವಿಭೂತಿಯೊಂದು ಅವರ ಕೈಗೆ ಕೊಟ್ಟು ಬೆಳಿಗ್ಗೆ ಸ್ನಾನ ಮಾಡಿ, ಈ ವಿಭೂತಿ ಅಂಗೈಯಲ್ಲಿ ಹಿಡಿದು ಎರಡುಸಲ ಪ್ರದಕ್ಷಿಣೆ ಹಾಕಿದರೆ. ಕೆಲವು ದಿನಗಳು ಗತಿಸಿದ ಮೇಲೆ ತಮಗೊಬ್ಬ ಒಳ್ಳೆಯ ಮಗ ಹುಟ್ಟುವನು. ಹದಿನಾರು ವರುಷದವನಾದಾಗ ಚಿತ್ರದ ಹುಲಿಗಂಜಿ ಆತ ಶಿವನ ಪಾದ ಸೇರುವನೆಂದ್ಹೇಳಿ ಹೋದರೆಂಬ ಪ್ರತೀತಿಯಿದೆ. ಈ ದಂತಕಥೆಗಳು ನಂಬಿದ ಜನತೆ ಕಾಳಿಂಗನ ಜೀವನ ಹೇಗಾಯಿತೆಂದು ಬಾಯಿಂದ ಬಾಯಿಗೆ ಹರಡಿಕೊಂಡು ಬಂದಿರುವ ವಾಡಿಕೆಯಿದಾಗಿದೆ.

ಕಾಳಿಂಗೇಶ್ವರರ ಉತ್ಸವದಲ್ಲಿ ನಡೆಯುವ ಕಾರ್ಯಕ್ರಮಗಳಿಂತಿವೆ.

೧) ಮೊದಲನೆಯ ದಿನ ದೀಪ ಉರಿಯುವುದು.

೨) ದ್ವಿತೀಯ ದಿನದಂದು ಹೋಮ (ಅಗ್ನಿ) ಪುಷ್ಪಗಳ ಅಲಂಕಾರ.

೩) ತೃತೀಯ ದಿವಸ ರಥೋತ್ಸವ ಮತ್ತು ಪಲ್ಲಕ್ಕಿ ಉತ್ಸವ.

೪) ಚತುರ್ಥಿ ದಿವಸ ಪ್ರಸಿದ್ಧ ಪೈಲವಾನರಿಂದ ಕುಸ್ತಿ ನಡೆಸುವರು. ಇಲ್ಲಿಗೆ ಕಾಳಿಂಗೇಶ್ವರ ಉತ್ಸವಕ್ಕೆ ಮಂಗಲ ಹಾಡುವರು.

ಹಾಡು: ನಮೋ ಕಾಳಿಂಗ
ನಮೋ ದೇವದೇವಾ
ನಮೋ ಕಾಳಿಂಗ ||ಪಲ್ಲ||

ಕಾಳಿಂಗಪ್ಪ ಹಣಮಂತರಾಯ ಪೋಲಿಸ ಪಾಟೀಲ ಅಂಚೆ ಇಂಗಳಗಿ, (ಬಿ) ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

ನಮೋ ಭಕ್ತಪಾಲ
ನಮೋ ದಿವ್ಯತೇಜ
ನಮೋ ಕಾಳಿಂಗ ॥೧॥

ಸದಾ ಸುಪ್ರಕಾಶ
ಮಹಾಪಾಪನಾಶ
ಕಾಳಗಿ ವಾಸ
ದಯ ತೋರೋ ಈಶ ॥೨॥

ನಮೋ ಪಾರ್ವತಿ ವಲ್ಲಭ ನೀಲಕಂಠ
ನಮೋ ಕಾಳಿಂಗ ನಮೋ ದೇವಾ ದೇವಾ ॥೩॥

ಹೀಗೆ ಕಾಳಿಂಗನ ವಾಸಸ್ಥಾನ ಕಾಳಿಗಿ ಎಂದು ಹೇಳುವ ಮೂಲಕ ಕಾಳಿಂಗೇಶ್ವರರ ಸ್ಥಳ ಗುರುತಿಸಿದ್ದಾರೆ.

೪. "ಜೈ ಹನುಮಾನ ಉತ್ಸವ ಮಾತೋಳಿ"

ಶ್ರೀ ಹನುಮಾನ ಜಯಂತೋತ್ಸವವು ಅಫಜಲಪುರ ತಾಲೂಕಿನ ಮಾತೋಳಿ ಗ್ರಾಮದ ಪ್ರಮುಖರೆಲ್ಲರು ಸೇರಿಕೊಂಡು ಅತಿ ವಿಜೃಂಬಣೆಯಿಂದ ನೆರವೇರಿಸುತ್ತಾರೆ. ಈ ಉತ್ಸವವು ದವನದ ಹುಣ್ಣಿವೆಯ ಹನುಮ ಜಯಂತಿಯಂದು ನಡೆಯುತ್ತದೆ. ಹುಣ್ಣಿವೆಯ ಮುಂಚೆ ಎರಡು ದಿವಸ ಮೊದಲು ಹನುಮಾನ ತೊಟ್ಟಿಲು ಕಾರ್ಯಕ್ರಮ ನಡೆಯುತ್ತದೆ. ಅಂದು ಹನುಮಾನ ದೇವರಿಗೆ ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಡುತ್ತಾರೆ. ಮಾರನೆಯ ದಿನ ಪ್ರಮುಖ ಬೀದಿಯಲ್ಲಿ ನಂದಿಕೋಲು ಮೆರವಣಿಗೆ ಬ್ಯಾಂಡ್, ಹಲಗೆ ಡೊಳ್ಳು ಮತ್ತು ಕರಡಿ ಮಜಲು ಮುಂತಾದ ವಾದ್ಯಗಳಿಂದ ನಂದಿಕೋಲು ಕುಣಿಸುತ್ತ ಬರುತ್ತಾರೆ. ಯುವ ಉತ್ಸಾಹಿಗಳು ಉತ್ಸಾಹ ಭರಿತರಾಗಿ ನಂದಿಕೋಲಿನೊಂದಿಗೆ ಆಟ ಆಡುತ್ತಾರೆ. ನಂದಿಕೋಲು ಒಂದು ಕೈಯಲ್ಲಿ ಹಿಡಿದು ತಮ್ಮ ಅಂಗೈಯಲ್ಲಿ ತಾನಾಗಿಯೇ ನಿಲ್ಲುವಂತೆ ಮಾಡುತ್ತ ಕಿಕ್ಕಿರಿದು ವೀಕ್ಷಿಸುವ ಜನರಿಗೆ ಆಶ್ಚರ್ಯಗೊಳಿಸುತ್ತಾರೆ. ಊರಿನ ಮುಖಂಡರಾದ ಮಾಲಿಗೌಡರವತನದಾರಿಕೆಯವರ ಅಪ್ಪಣೆಯ ಮೇರೆಗೆ ಅವರ ಮನೆಯಿಂದ ಮೆರವಣಿಗೆ ಹೊರಟು ಹನುಮಂತದೇವರ ಗುಡಿಪ್ರವೇಶ ಪಡೆಯುತ್ತಾರೆ. ಮೆರವಣಿಗೆಗೆ ಮಂಗಳ ಹಾಡಿದಾಗ ನಂದಿಕೋಲುಗಳು ಹನುಮಂತ ದೇವರ ಗುಡಿ ಚಂದ್ರಸಾಲೆಯ ಕಟ್ಟೆಗೆ ಹೊಂದಿಸಿ ನಿಲ್ಲಿಸುವರು.

ನಂದಿಕೋಲು ಮೆರವಣಿಗೆ ಮುಗಿದ ಮಾರನೆಯ ದಿನ ಅಂದರೆ ದವನದ ಹುಣ್ಣಿಮೆಯಂದು ಊರಿನ ಪೋಲಿಸಗೌಡರ ಮನೆಯಿಂದ ರಥದ ಜ್ಯಾಜ (ಕಳಸ)ದ ಕಳಸ ತರುವ ಕಾರ್ಯಕ್ರಮ ಅದ್ದೂರಿ ಮೆರವಣಿಗೆಯೊಂದಿಗೆ ನಡೆಯುತ್ತದೆ. ಆ ಸಂದರ್ಭದಲ್ಲಿ ಪುರುವಂತರ ಬೆಡಗಿನ ವಚನಗಳ ಸುರಿಮಳೆಗೈಯುತ್ತ ಪುರವಂತಿಕೆಯ ಪ್ರದರ್ಶನ ನೀಡುತ್ತಾರೆ. ಊರಿನ ಪ್ರಮುಖ ಸ್ಥಳಗಳಲ್ಲಿ ಮೆರವಣಿಗೆ ನಿಲ್ಲಿಸಿ ನೃತ್ಯ ಗೈಯುತ್ತ ಶಸ್ತ್ರ ಹಾಕಿಕೊಳ್ಳುತ್ತ ಜನರಿಗೆ ಬೆರಗು ಉಂಟಾಗುವಂತೆ ಮಾಡುವರು. ಈ ಪದ್ಧತಿ ನೋಡುವವರ ಕಣ್ಣಿಗೆ ಭಯಂಕರವಾಗಿ ಕಾಣುವ ಸಮಯದಲ್ಲಿಯೇ ಹನುಮಾನ ದೇವರ ರಥಕ್ಕೆ ಕಳಸವಿಟ್ಟು ಜೈಹನುಮಾನ ಮಹಾರಾಜಕೀ ಜೈ ಎಂದು ಜೈಘೋಷ ಕೂಗಿ ರಥೋತ್ಸವ ಮಾಡುವ ರೂಢಿ ಬೆಳೆದು ಬಂದಿದೆ.

ಅಂದು ರಾತ್ರಿ ಕಲಾವಿದರಿಂದ ನಾಟಕ ಪ್ರದರ್ಶನ ನಡೆಯುತ್ತದೆ. ರಥೋತ್ಸವದ ಮಾರನೆಯ ದಿನ ಸಾಯಂಕಾಲ ೫-೦೦ ಘಂಟೆಗೆ ಪ್ರಸಿದ್ಧ ಜಂಗಿಪೈಲವಾನರಿಂದ ಕುಸ್ತಿ ಸ್ಪರ್ಧೆ ನಡೆಯುವುದು. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಅವರಿಗೆ ಕಟ್ಟಿದಷ್ಟು ಹಣಕೊಡುವರು. ಖಡೆಯ (ಅಂತಿಮ)ಕುಸ್ತಿಯಲ್ಲಿ ವಿಜೇತರಾದವರಿಗೆ ೧೦೧ ರೂಪಾಯಿಗಳು ಮತ್ತು ಒಂದು ಬೆಳ್ಳಿ ಖಡೆ (ಬಳೆ) ಹಾಕುವರು. ಕುಸ್ತಿಗೆ ಮಂಗಳ ಹಾಡಿದ ಮೇಲೆ ಪರಸ್ಥಳದಿಂದ ಬಂದಿರುವ ಯಾತ್ರಿಕರೆಲ್ಲರಿಗೂ ಪ್ರಸಾದ ವಿತರಿಸುವರು ಇದನೆಲ್ಲ ನಡೆದಾದ ಮೇಲೆ ಹೀಗೆ ಜಾತ್ರೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

ಜಾತ್ರೆ ಕಾರ್ಯಕ್ರಮಗಳು ಮುಗಿದರೂ ಹರಜಾತ್ರೆ ನಡೆಯುವದು. ಕುಸ್ತಿ ಮುಕ್ತಾಯದ ದಿನದಂದು ಹಿಡಿದು ಐದು ದಿನಗಳ ಮೇಲೆ ನಂದಿಕೋಲು ಇಳಿಸುತ್ತಾರೆ. ಅಂದಿನ ದಿನ ಊರಿನ ಹಾಗೂ ಮಲ್ಲಾಬಾದ ಗ್ರಾಮದ ಭಕ್ತಾದಿಗಳು ತಮ್ಮ ತಮ್ಮ ಮನೆಯಲ್ಲಿ ಸಿಹಿ ಅಡಿಗೆ ಮಾಡಿ ದೇವರಿಗೆ ನೈವೇದ್ಯಕೊಡುವರು. ಹುಣ್ಣಿವೆಯ ದಿನದಂದು ಭಕ್ತಾದಿಗಳು ಹೊತ್ತಿರುವ ಹರಕೆ ಪೂರೈಸುವಾಗ ದಂಡನಮಸ್ಕಾರಗಳು ಹಾಕುವರು. ಜೆಡಿ (ಮುಡಿ) ಕೊಡುವ ಸಂಪ್ರದಾಯಗಳು ನಡೆಯುವವು. ಆ ಸಂದರ್ಭದಲ್ಲಿ ನೆಂಟರಿಸ್ಟರಿಂದ ಕಾಣಿಕೆಗಳು ಹೊಸ ಹೊಸ ಬಟ್ಟೆಯ ಮುಯ್ಯಿ ಕೊಡುವರು. ಹೀಗೆ ಊರು ಚಿಕ್ಕದಾದರೂ ಚೊಕ್ಕತನದಿಂದ ಅಚ್ಚುಕಟ್ಟಾದ ಕಾರ್ಯಕ್ರಮಗಳು ನಡೆಸುವ ಸಂಪ್ರದಾಯ ಬೆಳೆದು ಬಂದಿದೆ.

೪೦) ಶ್ರೀ ಭೀಮಾಶಂಕರ ಶಿವಸಂಗಪ್ಪ ಬಬಲೇಶ್ವರ ಮು|| ಮಾತೋಳಿ ಅಂಚೆ ಇಂಗಳಗಿ, (ಬಿ) ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

೫. ಶ್ರೀ ಚಂದ್ರಗಿರಿ ಉತ್ಸವ ಆನೂರ

ವಸಂತಋತುವಿನ ಚೈತ್ರಮಾಸದಲ್ಲಿ ಬರುವ ಬಾದಮಿ ಅಮವಾಸೆದ ಐದು ದಿವಸಗಳ ನಂತರದಲ್ಲಿ ಈ ಉತ್ಸವ ಹಮ್ಮಿಕೊಳ್ಳುತ್ತಾರೆ. ಅಫಜಲಪುರ ತಾಲೂಕಾ ಕೇಂದ್ರದಿಂದ ಹತ್ತು ಕಿಲೋಮೀಟರ ಅಂತರದಲ್ಲಿರುವ ಆನೂರ ಗ್ರಾಮದ ಶ್ರೀ ಚಂದ್ರಗಿರಿ ಉತ್ಸವವು ಅದೇ ಊರಿನ ಗ್ರಾಮಸ್ಥರು ನೆರವೇರಿಸುತ್ತಾರೆ. ಚಂದ್ರಗಿರಿ ದೇವಿಯ ಉತ್ಸವ ಮುಂಚಿತ ವಾಗಿರುವ ಕಾರ್ಯಕ್ರಮವೆಂದರೆ. ಅಗ್ನಿಕುಂಡದ ಬಾಗಿಲು ತೆರೆಯುವದು. ಈ ಕುಂಡ ತೆಗೆಯುವ ಸಂದರ್ಭದಲ್ಲಿ ಸಾಯಂಕಾಲ ಐದು ಘಂಟೆಗೆ ಸರಿಯಾಗಿ ಕೊಡ್ಡ (ಕಟ್ಟಿಗೆ)ಗಳ ಪೂಜೆ ಮಾಡುವ ಪದ್ಧತಿಗೆ ಕೊಡ್ಡ ಪೂಜೆ ಎಂದು ಕರೆಯುವ ವಾಡಿಕೆಯಿದೆ. ಅಂದು ಸಾಯಂಕಾಲ ೫ ಘಂಟೆಗೆ ಪೂಜೆ ನಡೆಯಿಸಿ ಬೆಳಗಿನ ಜಾವದ ವರೆಗೆ ದೇವಿಗುಡಿಯ ಚಂದ್ರಶಾಲೆಯಲ್ಲಿ ಅಲಂಕಾರಗೊಂಡ ಚಂದ್ರಗಿರಿಯ ಪ್ರತಿಮೆ ಮುಂದೆ ಭಜನೆ ಮತ್ತು ಹಲವು ರೀತಿಯ ವಾದ್ಯ-ವಾಲಗಗಳಿಂದ ಕಲಾವಿದರು ತಮ್ಮ ಕಲೆಯ ಪ್ರದರ್ಶನ ನೀಡುವದರೊಂದಿಗೆ ರಾತ್ರಿ ಜಾಗರಣೆ ಮಾಡುವರು. ರಾತ್ರಿ ಮೂರು ಘಂಟೆಗೆ ಸರಿಯಾಗಿ ಮಾಲಿಗೌಡರ ಮನೆಯಿಂದ ಚಂದ್ರಗಿರಿ ದೇವಿಯ ಬ್ಯಾಜತರುವ ರೂಢಿಯು ಬಳಕೆಯಲ್ಲಿದೆ. ಈ ಬ್ಯಾಜತರುವಾಗ ಅತಿ ವಿಜೃಂಭಣೆಯಿಂದ ಮೆರವಣಿಗೆ ಮೂಲಕ ಮಂದಿರ ಪ್ರವೇಶ ಮಾಡುವರು. ನಂತರ ಪ್ರಸಿದ್ಧ ಲಾವಣಿಕಾರರಿಂದ ಪರದೇಶಿ-ನಾಗೇಶಿ ಹಾಡುಗಳು ಮತ್ತು ಭಜನಾ ಮಂಡಳಿಯವರಿಂದ ಬೆಳಗಿನವರೆಗೆ ಕಾರ್ಯಕ್ರಮಗಳು ನಡೆಯುತ್ತವೆ. ಶ್ರೀ ಚಂದ್ರಗಿರಿ ದೇವತೆಯ ಗೊಂಬೆ ಮೆರವಣಿಗೆ ದೇವಾಲಯದಿಂದ ಹೊರಟು ಗ್ರಾಮದ ಮುಖ್ಯ ಬೀದಿಯಲ್ಲಿ ಉತ್ಸವ ನಡೆಸುವರು. ಮೆರವಣಿಗೆಯ ಸಮಯದಲ್ಲಿ ಎಲ್ಲಾ ಭಕ್ತರು ತಮ್ಮ ಮನೆಗೆ ಆಗಮಿಸಿದ ದೇವಿಗೆ ಸೀರೆ ಉಡಿಸಿ ಕುಪ್ಪಸದೊಂದಿಗೆ ಉಡಿಯಲ್ಲಿ ಉಡಿಯಕ್ಕಿ ಹಾಕುವರು. ದೇವಿ ಮೂರ್ತಿಗೆ ಪೂಜೆ ಮಾಡಿ ಸುಖ-ಸಂಪತ್ತು ವೃದ್ಧಿಯಾಗುವಂತೆ ಆಶೀರ್ವದಿಸು ತಾಯಿ ಎಂದು ಹರಕೆ ಪೂರೈಸುವರು.

ಭಕ್ತರಿಂದ ತನ್ನ ಪೂಜೆ ಪೂರೈಸುವುದರೊಂದಿಗೆ ಕಾಣಿಕೆ ಪಡೆದ ಚಂದ್ರಗಿರಿ ದೇವಿ ಮೂರ್ತಿ ಹೊತ್ತವರು ಧಾರಾಳವಾಗಿ ಮಾಲಿಗೌಡರ ಮನೆಗೆ ಸಾಗಿ ಅಲ್ಲಿ ತನ್ನ ಬ್ಯಾಜಗಳೆಲ್ಲ ಪಡೆದುಕೊಂಡು, ವಸ್ತ್ರಾಲಂಕಾರ ಪಡೆದು. ಸ್ವಲ್ಪ ಸಮಯ ತಂಗಿದ್ದು ಮಧ್ಯಾಹ್ನ ಮೂರು ಘಂಟೆಗೆ ಪುನಃ ಮೆರವಣಿಗೆಯೊಂದಿಗೆ ದೇವಾಲಯಕ್ಕೆ ಆಗಮಿಸಿ ದೇವಿ ಗುಡಿಗೆ ಐದು ಪ್ರದಕ್ಷಿಣೆ ಹಾಕಿ ಅಗ್ನಿ ಪ್ರವೇಶಮಾಡುತ್ತಾಳೆ. ಅಗ್ನಿ ಪ್ರವೇಶದ ನಂತರ ದೇವಾಲಯ ಪ್ರವೇಶಿಸಿ ಅಲ್ಲಿಯೇ ಚಂದ್ರಸಾಲೆಯ ಬಲಬದಿಯಲ್ಲಿ ಭಕ್ತರ ದರ್ಶನಕ್ಕಾಗಿ ತಂಗುತ್ತಾಳೆ.

ದೇವಿಯು ದೇವಾಲಯ ಪ್ರವೇಶಿಸಿದ ಮೇಲೆ ಊರಿನ ಭಕ್ತರೆಲ್ಲರು ದಂಡನಮಸ್ಕಾರಗಳು ಹಾಕಿ ನೈವೇದ್ಯ ಒಪ್ಪಿಸುತ್ತಾರೆ. ನಂತರ ಪರಸ್ಥಳದಿಂದ ಆಗಮಿಸಿದ ಭಕ್ತರು ದೇವಿ ಪ್ರಸಾದ ಸ್ವೀಕರಿಸಿ ತಮ್ಮ ತಮ್ಮ ಊರುಗಳಿಗೆ ಹೋಗಲು ಚಂದ್ರಗಿರಿಯ ಅರ್ಚಕರ ಅನುಮತಿ ಪಡೆಯುತ್ತಿದ್ದರು. ಹೀಗೆ ಪ್ರತಿ ವರುಷಕ್ಕೊಮ್ಮೆ ಶ್ರೀ ಚಂದ್ರಗಿರಿ ದೇವಿ ಉತ್ಸವ ಅತಿ ಸಡಗರ ಸಂಭ್ರಮದಿಂದ ಆಚರಿಸುತ್ತಲೆ ಬಂದಿದ್ದಾರೆ.

---

೪೧) ಶ್ರೀ ಅಮೃತರಾವ ಸಿದ್ಧರಾಮಪ್ಪ ಪತ್ತಾರ

೪೨) ಶ್ರೀ ಮೈಲಪ್ಪ ಶರಣಪ್ಪ ಬಳೂಂಡಗಿ, ಅಂಚಿ ಅನೂರ, ಅಫಜಲಪುರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ

೬. ಶ್ರೀ ರೇವಣಸಿದ್ದೇಶ್ವರ ಪಲ್ಲಕ್ಕಿ ಉತ್ಸವ ಮಲ್ಲಾಬಾದ

ಬುವಿಯಲ್ಲಿ ಸಸಿಗಳ ಹಚ್ಚ ಹಸುರನ್ನು ಕಂಗೊಳಿಸುವ ತುಂಬು ಯೌವನ ತುಂಬಿರಲು, ಶ್ರಾವಣಮಾಸದ ಕೊನೆಯ ಸೋಮವಾರದಂದು ಅಫಜಲಪುರದ ಪೂರ್ವ ದಿಕ್ಕಿನೆಡೆಗೆ ಎಂಟು ಕಿ.ಮೀ. ಅಂತರದಲ್ಲಿ ರಾಜ್ಯದ ಹೆದ್ದಾರಿ ಮೇಲಿರುವ ಮಲ್ಲಾಬಾದ ಗ್ರಾಮದಲ್ಲಿ ಶ್ರೀ ರೇವಣಸಿದ್ದೇಶ್ವರ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಶ್ರಾವಣಮಾಸ ಪ್ರಾರಂಭವಾಗಿ ಮುಗಿಯುವವವರೆಗೆ ರಾತ್ರಿ ಒಂಬತ್ತು ಘಂಟೆಯಿಂದ ಒಂದು ಘಂಟೆವರೆಗೆ ಭಜನೆ ಮಾಡುತ್ತಾರೆ. ಶ್ರಾವಣಮಾಸದ ಕೊನೆಯ ಸೋಮವಾರದ ಹಿಂದಿನ ದಿನ ಭಾನುವಾರ ಸಾಯಂಕಾಲ ಐದು ಘಂಟೆಗೆ ಗಂಗಾಸ್ನಾನ ಮಾಡಿ ಶ್ರೀ ವಿಜಯಲಕ್ಷ್ಮೀದರ್ಶನ ಮಾಡಿದ ರೇವಣ ಸಿದ್ಧೇಶ್ವರ ಪಲ್ಲಕೋತ್ಸವ ಮಠ ಪ್ರವೇಶಿಸಿ ಅಂದು ರಾತ್ರಿ ೯-೨೦ಕ್ಕೆ ಪ್ರಾರಂಭಿಸಿದ ಭಜನೆ, ಕೀರ್ತನೆಗಳು ಬೆಳಗಿನ ಆರು ಗಂಟೆವರೆಗೂ ನಡೆಯುತ್ತದೆ. ಈ ಉತ್ಸವಕ್ಕೆ ಸುತ್ತಮುತ್ತಲಿನ ಹಳ್ಳಿಯ ಜನರು ತಮ್ಮ ವಾದ್ಯ ವಾಲಗಗಳ ಸಹಿತ ಮಲ್ಲಾಬಾದಕ್ಕೆ ಆಗಮಿಸಿ ತಮ್ಮ ಕಲೆಯ ಪ್ರದರ್ಶನ ನೀಡುವರು. ಬೆಳಿಗ್ಗೆ ೮-೦೦ ಗಂಟೆಗೆ ಮಠದಿಂದ ಪ್ರಾರಂಭವಾದ ಪಲ್ಲಕೋತ್ಸವ. ಆರತಿಹಿಡಿದ ಸುಮಂಗಲಿಯರೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗುತ್ತದೆ. ಈ ಮೆರವಣಿಗೆಯಲ್ಲಿ ವೀರಭದ್ರೇಶ್ವರನ ಭಕ್ತರಾದ ಪುರುವಂತರೊಂದಿಗೆ ಊರಿನ ಹಾಗೂ ಪರ ಊರುಗಳಿಂದ ಬಂದಿರುವ ಭಜನೆ ಮೇಳಗಳು ಡೊಳ್ಳುವಾಲಗ ಬಜಂತ್ರಿ ಮೇಳ ತಾಳಿನ ಗತ್ತು ಗಮ್ಮತ್ತಿನೊಂದಿಗೆ, ಊರಿನ ಪ್ರಮುಖರ ಮನೆಮನೆಗೂ ಹೋಗಿ ಮುಖ್ಯ ಬೀದಿಯಲ್ಲಿ ವರ್ಣರಂಜಿತನಾದ ಮೆರವಣಿಗೆ ನಡೆಯುತ್ತದೆ.

ಶ್ರೀ ರೇವಣಸಿದ್ಧೇಶ್ವರ ಪಲ್ಲಕೋತ್ಸವವು ಪ್ರಮುಖ ಸ್ಥಳಗಳಾದ ಶ್ರೀ ಶರಣಬಸವೇಶ್ವರ ದೇವಾಲಯ ಶ್ರೀ ಭಾಗ್ಯವಂತಿ ದೇವಾಲಯ ಶ್ರೀವಿಜಯಲಕ್ಷ್ಮೀ ದೇವಾಲಯಗಳ ಸಮ್ಮುಖದಲ್ಲಿ ಪುರುವಂತರ 'ಮಜಲಸ್' ಬೆಡಗಿನ ವಚನಗಳು ಬಿತ್ತರಿಸಿ ಶಾಸ್ತ್ರಕ್ರಿಯೆ ನಡೆಸುವರು. ನಂತರ ಮತ್ತೆ ಮಠಕ್ಕೆ ಹಿಂದುರುಗಿ ಪಲ್ಲಕೋತ್ಸವ ಮುಕ್ತಾಯವಾಗಿ ಮಠದಲ್ಲಿರುವ ಸ್ಥಾನ ಅಲಂಕರಿಸುತ್ತದೆ. ಪರಸ್ಥಳ ಹಾಗೂ ಸ್ಥಳೀಯ ಭಕ್ತರಿಂದ ನೀರು ತುಂಬಿದ ಕೊಡಗಳಿಂದ ನೀರು ಸುರುವಿ ಆರತಿ ಬೆಳಗುವರು. ಅದೇ ಸಮಯಕ್ಕೆ ಭಕ್ತರು ತಮ್ಮ ಸರಕ ಸಲ್ಲಿಸುವರು.

ಶ್ರೀ ರೇವಣಸಿದ್ಧೇಶ್ವರರು ಪವಾಡ ಮಾಡಿದ ಕಥೆಯೊಂದು ಹೀಗೆ ಹೇಳುವ ರೂಢಿಯಿದೆ. ಬಳಲಿ ಬಂದ ಬಂಜೆಯರಿಗೆ ಮಕ್ಕಳ ಫಲನೀಡಿ ಬಂಜೆತನ ಪರಿಹರಿಸುವ ಮಹಾತ್ಮರಾಗಿದ್ದರೆಂದು ಪ್ರತೀತಿಯಿದೆ. ಪರಸ್ಥಳದಿಂದ ಆಗಮಿಸಿದ ಭಕ್ತರು ಭಜನೆ ಮೇಳದವರು ಪ್ರಸಾದ ಸ್ವೀಕರಿಸಿ ಶ್ರೀ ಸಾತಲಿಂಗಯ್ಯ ಗುರುಪಾದಯ್ಯ ಹಿರೇಮಠ ಅವರ ಅಪ್ಪಣೆ ಪಡೆದು ಹೋಗುವ ಪರಿಪಾಠವಿದೆ. ಆದರೀಗ ಷಟ್‌ಸ್ಥಲ ಬ್ರಹ್ಮ ಶ್ರೀ ಸಿದ್ಧಾಮೇಶ್ವರ ಶಿವಾಚಾರ್ಯರು ಮಲ್ಲಾಬಾದ ಅವರ ಅಪ್ಪಣೆಯೊಂದಿಗೆ ಆಶೀರ್ವಾದ ಪಡೆದು ತಮ್ಮ ತಮ್ಮ ಊರುಗಳಿಗೆ ನಿರ್ಗಮಿಸುತ್ತಾರೆ.

ಹಿನ್ನೆಲೆ: ಶ್ರೀ ರೇವಣಸಿದ್ಧೇಶ್ವರರು ಆಂಧ್ರ ಪ್ರದೇಶದ 'ಕೊಲ್ಲಿಪಂಕಿ' ಗ್ರಾಮದ ಸೋಮೇಶ್ವರ

ಲಿಂಗದಿಂದ ಅವತರಿಸಿದರೆಂದು ಪ್ರತೀತಿಯಿದೆ. ಅವರು ದೇಶ ಪರ್ಯಟನ ಮಾಡುವ ಸಂದರ್ಭದಲ್ಲಿ ಅವರ ಶಿಷ್ಯರಾದ ಮುದ್ದುಗೌಡ-ಸುಗ್ಗಲಾದೇವಿ ದಂಪತಿಗಳಿಗೆ ಬಹುದಿನಗಳಿಂದಲೂ ಮಕ್ಕಳಿರಲಿಲ್ಲ. ಈ ಗುರುಗಳ ಅನುಗ್ರಹದಿಂದ ಅವರಿಗೆ ಹತ್ತು ತಿಂಗಳಲ್ಲಿಯೇ ಶ್ರೀ ಸಿದ್ಧರಾಮೇಶ್ವರರೆಂಬ ಮಗನ ಜನ್ಮವಾಯಿತು. ಆ ಮಗುವು ಶಿವಾನುಗ್ರಹವಾಗಿ ಮುಂದೆ ದೊಡ್ಡ ಪುರುಷನಾಗಿ ನಾಡಿನ ಕೀರ್ತಿ ಬೆಳಗುವನೆಂದು ಜೋಯಿಸರ ಹೇಳಿಕೆಯಾಯಿತು. ಹಾಗೆ ಶ್ರೀ ಸಿದ್ಧೇಶ್ವರರು ಮಹಾಪುರುಷರಾಗಿ ಅನೇಕ ಕ್ರಮಗಳು ನಿರ್ವಹಿಸಿ ಸೊಲ್ಲಾಪುರದಲ್ಲಿ ಲಿಂಗೈಕ್ಯರಾದರು. ಇದಕ್ಕೆ ರೇವಣ ಸಿದ್ಧೇಶ್ವರರ ಕೃಪೆಯೇ ಕಾರಣವೆಂದು ಊಹಿಸಿದ್ದಾರೆ. ಹೀಗೆ ಅನೇಕ ಪವಾಡಗಳು ಮಾಡಿ ಪವಾಡ ಪುರುಷರಾದರು. ಹೀಗೆ ಸಂಚಾರ ಮಾಡುತ್ತ ಕರ್ನಾಟಕ ರಾಜ್ಯದ ಕಲಬುರ್ಗಿಯಲ್ಲಿ ನೆಲೆಸಿ ಅಲ್ಲಿಯೇ ಕೆಲವು ವರ್ಷಗಳಿದ್ದು ಲಿಂಗೈಕ್ಯರಾದರೆಂದು ವಾಡಿಕೆಯಿದೆ.

ಕೆಲವು ತಿಂಗಳ ನಂತರ ಅದೇ ಊರಿನ ಪ್ರಮುಖರ ಸ್ವಪ್ನದೊಳಗೆ ಮಂದಿರ ಕಟ್ಟಿ ಜಾತ್ರೆ ನಡೆಸುವಂತೆ ಅರುಹಿದರು. ಗುರುವಿನಾಜ್ಞೆಯ ಪ್ರಕಾರ ಗುಡಿಕಟ್ಟಿಸಿ ಜಾತ್ರೆಯು ಪ್ರಾರಂಭಿಸಿದರು. ಕೆಲವು ವರ್ಷಗಳ ಕಾಲ ಚೆನ್ನಾಗಿ ಆಚರಿಸಿದರು. ಅಲ್ಲಿಂದ ಜನರು ಈ ಜಾತ್ರೆ ಆಚರಿಸುವುದನ್ನು ಕಡಿಮೆ ಮಾಡಿದ್ದರಿಂದ ಅಲ್ಲಿ ಜಾತ್ರೆಯು ವರ್ಷಕ್ಕೊಮ್ಮೆ ನಡೆಯಿತೆಂಬುವದು ನಂಬಿಕೆಯಿದೆ. ಆ ಜಾತ್ರೆಗೆ ಮಲ್ಲಾಬಾದ ಗ್ರಾಮದ ಭಕ್ತರಾದ ಶ್ರೀ ಗುರುಪಾದಯ್ಯನವರು ಪ್ರತಿವರ್ಷ ಆ ದೇವರ ಜಾತ್ರೆಗೆ ಹೋಗಿ ಕೃಪಾಶೀರ್ವಾದ ಪಡೆದು ಬರುತ್ತಿದ್ದರು. ಒಂದು ವರುಷ ಈ ಸ್ವಾಮಿಜೀಯವರು ಬುತ್ತಿಯಲ್ಲಿ ಶ್ರೀ ರೇವಣಸಿದ್ಧೇಶ್ವರರು ಬಂದರೆಂದು ಊಹೆ. ರಾತ್ರಿ ಸ್ವಾಮೀಜಿಯವರು ನಿದ್ರಿಸುತ್ತಿರುವಾಗ ಸ್ವಪ್ನದಲ್ಲಿ ಹೀಗೆ ಹೇಳಿದರಂತೆ ನಾನು ನಿನ್ನೊಂದಿಗೆ ನಿಮ್ಮೂರಿಗೆ ಬಂದಿರುವೆ. ಈ ಮಠದಲ್ಲಿರುವ ಒಂದು ಕೋಣೆಯು ನನಗಾಗಿ ಮೀಸಲಿರಿಸಿ. ಅಪಕ್ಕಿ ದೇವರ ಕೋಣೆಯೆಂದು ನಾಮಕರಣಮಾಡಿ ಮೂರ್ತಿ ಪ್ರತಿಷ್ಠಾಪನೆ ನೆರವೇರಿಸಿ ಜಾತ್ರೆ ಮಾಡಬೇಕೆಂದು ವಿವರಿಸಿದರೆಂಬುವ ನಂಬಿಕೆಯಿಂದ ಶ್ರೀ ಗುರುಪಾದಯ್ಯನವರು ಅಂದಿನಿಂದ ರೇವಣಸಿದ್ಧೇಶ್ವರರ ಜಾತ್ರೋತ್ಸವ ಪ್ರಾರಂಭಿಸಿರೆಂದು ವಾಡಿಕೆಯಿದೆ.

---

೪೩) ಶ್ರೀ ಸಾತಲಿಂಗಯ್ಯ ಗುರು ಪಾದಯ್ಯ ಹಿರೇಮಠ ಅಂಚೆ ಮಲ್ಲಾಬಾದ ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

೭. ಶ್ರೀಲಿಂಗರಾಯ ಪಲ್ಲಕ್ಕಿ ಉತ್ಸವ ಮಲ್ಲಾಬಾದ

ಚೈತ್ರಶುದ್ಧ ಪಾಡ್ಯಮಿಯಂದು ಯುಗಾದಿ ಹಬ್ಬ ಇರುವದು. ಯುಗಾದಿ ಹಬ್ಬದ ಮುಂಚೆಯೆ ದಿನವೇ ಅಮವಾಸೆ ಆಗುವದು. ಈ ಅಮವಾಸೆಯಂದು ಲಿಂಗರಾಯ ದೇವರ ಪಲ್ಲಕ್ಕಿ ಉತ್ಸವವು ನಡೆಯುವದು. ಯುಗಾದಿ ಅಮವಾಸೆ ದಿನದಂದು ಬೆಳಿಗ್ಗೆ ಗಂಗಸ್ನಾನಕ್ಕಾಗಿ ಭೀಮಾನದಿಗೆ ಹೋಗುವರು. ಗಂಗಸ್ನಾನದ ನಂತರ ದೇಸಾಯಿ ಕಲ್ಲೂರು ಮತ್ತು ಘೂಳನೂರ ಮಧ್ಯದಲ್ಲಿ ಇರುವ ಭೀಮಾನದಿಯ ಮಡುವಿನಲ್ಲಿ ಹೇಳಿಕೆ ಮಾಡುವರು. ಹೇಳಿಕೆಯು ಮಳೆ-ಬೆಳೆ ಕುರಿತು ಹೇಳಿದ ನಂತರ ಆನೂರ ಮಾರ್ಗವಾಗಿ ಮಲ್ಲಾಬಾದ ಖಾಜೆ ಸಾಹೇಬರ ದರ್ಗಾದ ದರ್ಶನ ಮತ್ತು ಶ್ರೀಲಕ್ಷ್ಮೀ ದರ್ಶನ ಪಡೆದು ಊರೆಲ್ಲ ಮೆರವಣಿಗೆ ಮಾಡುವದೇ ಈ ಉತ್ಸವದ ವೈಶಿಷ್ಟವಾಗಿದೆ. ಯುಗಾದಿ ಅಮವಾಸೆ ದಿವಸ ಬೆಳಿಗ್ಗೆ ಒಂಬತ್ತು ಗಂಟೆಗೆ ಶ್ರೀ ಲಿಂಗರಾಯ ದೇವರ ಗುಡಿಯಿಂದ ಪಲ್ಲಕ್ಕಿ ಉತ್ಸವವು ಹೊರಟು ಡೊಳ್ಳಿನ ವಾಲಗ, ತಾಳಿನ ಗತ್ತು, ಕರುಣೆಯ ಕೂಗಿನಿಂದ ಝುಂಕರಿಸುತ್ತ ಬ್ಯಾಂಡ್ ಭಾಜಿ-ಬಜಂತ್ರಿ ಹಲಗೆ ಇವೆಲ್ಲ ವಾದ್ಯಗಳ ನಾದದೊಂದಿಗೆ ಖಾಜೇಸಾಹೇಬರ ದರ್ಗಾ ಸೀಮೆ ಲಕ್ಷ್ಮೀಯ ದರ್ಶನ ಪಡೆದು ಆನೂರ ಮಾರ್ಗವಾಗಿ ದೇಸಾಯಿ ಕಲ್ಲೂರ ಹತ್ತಿರದ ಆಳವಾದ ಭೀಮಾನದಿಯ ಮಡುವಿನಲ್ಲಿ ಮಿಂದು ದೇವರಿಗೂ ಸ್ನಾನ ಮಾಡಿಸಿ ಜನರೆಲ್ಲರು ಸ್ನಾನ ಮಾಡುವರು. ನಂತರ ದೇವರ ಅರ್ಚನೆಯಾದ ಮೇಲೆ ಭಕ್ತಾದಿಗಳ ಊಟ ಅಲ್ಲಿಯೇ ನಡೆಯುತ್ತದೆ. ಸರ್ವ ಜನಾಂಗದ ಊಟೋಪಚಾರ ಮುಗಿದಾದ ಮೇಲೆ ಮಳೆ-ಬೆಳೆ ಕುರಿತು ಭವಿಷ್ಯ ನುಡಿಯುವದೇ ಪ್ರತಿವರ್ಷದ ಸಂಪ್ರದಾಯವಾಗಿದೆ.

ಹೇಳಿಕೆ ಕೇಳುವುದಕ್ಕಾಗಿ ಆನೂರ ಬಿಲ್ವಾಡ (ಕೆ) ಬಿಲ್ವಾಡ (ಬಿ) ಘೂಳನೂರ ದೇಸಾಯಿ ಕಲ್ಲೂರ, ಮಾತೋಳಿ, ಮಲ್ಲಾಬಾದ, ಬೆಟಗೇರಿ ಜೇವರ್ಗಿ ತಾಲೂಕಿನ ಮೊನಟಗಿ, ಹುಲ್ಲೂರ, ಅಂಕಲಗಿ, ಸಿದ್ನಾಳ ಮತ್ತು ನಾರಾಯಣಪುರ ಮುಂತಾದ ಗ್ರಾಮಗಳಿಂದಲೂ ಭಕ್ತರು ದೇವರಿಗೆ ನೈವೇದ್ಯ ತೆಗೆದುಕೊಂಡು ಬರುವರು. ತಾವು ತಂದಿರುವ ನೈವೇದ್ಯ ದೇವರಿಗೆ ಅರ್ಪಿಸಿ ಭಕ್ತರೆಲ್ಲ ಪ್ರಸಾದ ಸ್ವೀಕರಿಸುವರು. ತದನಂತರ ಪಲ್ಲಕ್ಕಿಯ ಸಮ್ಮುಖದಲ್ಲಿ ಶ್ರೀಲಿಂಗರಾಯ ಮಾಳಿಂಗರಾಯ, ಬೀರಣ್ಣದೇವರ ಕುರಿತು ಡೊಳ್ಳಿನ ಹಾಡುಗಳ ಸವಾಲು-ಜವಾಬ ನಡೆಯುತ್ತದೆ. ಅದೇ ಸಮಯಕ್ಕೆ ಡೊಳ್ಳಿನ ವಾಲಗದೊಂದಿಗೆ ದೇವರ ಹೆಸರಿಗೆ ಪಟ್ಟಾಭಿಷೇಕ ಹೊಂದಿದ ಪಟ್ಟದ ಪೂಜಾರಿಯವರಿಂದ ಮಳೆ-ಬೆಳೆ ಭವಿಷ್ಯದ ಹೇಳಿಕೆ ಪೂರೈಸಿದ ನಂತರ, ಪಲ್ಲಕ್ಕೋತ್ಸವ ಮಲ್ಲಾಬಾದಕ್ಕೆ ಹಿಂದುರುಗಿ ಬರುವುದು. ಈ ಉತ್ಸವ ಹಿಂದಿರುಗುವ ಸಮಯದಲ್ಲಿ ಭಕ್ತರೆಲ್ಲರು ಭೀಮಾನದಿಯ ದಡದ ವಿಶಾಲ ಪ್ರದೇಶದಲ್ಲಿ ಮಲಗಿದಾಗ ಪಲ್ಲಕ್ಕಿ ಹೊತ್ತವರು ಮೈಯಲ್ಲಿ (ಸವಾರಿ) ರೌದ್ರಾವೇಶದಿಂದ ಭಕ್ತರನ್ನು ದಾಟಿ ಮುಂದೆ ಬಂದು ನಿಂತಾಗ ಭಕ್ತರೆಲ್ಲರೂ ಪಲ್ಲಕ್ಕಿ ಹೊತ್ತವರ ಕಾಲುಗಳಿಗೆ ನಮಸ್ಕರಿಸುವರು. ಆನೂರ ಮಾರ್ಗವಾಗಿ ಮಲ್ಲಾಬಾದಕ್ಕೆ ಬರುವಾಗ ಆ ಗ್ರಾಮದ ಭಕ್ತರಿಗೆ ದರ್ಶನ ನೀಡಿ ಅಲ್ಲಿಯೂ ಲಕ್ಷ್ಮೀದೇವರ ಗುಡಿ ಮುಂದೆ ಹೇಳಿಕೆ ಮಾಡಿ ಮಲ್ಲಾಬಾದಕ್ಕೆ ನಿರ್ಗಮಿಸುವರು.

ಮಲ್ಲಾಬಾದದ ಶ್ರೀ ಖಾಜಾಸಾಹೇಬರ ದರ್ಗಾದಲ್ಲಿ ಸ್ವಲ್ಪ ಸಮಯ ತಂಗಿ, ನಂತರ ಸುಸಜ್ಜಿತವಾದ ಪಲ್ಲಕ್ಕಿ ಉತ್ಸವ ಗ್ಯಾಸು ಹೊತ್ತವರೊಂದಿಗೆ ದೀವಟಿಗೆ ಹಿಡಿದ ಜನಸಮೂಹವು ಬೆಳಕಿನೊಂದಿಗೆ, ವಿವಿಧ ವಾದ್ಯವಾಲಗಗಳ ಮೂಲಕ ಗ್ರಾಮ ಪ್ರವೇಶಿಸುವರು. ಮಲ್ಲಾಬಾದ ಗ್ರಾಮದ ಭಕ್ತರೆಲ್ಲರೂ, ದೇವರ ಪಲ್ಲಕ್ಕಿ ಹೊತ್ತವರ ಕಾಲುಗಳಿಗೆ ಮೀಸಲು ನೀರು ಹಾಕಿ, ಕಾಯಿ, ಕರ್ಪುರ, ನಮಸ್ಕರಿಸುವರು. ನಂತರ ಊರಿದಿತ್ತು ಪ್ರಮುಖ ಬೀದಿಗಳಲ್ಲಿ ಹಾಯ್ದು ಪ್ರತಿ ವರ್ಷವು ಇಷ್ಟವಿದ್ದ ಭಕ್ತರು ದೇವರನ್ನು ತಮ್ಮ ಮನೆಗೆ ಬರಮಾಡಿಕೊಳ್ಳುವರು. ಆ ಮನೆಯಲ್ಲಿ ಯುಗಾದಿ ಹಬ್ಬದ ದಿನ ಊರ ಭಕ್ತರೆಲ್ಲರೂ ಆ ಮನೆಯ ಯಜಮಾನರ ಅಪ್ಪಣೆಯಂತೆ ನಡೆದು ದೇವರ ಪ್ರಸಾದ ಸ್ವೀಕರಿಸುವರು. ಹಬ್ಬ ಮುಕ್ತಾಯವಾದ ಮಾರನೆಯ ದಿನ ದೇವರ ಪಲ್ಲಕ್ಕಿಯು ಶ್ರೀ ಲಿಂಗರಾಯ ದೇವರ ಗುಡಿ ಪ್ರವೇಶಿಸಿ ಅಲ್ಲಿಯೇ ತಂಗುವರು. ಇಲ್ಲಿಗೆ ಶ್ರೀ ಲಿಂಗರಾಯ ದೇವರ ಪಲ್ಲಕ್ಕಿ ಉತ್ಸವ ಮುಕ್ತಾಯವಾಗುವದು.

---

೪೪) ಶ್ರೀ ತುಕಾರಾಮ ಬಲವಂತಪ್ಪ ಪೂಜಾರಿ, ಅಂಚೆ ಮಲ್ಲಾಬಾದ ಅಫಜಲಪುರ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ

ಉಪಸಂಹಾರ:-

ಮಾನವನು ವರ್ಷವಿಡೀ ದುಡಿದು ದಣಿದು ವಿಶ್ರಾಂತಿ ಪಡೆಯಲು ಉತ್ಸವಗಳು ಆಚರಣೆಯಲ್ಲಿ ತಂದಿದ್ದಾರೆ. ಊರಲ್ಲಿರುವ ದೇವರ ಜಾತ್ರೆ ಉತ್ಸವಗಳು ನಡೆಸುವರು. ತಮಗಿಷ್ಟವಾದಾಗ ಸಿಹಿ-ತಿಂಡಿ-ತಿನುಸುಗಳು ಮಾಡಿ ತಿನ್ನುವುದೇ ಈ ಉತ್ಸವಗಳಾಗಿವೆ. ಒಟ್ಟಿನಲ್ಲಿ ಹೇಳುವುದಾದರೆ ಮಾನವನ ಜೀವನದಲ್ಲಿ ಅಡಗಿರುವ ಕಷ್ಟಗಳು ಮರೆಯಲು ಅಥವಾ ರೈತನ ದಣಿವು ದೂರವಿರಿಸಿ ಮನೋರಂಜನೆ ಜೊತೆಗೆ ಬಂಧು-ಬಳಗದವರನ್ನು ಒಂದೆಡೆ ಸೇರಿಸಿ ಸಂತೋಷದ ಕ್ಷಣಗಳು ಹಂಚಿಕೊಳ್ಳಲು, ಈ ಉತ್ಸವಗಳ ಪಾತ್ರ ಬಹು ಮಹತ್ವದಾಗಿದೆ. ಹಬ್ಬಗಳು ಮತ್ತು ಉತ್ಸವಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆದ್ದರಿಂದ ಉತ್ಸವಗಳು ಬಿಟ್ಟು ನಾವು ಇರಲಾರೆವು. ನಮ್ಮನ್ನು ಬಿಟ್ಟು ಹಬ್ಬಗಳು ಮತ್ತು ಉತ್ಸವಗಳು ಆಗಲಾರವು. ಇವುಗಳೆಲ್ಲವೂ ಮಾನವನ ಸುತ್ತಲು ಹೆಣೆದುಕೊಂಡಿರುವ ಉತ್ಸವಗಳು ಬೇರೆ ಬೇಕಾಗಿವೆಯೆ. ಉತ್ಸವಗಳು ಕೇವಲ ಉತ್ಸವವಾಗಿರದೆ ಮಾನವನ ಭವಿಷ್ಯದ ಜೀವನಕ್ಕೆ ಮಾರ್ಗದರ್ಶನ ನೀಡಿ ಮನೋರಂಜನೆಯ ಜೊತೆಗೆ ನೈತಿಕ ಮಾರ್ಗದರ್ಶನ ನೀಡುವ ಸಂಕೇತಗಳಾಗಿವೆ.

ಅನುಬಂಧ:-

ಅ) ಗ್ರಂಥ ಸೂಚಿ:-

೧) ಭಾರತದ ಹಬ್ಬಹರಿದಿನಗಳು — ಪ್ರೊ. ಡಿ. ಟಿ. ರಂಗಸ್ವಾಮಿ

೨) ಜಾನಪದ ದೀಪ್ತಿ ಭಾಗ-೨ — ಡಾ. ಎಂ. ಎಸ್. ಲಠ್ಠೆ

೩) ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ ಸಂಪುಟ-೭ — ಮಾನಸ ಗಂಗೋತ್ರಿ ಮೈಸೂರು ವಿಶ್ವವಿದ್ಯಾಲಯ

೪) ಅಡಿಗರ ಆಯ್ದ ಕವನಗಳು — ಶ್ರೀಗೋಪಾಕೃಷ್ಣ ಅಡಿಗರ

೫) ನೆಲಮುಗಿಲು — ಶ್ರೀಚನ್ನವೀರ ಕಣವಿ

೬) ಬೆಂಕಿ — ಡಾ. ಸೋಮಶೇಖರ ಇಮ್ರಾಪುರ

೭) ಶಿಲಾಲತೆ — ಪ್ರೊ. ಕೆ. ಎಸ್. ನರಸಿಂಹಸ್ವಾಮಿ

೮) ಜಾನಪದ ಸಾಹಿತ್ಯ ಸಮೀಕ್ಷೆ — ಪ್ರೊ. ಜೀ.ಶಂ. ಪರಮಶಿವಯ್ಯ

೯) ಜಾನಪದ ಸಮಾಲೋಕನ — ಡಾ. ಮ. ಗು. ಬಿರಾದಾರ

೧೦) ಗ್ರಾಮೀಣ ಸಮಾಜ — ಪ್ರೊ. ಕೆ. ಭೈರಪ್ಪ

ಶುಭವಾಗಲಿ

ಋತುಮಾನಕ್ಕನುಗುಣವಾಗಿ ಪ್ರಕೃತಿಯಲ್ಲಾಗುವ ಎಲ್ಲ ಚೇತೋಹಾರಿ ಬದಲಾವಣೆ ಬೆಳವಣಿಗೆಗೆ ಜನತೆ ಸ್ಪಂದಿಸುವ ಧರ್ಮವಾಗಿ ಹಲವು ಹತ್ತು ಹಬ್ಬ ಜಾತ್ರೆಗಳು ಉತ್ಸವ ಆಚರಣೆಗಳು ಸಾಂಪ್ರದಾಯಿಕವಾಗಿ ರೂಢಿಗೆ ಬಂದುವು. ಆದರೆ ನೋವಿನ ಸಂಗತಿ ಎಂದರೆ ಹಬ್ಬ ಉತ್ಸವಗಳ ಮೂಲ ಆಶಯಗಳೇನು ಎಂದು ಅರಿತಿರುವ ಜನತೆಯ ಸಂಖ್ಯೆ ವಿರಳವಾಗತ್ತಿದೆ ಅದು ತಪ್ಪುವಂತಾಗಲಿ ಎಂಬ ಕಾಳಜಿಯಿಂದ ಈ ಕೃತಿಯನ್ನು ಸಿದ್ಧಪಡಿಸಿಯತ್ತಾರೆ.

ಈ ಪುಟ್ಟ ಪುಸ್ತಕದಲ್ಲಿ ಯುಗಾದಿ, ನಾಗರಪಂಚಮಿ, ದೀಪಾವಳಿ, ಸಂಕ್ರಾಂತಿಯ ಜತೆಗೆ ರಂಜಾನ್ ಬಗೆಗೂ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ. ಪ್ರಾದೇಶಿಕ ವೈಶಿಷ್ಟ್ಯದ ಆನೂರು, ಪಲ್ಲಾಬಾದ್, ಮಾತೋಳಿ, ಇಂಗಳಗಿಯಲ್ಲಿ ಆಚರಣೆಯಲ್ಲಿರುವ ಪಲ್ಲಕ್ಕಿ ಉತ್ಸವಗಳ ಬಗೆಗೂ ವಿವರ ದೊರೆಯುತ್ತದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು